ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

"ದಾಸಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು"

ಒಂದು ಸಮೀಕ್ಷೆ

ಸಂಶೋಧನ ವಿದ್ಯಾರ್ಥಿ

ಸೈಯದ್ ಮುಯಿನ್

ಮಾರ್ಗದರ್ಶಕರು

ಪ್ರೊ. ಜಿ. ಅಶ್ವತ್ಥನಾರಾಯಣ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

೨೦೦೯

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

"ದಾಸಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು"

ಒಂದು ಸಮೀಕ್ಷೆ

ಸಂಶೋಧನ ವಿದ್ಯಾರ್ಥಿ
ಸೈಯದ್ ಮುಯಿನ್

ಮಾರ್ಗದರ್ಶಕರು
ಪ್ರೊ. ಜಿ. ಅಶ್ವತ್ಥನಾರಾಯಣ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು

೨೦೦೯

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮-೨೦೦೯ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ದಾಸಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು ಒಂದು ಸಮೀಕ್ಷೆ"** ಎಂಬ ನಿಬಂಧವನ್ನು ಪ್ರೊ.ಜಿ.ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/

(ಸೈಯದ್ ಮುಯಿನ್)
ಸಂಶೋಧನ ವಿದ್ಯಾರ್ಥಿ

ದಿನಾಂಕ : ೧-೧೦-೨೦೦೯.
ಸ್ಥಳ : ಬೆಂಗಳೂರು.

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2008-09 ಸಾಲಿನ ಎಂ.ಫಿಲ್. ಪದವಿಗಾಗಿ **'' ದಾಸ ಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು'' - ಒಂದು ಸಮೀಕ್ಷೆ** ಎಂಬ ಸಂಪ್ರಬಂಧವನ್ನು **ಸೈಯದ್ ಮುಯಿನ್** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿ ಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೧-೧೦-೨೦೦೮

ಸ್ಥಳ : ಬೆಂಗಳೂರು

ಮಾರ್ಗದರ್ಶಕರು

(ಪ್ರೊ.ಜಿ. ಅಶ್ವತ್ಥನಾರಾಯಣ)

ಪರಿವಿಡಿ	ಪುಟಸಂಖ್ಯೆ
ಅಧ್ಯಾಯ ೧ : ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ	೧- ೫
ಅಧ್ಯಾಯ ೨ : ವಾಲ್ಮೀಕಿ ರಾಮಾಯಣ ಮತ್ತು ಮಧ್ವರಾಮಾಯಣಗಳಲ್ಲಿ ಪ್ರಮುಖ ಪ್ರಸಂಗಗಳು	೬-೧೪
ಅಧ್ಯಾಯ ೩ : ಕೀರ್ತನೆಗಳಲ್ಲಿ ಬಾಲಕಾಂಡ ಮತ್ತು ಅಯೋಧ್ಯಾ ಕಾಂಡದ ಕಥಾ ಪ್ರಸಂಗಗಳು	೧೫-೪೯
ಅಧ್ಯಾಯ ೪ : ಕೀರ್ತನೆಗಳಲ್ಲಿ ಅರಣ್ಯಕಾಂಡ ಮತ್ತು ಕಿಷ್ಕಿಂದಾಕಾಂಡದ ಕಥಾಪ್ರಸಂಗಗಳು	೫೦-೭೧
ಅಧ್ಯಾಯ ೫ : ಕೀರ್ತನೆಗಳಲ್ಲಿ ಸುಂದರಕಾಂಡ, ಯುದ್ಧಕಾಂಡ ಮತ್ತು ಉತ್ತರಕಾಂಡದ ಕಥಾಪ್ರಸಂಗಗಳು	೭೨-೧೧೨
ಅಧ್ಯಾಯ ೬ : ಸಮಾರೋಪ	೧೧೩-೧೧೪
ಪರಾಮರ್ಶನ ಗ್ರಂಥಸೂಚಿ	

ಅಧ್ಯಾಯ – ೧
ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಪೀಠಿಕೆ:–

ಹರಿದಾಸ ಸಾಹಿತ್ಯವು ವಚನ ಸಾಹಿತ್ಯದಂತೆ ಅಚ್ಚ ಕನ್ನಡ ಸಾಹಿತ್ಯವಾಗಿದೆ. ಸಂಸ್ಕೃತ ಸಾಹಿತ್ಯ ಮತ್ತು ಹಳಗನ್ನಡ ಸಾಹಿತ್ಯ ಆಸ್ಥಾನ ಪಂಡಿತರ ಸಾಹಿತ್ಯವಾಗಿದ್ದಾಗ ಹಳಗನ್ನಡ ಕಾಲದಲ್ಲಿ ಜನಸಾಮಾನ್ಯರ ಪಾಲಿಗೆ ಧರ್ಮ, ಭಕ್ತಿ, ಸಾಹಿತ್ಯ ಕೈಗೆ ಎಟುಕದ ಕುಸುಮದಂತೆ ಆಗಿತ್ತು. ವಚನ ಸಾಹಿತ್ಯವು ಪುರಾಣೇತಿಹಾಸಗಳನ್ನು ತಮ್ಮ ಸಾಹಿತ್ಯದ ವಸ್ತುವನ್ನಾಗಿಸಿಕೊಂಡು ಬೆಳೆದುದ್ದನ್ನು ಕಂಡ ಹರಿದಾಸ ಸಾಹಿತ್ಯವು ಇದೇ ಮಾರ್ಗವನ್ನು ತುಳಿದು ನಡುಗನ್ನಡದ ಕಾಲಕ್ಕೆ ಫಲಪುಷ್ಪ ಕೊಡುವ ಕಲ್ಪವೃಕ್ಷವಾಗಿ ಬೆಳೆಯಿತು. ನಡುಗನ್ನಡ ಕಾಲಕ್ಕಾಗಲೇ ವಚನ ಸಾಹಿತ್ಯ, ಕೀರ್ತನ ಸಾಹಿತ್ಯದ ಮೂಲಕ ಜನಸಾಮಾನ್ಯರ ಪಾಲಿಗೆ ಧರ್ಮ, ಭಕ್ತಿ, ಸಾಹಿತ್ಯ ಎಟುಕುವಂತಾಯಿತು. ಶಿವಶರಣರು ಮತ್ತು ಹರಿದಾಸರು ಈ ದಿಸೆಯಲ್ಲಿ ಕನ್ನಡ ಸಂಸ್ಕೃತಿ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪೂರ್ವ ಮತ್ತು ಅಪಾರ.

ಹರಿದಾಸ ಸಾಹಿತ್ಯ ಖಚಿತ ಸ್ವರೂಪದಲ್ಲಿ ಶ್ರೀಪಾದರಾಜರಿಂದ ಮೊದಲ್ಗೊಂಡು ಗುರುಗೋವಿಂದ ವಿಠಲದಾಸರವರೆಗೆ ಇಂದಿಗೂ ನಿರಂತರ ಭಕ್ತಿವಾಹಿನಿಯಾಗಿ ಕನ್ನಡದಲ್ಲಿ ಪ್ರವಾಹಿಸುತ್ತಿದೆ. ಕೀರ್ತಿ, ಕೀರ್ತಿಸು ಪದಗಳಿಂದ ಹುಟ್ಟಿಕೊಂಡ ಕೀರ್ತನೆಗೆ ಸ್ತುತಿ, ಸ್ತೋತ್ರ ಎಂಬರ್ಥ, ಕೀರ್ತನೆ ಮಾಡುವವ ಹಾಡುವವ ಕೀರ್ತನಕಾರ, ಕೀರ್ತನೆ ಪದಕ್ಕೆ ಸಂವಾದಿಯಾಗಿ ಹರಿಕಥೆ ಪದವನ್ನು ಬಳಸುತ್ತಾರೆ. "ಕಲಿಯುಗದಿ ಗಾನದಲಿ ಕೇಶವಯೆನಲು ಕೈಗೂಡವನು ರಂಗವಿಠಲ" ಎಂದು ಶ್ರೀಪಾದರಾಜರ ನುಡಿಯಲ್ಲಿ "ಹರೇರ್ವಾ ಪ್ರಭೋರ್ವಾ ಕೀರ್ತನಂ ಸಂಕೀರ್ತನಂ" ಎಂದು ತಾಳ್ಲಪಾಕ ಅಣ್ಣಮಾಚಾರ್ಯರು ಸಂಕೀರ್ತನೆಗೆ ಹೇಳಿರುವ ಲಕ್ಷ್ಮಣದಲ್ಲಿ ಕೀರ್ತನ ಭಕ್ತಿಯ ಮಹತ್ವವನ್ನು ಅದರ ಅನಂತತೆಯನ್ನು ಕಾಣಬಹುದಾಗಿದೆ.

ವೇದ, ಉಪನಿಷತ್ತು, ಪುರಾಣಶಾಸ್ತ್ರ, ಭಾಗವತ, ಭಾರತ ಇತ್ಯಾದಿಗಳ ಅಧ್ಯಯನದಿಂದ ಶ್ರೀಹರಿಯ ಅನಂತ ಲೀಲೆಗಳನ್ನರಿತು ಅದನ್ನು ತನ್ನದೇ ಆದ ಭಾವ ಭಾಷೆಗಳಲ್ಲಿ ಭಕ್ತಿಯಿಂದ ಹಾಡುವವನೇ ಹರಿದಾಸ. ಭಗವಂತನ ಲೀಲೆಗಳಿಗೆ ಬೆರಗಾಗಿ ಅವನ ಮಹಾತ್ಮ್ಯಕ್ಕೆ ಮರುಳಾಗಿ ಅವನ ದಿವ್ಯಶಕ್ತಿಗೆ ತಲೆಬಾಗಿ ಸೃಷ್ಟಿಯ ಚರಾಚರ ವಸ್ತುಗಳಲ್ಲೂ ತನ್ನಲ್ಲೂ ಅವನನ್ನೇ ಕಾಣುವ ಹಂಬಲ ಮಾಡುವುದೇ ಭಕ್ತಿ ಎಂದು 'ಡಾ.ಅನಂತಪದ್ಮನಾಭ'ರವರು ಹೇಳಿದ್ದಾರೆ.

ಭಾರತದಲ್ಲಿ ಹಲವು ಭಕ್ತಿಪಂಥಗಳು ಕಾಲಕಾಲಕ್ಕೆ ಹುಟ್ಟಿ ನಮ್ಮ ಭಾರತೀಯ ಸಂಸ್ಕೃತಿಗೆ ಭಕ್ತಿ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನಿತ್ತಿವೆ. ಸಂತರಿಗೆ, ದಾಸರಿಗೆ, ಭಕ್ತರಿಗೆ ಇನ್ನು ಮೊದಲಾದವರಿಗೆ ಭಕ್ತಿಯೇ ಪಂಚಮ ಪುರುಷಾರ್ಥವಾಗಿದ್ದು ಕನ್ನಡ ಹರಿದಾಸರಲ್ಲಂತೂ ಭಕ್ತಿಯು ಮೋಕ್ಷಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ಶ್ರೀಹರಿ ಭಕ್ತಿಪಂಥಗಳಿಗೆ ರಾಮಾಯಣ, ಭಾರತ, ಉಪನಿಷತ್ತು, ವಿಷ್ಣುಪುರಾಣ, ಭಗವದ್ಗೀತೆ

ಮೊದಲಾದ ಹಲವಾರು ಪೌರಾಣಿಕ ಗ್ರಂಥಗಳೇ ಆಕರಗಳಾಗಿವೆ ಹಾಗೂ ಇವೇ ನಮ್ಮ ಭಾರತೀಯ ಸಂಸ್ಕೃತಿಯ ಆಧಾರಸ್ತಂಭಗಳಾಗಿವೆ.

'ಡಾ॥ ಟಿ.ಎನ್.ನಾಗರತ್ನ'ರವರು ಹರಿದಾಸ ಸಾಹಿತ್ಯದಲ್ಲಿ ಪೌರಾಣಿಕ ಮಹತ್ವದ ಬಗ್ಗೆ ವಿವೇಚಿಸುತ್ತ "ರಾಮಾಯಣ ಭಾಗವತ ಮತ್ತು ಭಾರತಗಳನ್ನು ಕುರಿತು ಪರಿಶೀಲಿಸಿ ಪೌರಾಣಿಕ ಸಂಪತ್ತಿನ ದೃಷ್ಟಿಯಿಂದ ಹರಿದಾಸ ಸಾಹಿತ್ಯವನ್ನು ಒಳಹೊಕ್ಕಿ ನೋಡಿದಾಗ ಸಾಮಾಜಿಕ ಸಮಸ್ಯೆಗಳನ್ನೂ, ಸದಾಚಾರಗಳನ್ನೂ, ಹೇಳುವ ಕೆಲವು ಕೀರ್ತನೆಗಳನ್ನು ಬಿಟ್ಟರೆ ಉಳಿದೆಲ್ಲ ಭಾಗವನ್ನು ಈ ಪುರಾಣಗಳ ಚೌಕಟ್ಟಿನೊಳಗೆ ಸೇರಿಸಬಹುದು. ಅಂತಹ ಭಾಗವನ್ನು ಈ ಪುರಾಣಗಳ ಚೌಕಟ್ಟಿನೊಳಗೆ ಸೇರಿಸಬಹುದು. ಅಂತಹ ಕೆಲವು ಕೀರ್ತನೆಗಳು ಸಹ ಹರಿಭಕ್ತಿಯ ಹಿನ್ನೆಲೆಯಲ್ಲಿ ಹಾಡಿದವುಗಳಾಗಿವೆ. ಆದ್ದರಿಂದ ಇಡೀ ದಾಸ ಸಾಹಿತ್ಯ ವಾಙ್ಮಯವನ್ನು ಕನ್ನಡ ಪೌರಾಣಿಕ ಸಂಪತ್ತು ಎಂದು ಕರೆಯಬಹುದು ಎಂಬ ಇವರ ಹೇಳಿಕೆಯು ಹರಿದಾಸ ಸಾಹಿತ್ಯವು ಪುರಾಣಗಳನ್ನೇ ತನ್ನ ವಿಷಯ ಸಂಪತ್ತನ್ನಾಗಿಸಿಕೊಂಡಿರುವುದನ್ನು ಅರಿಯಬಹುದು.

ನವವಿಧ ಭಕ್ತಿಗಳನ್ನು ಭಾಗವತದಲ್ಲಿ ಹೀಗೆ ಹೇಳಲಾಗಿದೆ

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದ ಸೇವನಂ

ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ (ಭಾಗವತ vii 5–23)

ಈ ನವವಿಧ ಭಕ್ತಿಗಳಲ್ಲಿ ಒಂದೊಂದು ಭಕ್ತಿಗೆ ಪ್ರಸಿದ್ಧರಾದ ಭಕ್ತರು ಪುರಾಣೇತಿಹಾಸಗಳಲ್ಲಿ ಬರುತ್ತಾರೆ. ಇವರನ್ನು ಆಧಾರವಾಗಿಟ್ಟುಕೊಂಡು ಹರಿದಾಸರು ಪಂಚವಿಧ ಭಾವವಿಧಗಳಾದ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ, ಶಾಂತ ಹರಿಸ್ತುತಿಯನ್ನು ಮಾಡಿರುವುದು ಕಂಡುಬರುತ್ತದೆ.

ಸಾವಿರಾರು ವರುಷಗಳಿಂದ ತಪಸ್ಸು ಮಾಡಿದರೂ ನಿಲುಕದ ತಾತ್ವಿಕ ಅನುಭವಗಳನ್ನು ದಾಸರು ಸರಳ ತಿಳಿಗನ್ನಡದಲ್ಲಿ ಸಾರಿದ್ದಾರೆ. ನೂರಾರು ಪುಟಗಳ ಪುರಾಣ ಓದಿದರೂ ಗ್ರಹಿತವಾಗದ ವಿಷಯವನ್ನು ದಾಸರು ತಮ್ಮ ಸಣ್ಣಪುಟ್ಟ ಕೀರ್ತನೆಗಳ ಮೂಲಕ ಅರ್ಥಗರ್ಭಿತವಾಗಿ ಹಾಡಿದ್ದಾರೆ. ತಾವು ಕಂಡುಕೊಂಡ ಜೀವನದ ಅನುಭವದ ಬೆಳಕನ್ನು ಹರಿನಾಮ ಮಹಿಮೆ, ನವವಿಧಭಕ್ತಿ, ಮಧುರಾದಿ ಪಂಚಭಾವ, ನವರಸಗಳ ಪ್ರತಿಪಾದನೆ, ಜಗತ್ತಿನ ರೀತಿನೀತಿಗಳ ಬಗ್ಗೆ ತತ್ವುಪದೇಶಗಳನ್ನು ಅವರ ಸಾಹಿತ್ಯದಲ್ಲಿ ಗುರುತಿಸಬಹುದಾಗಿದೆ.

ಉದ್ದೇಶ:–

ಹರಿದಾಸರ ಕೀರ್ತನೆಗಳಲ್ಲಿ ಕೃಷ್ಣನ ವರ್ಣನೆ, ಲೀಲೆ, ಕೃಷ್ಣನ ಚರಿತ್ರೆ, ಕೃಷ್ಣಭಕ್ತಿಗೆ ಸಿಕ್ಕ ಪ್ರಾಶಸ್ತ್ಯ ಉಳಿದ ಪೌರಾಣಿಕ ವ್ಯಕ್ತಿಗಳಿಗಿಲ್ಲ ಎನ್ನಬಹುದು. ಭಾರತ, ಭಾಗವತಗಳಿಗೆ ದೊರೆತ ಪ್ರಾಶಸ್ತ್ಯ ರಾಮಾಯಣಕ್ಕಿಲ್ಲ. ಆದರೆ 'ಹನುಮ'ರ ಪ್ರಾಶಸ್ತ್ಯದಿಂದಾಗಿ ಅಂದರೆ ದ್ವೈತ ಸಂಪ್ರದಾಯದಲ್ಲಿ

ವಾಯುದೇವರಿಗೆ ಅತ್ಯಂತ ಗುರುಸ್ಥಾನವಿದೆ. ವಾಯುದೇವರೇ ಮುಖ್ಯಪ್ರಾಣದೇವರು ಗುರುಗಳ ಮುಖಾಂತರವೆ ಭಕ್ತರಿಗೆ ಮುಕ್ತಿ

ಶ್ರೀಮದಾಚಾರ್ಯರು ವಾಯುದೇವರ ಮೂರನೇ ಅವತಾರ ಎಂಬ ಪ್ರತೀತಿ ಇದ್ದು ಹನುಮ ಭೀಮ–ಮಧ್ವ ಈ ಅವತಾರತ್ರಯ ಮತ್ತು ಶ್ರೀಹರಿಯ ದಶಾವತಾರ ಸ್ತುತಿಗಳ ಕಾರಣ ರಾಮಾಯಣಕ್ಕೆ ಸಾಕಷ್ಟು ಪ್ರಾಶಸ್ತ್ಯ ದೊರೆತಿದೆ.

ಹರಿದಾಸರಿಂದ ರಾಮಾಯಣ ಹಲವು ಪಾತ್ರಗಳ ಸ್ಥೂಲ ಸಂಕ್ಷೇಪ ಪರಿಚಯ ಕನ್ನಡಿಗರಿಗೆ ಕನ್ನಡದಲ್ಲಿ ಅತಿ ಸುಲಭವಾಗಿ ತಿಳಿಯುವಂತಾಯಿತು. ರಾಮಾಯಣದಲ್ಲಿ ಬರುವ ಎಲ್ಲಾ ವಿಷಯಗಳನ್ನು ತಿಳಿಯದೆ ಹೋದರು ಇವರ ಕೀರ್ತನೆಗಳಲ್ಲಿ ಬರುವ ಭಕ್ತರ ಭಕ್ತಿಯ ಪ್ರಸ್ತಾಪ ಅನುಸರಿಸಿದರೆ ಸಂಪೂರ್ಣ ರಾಮಾಯಣ ಮನವರಿಕೆಯಾಗುತ್ತದೆಯೆಂದರೆ ಅತಿಶಯೋಕ್ತಿಯಲ್ಲ. ಭಕ್ತಿ ಮಾಡುವುದರಿಂದ ಆಗುವ ಪ್ರಯೋಜನವೇನು, ಭಕ್ತಿ ಹೇಗೆ ಮಾಡಬೇಕು ಎಂಬುದಕ್ಕೆ ಹಲವು ಆದರ್ಶ ಭಕ್ತರ ನಿದರ್ಶನವನ್ನು ಕೊಟ್ಟು ಜನರಿಗೇ ಒಪ್ಪಿಗೆಯಾಗುವಂತೆ ರಾಮಾಯಣದಲ್ಲಿ ಆದರ್ಶ ಭಕ್ತರ ಪುನಃ ಪುನಃ ಕೊಡುತ್ತಾರೆ. ರಾಮಾಯಣದ ಈ ಪಾತ್ರಗಳ ಸಂಪೂರ್ಣ ವಿವರಣೆಯನ್ನು ಸಂಗ್ರಹವಾಗಿ ಸಂಗ್ರಹಿಸುವುದು ದಾಸರ ಶೈಲಿಯ ಗುಣಧರ್ಮಗಳಲ್ಲೊಂದು.

ಹರಿದಾಸ ಸಾಹಿತ್ಯದಲ್ಲಿ ರಾಮಾಯಣ ಕಥಾಭಾಗಕ್ಕೆ ಪ್ರಾಶಸ್ತ್ಯವಿದ್ದರೂ ಈವರೆಗಿನ ದಾಸಸಾಹಿತ್ಯದ ಸಂಶೋಧನ ಗ್ರಂಥಗಳಲ್ಲಿ ಮತ್ತು ಇತರ ಕೃತಿಗಳಲ್ಲಿ ರಾಮಾಯಣದ ಪ್ರಸಂಗಗಳನ್ನು ಅಧ್ಯಯನ ಮಾಡಲು ಈ ಸಂಪ್ರಬಂಧಗಳಲ್ಲಿ ಯತ್ನಿಸಲಾಗಿದೆ.

ಸ್ವರೂಪ:–

ಹರಿದಾಸರು ಹಾಡಿರುವ ಕೀರ್ತನೆಗಳಿಂದ ಸಂಗ್ರಹಿಸಿದ ರಾಮಾಯಣಕ್ಕೆ ಸಂಬಂಧಪಟ್ಟ ವಿಷಯವನ್ನು ಕ್ರೋಢಿಕರಿಸಲಾಗಿದ್ದು ಈ ಕೀರ್ತನೆಗಳನ್ನು ರಾಮಾಯಣದ ಕಾಂಡಾನುಸಾರವಾಗಿ ವಿಭಾಗಿಸಿ ವಿವೇಚಿಸಲಾಗಿದ್ದು, ಇಲ್ಲಿನ ಚರ್ಚೆ ಮತ್ತು ಅಧ್ಯಯನ ವಿಧಾನವು ಪ್ರಸ್ತುತ ಈ ಸಂಶೋಧನೆಗೆ ತೌಲನಿಕವಾದ ಸೈದ್ಧಾಂತಿಕ ಚೌಕಟ್ಟೊಂದನ್ನು ಒದಗಿಸಿಕೊಟ್ಟಿದೆ ಈ ಸಂಶೋಧನೆಯ ವಿವಿಧ ಆಯಾಮಗಳನ್ನು ಪ್ರಸಂಗಗಳನ್ನು ಅತ್ಯಂತ ಸೂಕ್ಷ್ಮವಾಗಿ ವಿವೇಚಿಸುವ ಉದ್ದೇಶಕ್ಕೆ ಅನುಗುಣವಾಗಿ ಸಂಶೊಧನಾ ವಿಧಾನವೊಂದನ್ನು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ರಾಮಾಯಣದ ಪ್ರಮುಖ ಪಾತ್ರಗಳು ಪ್ರಸಂಗಗಳನ್ನು ಹರಿದಾಸರು ದಶಾವತಾರ ಸ್ತುತಿ ನಿಂದಾಸ್ತುತಿ ಶ್ರೀಹರಿಲೀಲೆ, ಶ್ರೀಹರಿಯ ಕರುಣಾಭಾವವನ್ನು ಹಾಡುವ ಸಂದರ್ಭದಲ್ಲಿ ತಮ್ಮ ಕೀರ್ತನೆಗಳಲ್ಲಿ ಬಳಸಿಕೊಂಡಿದ್ದಾರೆ. ಇಂತಹ ಕೀರ್ತನೆಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಬೇರೆ ಬೇರೆ ಪ್ರಸಂಗಗಳ

ಪ್ರಸ್ತಾಪ ಬಂದಾಗ ಒಂದೇ ಕೀರ್ತನೆಯಲ್ಲಿನ ರಾಮಾಯಣದ ಹಲವು ಪ್ರಸಂಗಗಳನ್ನು ಪ್ರಸಂಗಗಳಿಗೆ ತಕ್ಕ ಹಾಗೆ ಪದೇ ಪದೇ ಬಳಸಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪವನ್ನು ವಿವರಿಸಿಕೊಳ್ಳಲಾಗಿದೆ. ಭಕ್ತಿ ಮತ್ತು ಕೀರ್ತನ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಶ್ರೀ ಮಧ್ವಾಚಾರ್ಯರು ವಿರಚಿತ ಮಧ್ವರಾಮಾಯಣ ಮತ್ತು ವಾಲ್ಮೀಕಿ ರಾಮಾಯಣದ ಪ್ರಮುಖ ಪ್ರಸಂಗಗಳಲ್ಲಿನ ವ್ಯತ್ಯಾಸ ಮತ್ತು ಈ ವ್ಯತ್ಯಾಸಕ್ಕೆ ಕಾರಣಗಳಾವುವು ಎಂಬ ವಿವರಣೆಗಳನ್ನು ಈ ಭಾಗದಲ್ಲಿ ತಾತ್ವಿಕ ಚರ್ಚೆಯ ಹಿನ್ನಲೆಯಾಗಿ ವಿವೇಚಿಸಲಾಗಿದೆ.

ಈ ಅಧ್ಯಯನದ ಪ್ರಬಂಧದ ಮೂರು ಅಧ್ಯಾಯಗಳಲ್ಲಿ ರಾಮಾಯಣದ ೭ ಕಾಂಡಗಳನ್ನು ತೌಲನಿಕವಾಗಿ ವಿವರಿಸಲಾಗಿದ್ದು ೨ ಅಧ್ಯಾಯಗಳಲ್ಲಿ ರಾಮಾಯಣದ ತಲಾ ಎರಡೆರಡು ಕಾಂಡಗಳನ್ನು ಮತ್ತೆ ೫ ನೇ ಅಧ್ಯಾಯದಲ್ಲಿ ೩ ಕಾಂಡಗಳನ್ನು ಅಳವಡಿಸಿಕೊಳ್ಳಲಾಗಿದೆ. ಅಧ್ಯಾಯ ೩ ರಿಂದ ಹರಿದಾಸರ ಕೀರ್ತನೆಗಳನ್ನು ರಾಮಾಯಣದ ಪ್ರಥಮ ಕಾಂಡವಾದ ಬಾಲಕಾಂಡದ ಪ್ರಮುಖ ಪ್ರಸಂಗಗಳಾದ ಶ್ರೀ ರಾಮಾವತಾರ, ಕೌಶಿಕ ಮುನಿ ಆಗಮನ, ಅಹಲ್ಯೋದ್ಧಾರ, ಸೀತಾಕಲ್ಯಾಣ, ಪರಶುರಾಮ ಗರ್ವಭಂಗ ಪ್ರಸಂಗಗಳನ್ನು ಮತ್ತು ದ್ವಿತೀಯ ಕಾಂಡವಾದ ಅಯೋಧ್ಯಾ ಕಾಂಡದಲ್ಲಿ ಶ್ರೀ ರಾಮ ವನವಾಸಕ್ಕೆ ಹೋದ ಪ್ರಸಂಗ, ಭರತನಿಗೆ ಪಾದುಕಾ ಪ್ರದಾನ ಪ್ರಸಂಗವನ್ನು ಈ ಅಧ್ಯಾಯದಲ್ಲಿ ಶ್ರೀ ಮದ್ವಾಲ್ಮೀಕಿ ರಾಮಾಯಣ ಶ್ರೀ ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಉಕ್ತವಾಗಿರುವ ಬಗೆ ಮತ್ತು ಅದನ್ನು ಹರಿದಾಸರು ಹಾಡಿರುವ ಬಗೆಯನ್ನು ವಿಶ್ಲೇಷಿಸಲಾಗಿದೆ.

೪ನೇ ಅಧ್ಯಾಯದಲ್ಲಿ ಅರಣ್ಯಕಾಂಡ, ಕಿಷ್ಕಿಂದಾಕಾಂಡದ ಪ್ರಸಂಗಗಳನ್ನು ಕೀರ್ತನೆಗಳ ಮೂಲಕ ವಿವರಿಸಲಾಗಿದೆ ಇಲ್ಲಿ ವನವಾಸ ಚಿತ್ರಣ, ಶೂರ್ಪಣಖಾ ಪ್ರಕರಣ, ಸೀತಾಪಹರಣ, ಶಬರಿಮೋಕ್ಷ ಮೊದಲಾದ ಪ್ರಸಂಗಗಳನ್ನು ಅರಣ್ಯಕಾಂಡದಲ್ಲೂ ಹನುಮತ್ಸಮಾಗಮ, ಸುಗ್ರೀವಸಖ್ಯ, ವಾಲಿವಧೆ, ಹನುಮನ ಅವತಾರ ವೃತ್ತಾಂತವನ್ನು, ಕಿಷ್ಕಿಂದಾ ಕಾಂಡದಲ್ಲಿ ಭಾಗದ ಅಧ್ಯಾಯದಲ್ಲಿ ಅವಲೋಕಿಸಲಾಗಿದೆ. ಸಮುದ್ರೋಲ್ಲಂಘನ, ಸೀತಾದರ್ಶನ, ಲಂಕಾದಹನ, ಇನ್ನಿತರ ಪ್ರಸಂಗಗಳನ್ನು ಸುಂದರಕಾಂಡದಲ್ಲಿ ವಿಭೀಷಣ ಶರಣಾಗತಿ ರಾಮಾಯಣ ಯುದ್ಧ ಕಾಂಡದಲ್ಲಿ ಮತ್ತು ರಾಮಾಯಣದ ಕೊನೆಯ ಕಾಂಡವಾದ ಉತ್ತರಕಾಂಡದಲ್ಲಿ ಸೀತಾಪರಿತ್ಯಾಗ, ಲವಕುಶ ಕಾಳಗ ಪ್ರಸಂಗಗಳನ್ನು ಸ್ಥೂಲವಾಗಿ ಅಧ್ಯಾಯ ೫ ರಲ್ಲಿ ಅಧ್ಯಯನ ಮಾಡಲಾಗಿದೆ ೬ ನೇ ಅಧ್ಯಾಯದಲ್ಲಿ ಸಂಶೋಧನೆಯ ಫಲಿತಾಂಶಗಳನ್ನು ನೀಡಲಾಗಿದೆ.

ವ್ಯಾಪ್ತಿ

ದಾಸಸಾಹಿತ್ಯದಲ್ಲಿ ಬರುವ ರಾಮಾಯಣ ಪ್ರಸಂಗಗಳಿಗೆ ಮಧ್ವಾಚಾರ್ಯರ 'ಮಧ್ವರಾಮಾಯಣ'ವೇ ಆಕರವಾಗಿದ್ದರೂ ವಾಲ್ಮೀಕಿ ರಾಮಾಯಣವನ್ನು ಮಧ್ವಾಚಾರ್ಯರ ಶಿಷ್ಯರೂ, ಹರಿದಾಸರೂ ಅನೇಕ

ಕಡೆಗಳಲ್ಲಿಪ್ರಸ್ತಾಪಿಸಿದ್ದಾರೆ. ಅಲ್ಲದೆ ಮಧ್ವಾಚಾರ್ಯರು ಸ್ವತಂತ್ರ ವಿವೇಚನೆ. ವಿಮರ್ಶೆಗಳನ್ನು ಮಾಡಿದ್ದರೂ ಕಥಾ ನಿರೂಪಣೆಯಲ್ಲಿ ವಾಲ್ಮೀಕಿ ರಾಮಾಯಣವನ್ನೇ ಮಧ್ವರಾಮಾಯಣ ಹೋಲುತ್ತದೆ. ಈ ಕಾರಣದಿಂದ ಹರಿದಾಸರ ಕೀರ್ತನೆಗಳಲ್ಲಿ ಕಂಡುಬರುವ ರಾಮಾಯಣ ಕಥಾ ಪ್ರಸಂಗಗಳನ್ನು ವಾಲ್ಮೀಕಿ ರಾಮಾಯಣ ಮತ್ತು ಮಧ್ವ ರಾಮಾಯಣಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ.

ಈ ಅಧ್ಯಯನದಲ್ಲಿ ಪ್ರಸ್ತಾಪಿಸಲಾಗಿರುವ ಹಲವು ಪ್ರಸಂಗಗಳು ವಾಲ್ಮೀಕಿ ಮತ್ತು ಆಚಾರ್ಯರ ರಾಮಾಯಣಗಳೆರಡರಲ್ಲೂ ಕಾಣಸಿಗುವುದಿಲ್ಲ ಹರಿದಾಸರು ತಮ್ಮ ಅಧಿಕ ಓದಿನಿಂದಾಗಿ ಬೇರೆ ಬೇರೆ ಮೂಲಗಳಿಂದ ರಾಮಾಯಣದ ಹೊಸ ಅಂಶಗಳನ್ನು ತಮ್ಮ ಕೀರ್ತನೆಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಹರಿದಾಸ ಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು ಎಂಬ ಅಧ್ಯಯನ ವಿಷಯವಾದ್ದರಿಂದ ಇಲ್ಲಿ ಹರಿದಾಸರು ಹಾಡಿರುವ ರಾಮಾಯಣ ಎಲ್ಲಾ ಭಾಗಗಳನ್ನು ಅಧ್ಯಯನ ವಿಷಯವಾಗಿ ಆಯ್ದುಕೊಳ್ಳಲಾಗಿದೆ. ಆದರೆ ಇಲ್ಲಿ ಕನಕದಾಸರ 'ರಾಮಧಾನ್ಯ ಚರಿತೆ'ಯನ್ನು ಅಧ್ಯಯನ ವಿಷಯಕ್ಕೆ ಒಳಪಡಿಸಿಲ್ಲ. ಕಾರಣ ಇದು ಸ್ವಕಲ್ಪಿತ ಕಥಾನಿರೂಪಣೆಯಾದ್ದರಿಂದ ಮತ್ತು ಈ ಕೃತಿಯಲ್ಲಿ ರಾಮಾಯಣದ ಅಂಶಗಳೇನು ಕಂಡುಬರುವುದಿಲ್ಲ ಕೇವಲ ಇದೊಂದು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ದಾಸರ ಪ್ರಯತ್ನವಷ್ಟೇ. ಆದರೆ ಈ ಅಧ್ಯಯನ ಪ್ರಬಂಧದಲ್ಲಿ ಜಕ್ಕಪ್ಪಯ್ಯನವರ 'ಸುಲೋಚನಾ ಪ್ರಲಾಪವನ್ನು ಚರ್ಚಿಸಲಾಗಿದೆ. ಕಾರಣ ಇದು ಸ್ವಕಲ್ಪಿತವಲ್ಲ ಪುರಾಣೇತಿಹಾಸಗಳಲ್ಲಿ ಉಕ್ತವಾಗಿರುವ ವಿಷಯವೇ ಆಗಿದೆ. ಹಾಗೆಯೇ ಲವಕುಶ ಕಾಳಗವನ್ನು ಈ ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ.

ಐಹೊಳೆ ವೆಂಕಟೇಶದಾಸರು ತಮ್ಮ ಶ್ರೀರಾಮ ಪಾರಿಜಾತ ಎಂಬ ದೀರ್ಘಕೃತಿಯಲ್ಲಿ ರಾಮಾಯಣದ ಉತ್ತರಕಾಂಡದಲ್ಲಿ ಬರುವ ರಾವಣಾದಿಗಳ ವೃತ್ತಾಂತ, ರಾವಣನ ತಪಸ್ಸಿನ ಪ್ರಭಾವ, ಅವನ ಪರಾಕ್ರಮಗಳನ್ನು ದೀರ್ಘವಾಗಿ ರಚಿಸಿದ್ದಾರೆ. ಈ ಸಂಪ್ರಬಂಧದಲ್ಲಿ ಈ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸಿಲ್ಲ ಕಾರಣ ಎಂ.ಫಿಲ್ ಅಧ್ಯಯನದ ಚೌಕಟ್ಟು ತುಂಬ ಕಿರಿದಾಗಿರುವುದರಿಂದಲೂ ಪುಟಗಳ ಮಿತಿಯಿಂದ ಮೇಲಿನ ರಾವಣಾದಿಗಳ ವೃತ್ತಾಂತಗಳನ್ನು ಕೈ ಬಿಡಲಾಗಿದೆ.

ಹರಿದಾಸ ರಚನೆಗಳು ವೈವಿಧ್ಯಮಯವಾಗಿದೆ ಕೀರ್ತನೆ, ಸುಳಾದಿ, ಉಗಾಭೋಗ, ದಂಡಕ, ವೃತ್ತನಾಮ ಇತ್ಯಾದಿ ಮಾಧ್ಯಮಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಈ ಸಂಪ್ರಬಂಧದಲ್ಲಿ ಕೀರ್ತನೆಗಳಲ್ಲಿ ಬಂದಿರುವ ರಾಮಾಯಣ ಪ್ರಸಂಗಗಳನ್ನಷ್ಟೇ ಪರಿಶೀಲನೆಗೆ ತೆಗೆದುಕೊಳ್ಳಲು ಪ್ರಯತ್ನಿಸಿದ್ದರೂ ರಾಮಾಯಣದ ಪ್ರಸಂಗಗಳ ನಿರೂಪನೆಗೆ ಕೀರ್ತನೆಗಳು ಅಶಕ್ತವಾದ ಕೆಲವು ಕಡೆ ಸುಳಾದಿ ಉಗಾಭೋಗಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಾಯ:೨

ವಾಲ್ಮೀಕಿ ರಾಮಾಯಣ ಮತ್ತು ಮಧ್ವರಾಮಾಯಣದಲ್ಲಿರುವ ಪ್ರಮುಖ ಪ್ರಸಂಗಗಳು

ಶ್ರೀಮಧ್ವಾಚಾರ್ಯರು ರಚಿಸಿರುವ 'ಮಹಾಭಾರತ ತಾತ್ಪರ್ಯ' ನಿರ್ಣಯದಲ್ಲಿರುವ ರಾಮಾಯಣದ ಕಥಾಭಾಗವು ಮೂಲ ರಾಮಾಯಣವನ್ನೇ ಅನುಸರಿಸಲಾಗಿದೆ ಎಂದು ಹೇಳಿದ್ದಾರೆ. ಇವರು ಹೇಳುವ ಕೆಲವು ಸಂಗತಿಗಳು ವಾಲ್ಮೀಕಿ ರಾಮಾಯಣದಲ್ಲಿ ಕಾಣಸಿಗದು. ಆದರೆ ಬಹುಮಟ್ಟಿಗೆ ವಾಲ್ಮೀಕಿ ರಾಮಾಯಣದ ಕಥಾಸರಣಿಯೇ ಮಧ್ವರಾಮಾಯಣದಲ್ಲಿ ಕಂಡು ಬರುತ್ತದೆ. ಇಲ್ಲಿ ಶ್ರೀಮಧ್ವಾಚಾರ್ಯರು ವಾಲ್ಮೀಕಿ ರಾಮಾಯಣದ ಸಂಗ್ರಹ ರೂಪ ನೀಡಿದ್ದಾರೆ. ಶ್ರೀಹರಿಯ ಅವತಾರಗಳಾದ ಶ್ರೀರಾಮನ ಕರ್ತವ್ಯ ಪರಿಪಾಲನೆಯ ಕಾರ್ಯಗಳ ರೀತಿನೀತಿಗಳ ಬಗ್ಗೆ, ಶ್ರೀಕೃಷ್ಣನ ಲೀಲೆಗಳ ಬಗ್ಗೆ ಶ್ರೀಮದಾಚಾರ್ಯರ ಕಾಲದಲ್ಲಿ ತುಂಬಾ ಗೊಂದಲ, ಟೀಕೆ, ಆಕ್ಷೇಪಗಳು ಇದ್ದುದದ್ದನ್ನು ಕಂಡ ಇವರು ತಮ್ಮ 'ಮಹಾಭಾರತ ತಾತ್ಪರ್ಯ ನಿರ್ಣಯ'ದಲ್ಲಿ ಸೂಕ್ತ ಸಮಾಧಾನ ನೀಡಿದ್ದಾರೆ. ಪುರಾಣೇತಿಹಾಸಗಳ ಆಧಾರದ ಮೂಲಕ ಹೊಸ, ಅರ್ಥ, ಹೊಸ ದೃಷ್ಟಿಕೋನವನ್ನು ತಮ್ಮ ಕೃತಿಯಲ್ಲಿ ರಾಮಾಯಣಕ್ಕೆ ಹೊಸ ಪರಿವೇಶವನ್ನು ಕಲ್ಪಿಸಿದ್ದಾರೆ. ಈ ರಾಮಾಯಣದ ಒಂದೊಂದು ಪ್ರಮುಖ ಪ್ರಸಂಗಗಳು ಕೆಳಗಿನಂತೆ ವಿವರಿಸಲಾಗಿದೆ.

ರಾಮ-ಪರಶುರಾಮರ ಸಂಘರ್ಷ

ವಾಲ್ಮೀಕಿ ರಾಮಾಯಣದ ಬಾಲಕಾಂಡದಲ್ಲಿ ಬರುವ ರಾಮ-ಪರಶುರಾಮರ ಸಂಘರ್ಷವೂ ಓದುಗರಲ್ಲಿ ಭಕ್ತರಲ್ಲಿ ಮುಜುಗರವನ್ನುಂಟುಮಾಡುತ್ತದೆ. ಶ್ರೀಹರಿಯ ಅವತಾರಗಳೇ ಆದ ರಾಮ-ಪರಶುರಾಮರೊಳಗೆ ನಡೆಯುವ ವಾಗ್ವಾದ, ಪರಶುರಾಮನ ಸೋಲು, ಅವನ ತಪಸ್ಸು ಬಲವನ್ನು ರಾಮನು ಬಾಣದಿಂದ ನಾಶಪಡಿಸುವುದು ಇವೆಲ್ಲ ಸಾಮಾನ್ಯ ಓದುಗರಿಗೆ ಬಗೆಹರಿಸಲಾಗದ ಸಮಸ್ಯೆಯಾಗಿತ್ತು.

ವಾಲ್ಮೀಕಿ ರಾಮಾಯಣದ ಪ್ರಕಾರ "ರಾಮನು ರಾವಣಾದಿಗಳನ್ನು ಕೊಲ್ಲಲು ಶಕ್ತ" ಎಂದು ಸಾಬೀತುಪಡಿಸಲು ರಾಮ-ಪರಶುರಾಮರೊಡನೆ ಸಂಘರ್ಷ ನಡೆಯುತ್ತದೆ. ಆದರೆ ವಿಷ್ಣುವಿನ ಅವತಾರಗಳಲ್ಲಿಯೇ ಸಂಘರ್ಷ ನಡೆಸಿ ರಾಮನ ಬಲಾಬಲವನ್ನು ತಿಳಿಯುವ ಅವಶ್ಯಕತೆ ಏನಿತ್ತು? ಅವರಲ್ಲಿ ರಾಮನೇ ಗೆದ್ದದ್ದೇಕೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಯಾವುದೇ ವಿವರಣೆ ದೊರೆಯುವುದಿಲ್ಲ. ಇದಕ್ಕೆಲ್ಲ ಶ್ರೀಮಧ್ವಾಚಾರ್ಯರು ಅರ್ಥಪೂರ್ಣ ವಿವರಣೆಯನ್ನು ಈ ರೀತಿ ನೀಡಿದ್ದಾರೆ.

ಪುರಾಽತುಲೋ ನಮ ಮಹಾಸುರೋಽಭೂತ್
ವರಾತ್ ಸ ತು ಬ್ರಹ್ಮಣ ಅಪಲೋಕತಾಮ್
ಪುನಶ್ಚ ತಂ ಪ್ರಾರಾ ಜಗದ್ಗುರುರ್ಯವಾ

ಹರಿರ್ಜಿತಃ ಸ್ಯಾದ್ಧಿ ತದೈವ ವಧ್ಯಸೇ ⁽ⁱ⁾

ಅಃ-"ಹಿಂದೆ ಅತುಲನೆಂಬ ಮಹಾದೈತ್ಯನಿದ್ದನು. ಅವನು ಬ್ರಹ್ಮನ ವರದಿಂದಾಗಿ ಲೋಕಮಯತ್ವವನ್ನು ಸಂಪಾದಿಸಿಕೊಂಡನು. ವರಪಿತ್ತ ಮೇಲೆ ಬ್ರಹ್ಮ ಹೇಳಿದ ಹರಿಯು ಯಾವಾಗ ಸೋಲುವನೋ ಆಗಲೇ ಸಾಯುವಿ."

ಹರಿಯು ಸೋಲುವುದಿಲ್ಲ ತನಗೆ ಎಂದಿಗೂ ಮರಣ ಬರುವುದಿಲ್ಲವೆಂದು ಆತ ಲೋಕಕಂಟಕನಾಗಿ ವರ್ತಿಸತೊಡಗಿದ. ಬ್ರಹ್ಮನ ವರವನ್ನು ಉಳಿಸಿಕೊಂಡು ದೈತ್ಯರ ಕುತಂತ್ರವನ್ನು ಭಂಗಮಾಡಲು ಹರಿಯು ತಾನು ಸೋತವನಂತೆ ನಟಿಸಿ ತನ್ನ ಸೋಲಿನಿಂದ ಅತುಲನ ಸಂಹಾರಕ್ಕೆ ಕಾರಣನಾಗುತ್ತಾನೆ. ಬ್ರಹ್ಮದೇವರ ವರದಿಂದ ಶ್ರೀಹರಿಯ ಅವತಾರವಾದ ಪರಶುರಾಮನ ಹೊಟ್ಟೆಯಲ್ಲಿಯೇ ಆಶ್ರಯವನ್ನು ಪಡೆದಿದ್ದ ತಪೋಮಯನೂ, ಲೋಕಮಯನೂ ಎನಿಸಿಕೊಂಡ ಅತುಲನನ್ನು ಶ್ರೀರಾಮನು ಸಂಹರಿಸುವುದರ ಮೂಲಕ ಪರಶುರಾಮನಲ್ಲಿದ್ದ ತಪೋಬಲವನ್ನು ನಿಗ್ರಹಿಸಲಾಗಿ ಗರ್ವಭಂಗವಾಗಿ ಸೋತ ಪರಶುರಾಮನು ತನ್ನ ಅವತಾರಕಾರ್ಯ ಇಲ್ಲಿಗೆ ಸಮಾಪ್ತಗೊಳಿಸಿದನು.

ಕಾಕಾಸುರ ವಧಾ ಪ್ರಸಂಗ :-

ಮೂಲ ವಾಲ್ಮೀಕಿ ರಾಮಾಯಣದಲ್ಲಿ ಪ್ರಕ್ಷಿಪ್ತ ಕಥಾಭಾಗವೆಂದು ಹೇಳಲಾಗುವ ಕಾಕಾಸುರ ವೃತ್ತಾಂತವನ್ನು ಸುಂದರಕಾಂಡದಲ್ಲಿ ಸೀತೆಯು ರಾಮನು ತನ್ನನ್ನು ಗುರುತಿಸುವುದಾಗಿ ಹನುಮಂತನಿಗೆ ಹೇಳುತ್ತಾಳೆ. ಚಿತ್ರಕೂಟ ಪರ್ವತದಲ್ಲಿ ಒಂದುದಿನ ರಾಮಸೀತೆ ಏಕಾಂತ, ಪ್ರಶಾಂತ ವಾತಾವರಣದಲ್ಲಿ ವಿಹರಿಸುತ್ತಿದ್ದಾಗ ಪಕ್ಷಿಗಳಲ್ಲಿ ಮೇಲೆನಿಸಿಕೊಂಡ ಕಾಗೆಯು (ಇಂದ್ರನ ಮಗ) ಮಾಂಸವನ್ನು ಬಯಸಿ ಸೀತೆಯ ಸ್ತನಭಾಗವನ್ನು ಕಚ್ಚಿ ಘಾಸಿಗೊಳಿಸಿದಾಗ ಸೀತೆಯ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದ ರಾಮನ ಮುಖದ ಮೇಲೆ ರಕ್ತದ ತೊಟ್ಟುಗಳು ಚಿಮ್ಮಿ ರಾಮ ನಿದ್ರೆಯಿಂದ ಎಚ್ಚೆತ್ತು ಆ ಕಾಗೆಯ ಮೇಲೆ ಕೋಪಗೊಂಡು ಒಂದು ದರ್ಭೆಯನ್ನು ಕಿತ್ತು ಬ್ರಹ್ಮಾಸ್ತ್ರ ಮಂತ್ರದಿಂದ ಅಭಿಮಂತ್ರಿಸಿ ಕಾಗೆಯ ಮೇಲೆ ಪ್ರಯೋಗಿಸಿದ ಆ ದರ್ಭೆಯು ಉರಿಯುತ್ತಿರುವ ಕಾಲಾಗ್ನಿಯಂತೆ ಆ ಕಾಗೆಯನ್ನು ಆಕಾಶ ಮಾರ್ಗದಿಂದ ಹಿಮ್ಮೆಟ್ಟಿಸಿತು. ಆ ವಾಯಸವು ಸಮಸ್ತ ಮೂರು ಲೋಕಗಳನ್ನೂ ಸುತ್ತಿ ತಂದೆ (ಇಂದ್ರ)ಯಿಂದಲೂ, ದೇವತೆಗಳಿಂದಲೂ, ಮಹರ್ಷಿಗಳಿಂದಲೂ ನಿರಾಶ್ರಿತನಾಗಿ ಶ್ರೀರಾಮನನ್ನೇ ಆಶ್ರಿಯಿಸಿದಾಗ ಶರಣಾಗತ ರಕ್ಷಕನಾದ ರಾಮ ಆ ಕಾಗೆಯನ್ನು ವ್ಯರ್ಥಗೊಳಿಸಲು ಸಾಧ್ಯವಿಲ್ಲ ಅದಕ್ಕೆ ಉಪಾಯವನ್ನು ಹೇಳು ಎಂದು ಕೇಳಲು "ನಿನ್ನ ಅಸ್ತ್ರವು ನನ್ನ ಬಲಗಣ್ಣನ್ನು ಕತ್ತರಿಸಲಿ' ಎಂದುತ್ತರ ಹೇಳಲು ಆಗ ಆ ಬ್ರಹ್ಮಾಸ್ತ್ರ ಕಾಗೆಯ ಬಲಗಣ್ಣನ್ನು ಕತ್ತರಿಸಿತು. ಬಲಗಣ್ಣನ್ನು ಕೊಟ್ಟು ತನ್ನ ಪ್ರಾಣರಕ್ಷಣೆ ಮಾಡಿಕೊಂಡು ತನ್ನ ವಾಸಸ್ಥಾನಕ್ಕೆ ಹೊರಟುಹೋಗುತ್ತದೆ.

ಆದರೆ ಇಲ್ಲಿ ಇಂದ್ರನ ಮನಗು ಏತಕ್ಕೆ ಕಾಗೆಯ ರೂಪದಲ್ಲಿ ಬಂದು ಸೀತೆಯನ್ನು ಪೀಡಿಸಿದ. ರಾಮನು ಬ್ರಹ್ಮಾಸ್ತ್ರ ಪ್ರಯೋಗಿಸಿದಾಗ ತನ್ನ ಕಣ್ಣನ್ನೇ ಏತಕ್ಕೆ ಬಲಿಕೊಟ್ಟಿತು ಎಂಬುದಕ್ಕೆ ಯಾವುದೇ ಕಾರಣವಾಗಲೀ, ಈ ಪ್ರಶ್ನೆಗಳಿಗೆ ಯಾವುದೇ ಉತ್ತರವಾಗಲೀ ಇಲ್ಲಿ ದೊರೆಯದು. ಆದರೆ ಶ್ರೀಮದಾಚಾರ್ಯರು ತಮ್ಮ ನಿರ್ಣಯದಲ್ಲಿ ಈ ಎಲ್ಲಾ ಶಂಕೆಗಳಿಗೆ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಿದ್ದಾರೆ.

ಈ ಕ್ಕಾಕಾಸುರ ವೃತ್ತಾಂತವು ವಾಲ್ಮೀಕಿ ರಾಮಾಯಣದ ಸುಂದರ ಕಾಂಡದಲ್ಲಿ ಬರುತ್ತದೆ. ಆದರೆ ಅದು ನಡೆದದ್ದು ಚಿತ್ರಕೂಟದಲ್ಲಿದ್ದಾಗ (ಅರಣ್ಯಕಾಂಡ) ಎಂಬ ಮಾತು ಅಲ್ಲಿಯೇ ಬಂದಿದೆ. ಆದ್ದರಿಂದ ಶ್ರೀಮದಾಚಾರ್ಯರು ಅದನ್ನು ನಡೆದ ಕಾಲದಲ್ಲೇ ಒಟ್ಟು ೮ ಶ್ಲೋಕಗಳಲ್ಲಿ ನಿರ್ದಿಷ್ಟ ಅರ್ಥಸಮೇತವಾಗಿ ಈ ರೀತಿ ನಿರೂಪಿಸಿದ್ದಾರೆ.

ಪಕ್ಷಿಗಳಲ್ಲಿ ಕಾಗೆಯು ಬಹುಕಾಲ ಬದುಕುವುದು ಮತ್ತು ಬಹಳವಾಗಿ ಬಲಿ ಅನ್ನವನ್ನು ಪಡೆಯುವುದು ಎಂಬ ಕಾರಣದಿಂದ ಜಯಂತನು ಕಾಗೆಯ ಜನ್ಮವನ್ನು ಬಯಸಿದ್ದನು ಎಂಬ ಕಥೆ ಪುರಾಣಗಳಲ್ಲಿ ಉಕ್ತವಾಗಿದೆ. ಈ ರೀತಿ ಕಾಗೆ ಜನ್ಮ ಪಡೆದಿದ್ದ ಇಂದ್ರನ ಮಗ ಜಯಂತನು ಅಸುರರ ಲಕ್ಷಣಗಳಾದ ಕಾಮ ಮತ್ತು ಹಿಂಸೆಯನ್ನು ಹೊಂದಲು ಕಾರಣ ಅವನೊಳಗಿದ್ದ 'ಕುರಂಗ'ನೆಂಬ ದೈತ್ಯನ ಆವೇಶವಾಗಿತ್ತು. ಈ ರಾಕ್ಷಸನಿಗೆ ಶಿವನಿಂದ ಈ ಪ್ರಕಾರ ವರವಿದ್ದಿತ್ತು.

ಭವಿಷ್ಯತಾಮಪ್ಯಥ ಯಾವ ದೇವ ದ್ವಿನೇತ್ರ ಕಾಕಕುಲೋದ್ಭವಾ ನಾಮ್
ತಾವತ್ ತದಕ್ಷ್ಯಸ್ಯ ಕುರಂಗನಾಮ್ನ ಶಿವೇನ ದತ್ತಂ ದಿತಿಜಸ್ಯಚಾಕ್ಷಯಮ್ [೨]

ಕಾಕಕುಲದಲ್ಲಿ ಹುಟ್ಟುವ ಮುಂದಿನ ಕಾಗೆಗಳಿಗೆ ಎಲ್ಲಿಯವರೆಗೂ ಎರಡು ಕಣ್ಣುಗಳು ಇರುವವೋ ಅಲ್ಲಿಯವರೆಗೂ ಕಾಗೆಗಳ ಕಣ್ಣಿನಲ್ಲಿರುವ ಅಸುರನಿಗೆ ನಾಶ ಬರದಿರಲಿ ಈ ರೀತಿಯಾಗಿ ಶಿವನಿಂದ ವರವು ಕುರಂಗನೆಂಬ ದೈತ್ಯನಿಗೆ ಕೊಡಲ್ಪಟ್ಟಿದ್ದಿತು.

ಈ ವರದಂತೆ ಕುರಂಗನು ಎಲ್ಲಾ ಕಾಕಕುಲದ ಕಾಗೆಗಳ ಕಣ್ಣಿನಲ್ಲಿ ವಾಸವಾಗಿದ್ದು ಜಯಂತನು ಕಾಗೆ ಜನ್ಮವೆತ್ತಾಗ ಕುರಂಗನ ಅಸುರೀ ಲಕ್ಷಣಗಳಿಂದ ಪಾರಾಗದೆ ಅಸುರಾವೇಶದಿಂದ ಸೀತೆಯ ಸ್ತನ ಕುಕ್ಕುತ್ತಿರುವಾಗ ಈ ಕೃತ್ಯಕ್ಕೆ ಕಾರಣ ಕಾಗೆಯ ಕಣ್ಣಲ್ಲಿ ವಾಸವಾಗಿರುವ 'ದೈತ್ಯ' ಕುರಂಗನೆಂದರಿತು. ಶ್ರೀರಾಮ ತೃಣದ ಮೂಲಕ ಬ್ರಹ್ಮಾಸ್ತ್ರ ಉಪಯೋಗಿಸಿದಾಗ ಆ ಕಾಗೆಯು ಮೂರು ಲೋಕಗಳನ್ನು ಸುತ್ತಿ ದೇವಾನುದೇವತೆಗಳಿಂದ ಸಹಾಯ ಪಡೆಯದೆ ಮತ್ತೆ ರಾಮನಲ್ಲಿ ಮೊರೆಹೊಕ್ಕಿತು. ಆ ರಾಮನು ಕಾಗೆಯ ಒಂದು ಕಣ್ಣನ್ನು ನಾಶಗೊಳಿಸುವ ಮೂಲಕ ಆ ರಾಕ್ಷಸನನ್ನು ಸುಟ್ಟುಬೂದಿಗೊಳಿಸುತ್ತಾನೆ.

ಸೀತಾಪಹರಣ :–

ಸೀತಾಪಹರಣ ವಿಚಾರದಲ್ಲಿ ಮಧ್ವಾಚಾರ್ಯರು ವಾಲ್ಮೀಕಿ ರಾಮಾಯಣವನ್ನು ಅನುಸರಿಸದೆ ಇರುವುದನ್ನು ನೋಡಬಹುದು.

ದೇವ್ಯಾ ಸಮೀಪಮಥ ರಾವಣ ಅಸಸಾದ ಸಾಽದೃಶ್ಯ ತಾಮಗಮದಪ್ಯವಿಷಹ್ಯಶಕ್ತಿಃ।

ಸೃಷ್ಟ್ವಾಽಽತ್ಮನಹ ಪ್ರತಿಕೃತಿಂ ಪ್ರಯಯೌಚ ಶೀಘ್ರಂ ಕೈಲಾಸಮರ್ಚಿತಪದಾ ನ್ಯವಸಚ್ಛಿ ವಾಭ್ಯಾಮ್

ತಸ್ಯಾಸ್ತು ತಾಂ ಪ್ರತಿಕೃತಿ ಪ್ರವಿವೇಶ ಶಕ್ರೋ ದೇವಾಶ್ಚ ಸನ್ನಿಧಿಯುತಾಂ ವಯವಹಾರಸಿದ್ಧ್ಯೈ [8]

ಅಃ:–"ಆ ವೇಳೆಗೆ ಸೀತೆ ಬಳಿಗೆ ರಾವಣನು ಬಂದ ಒಡನೆ ಸೋಲರಿಯದ ಮಹಾಶಕ್ತಿಯಾದ ಸೀತೆ ತನ್ನ ಪ್ರತಿರೂಪವನ್ನು ಆಶ್ರಮದಲ್ಲಿ ಸೃಷ್ಟಿಸಿ ತಾನು ಶೀಘ್ರವಾಗಿ ಕೈಲಾಸಕ್ಕೆ ತೆರಳಿಬಿಟ್ಟಳು. ಆ ಕೈಲಾಸದಲ್ಲಿ ಶಿವ, ಪಾರ್ವತಿಯಿಂದ ಸನ್ಮಾನಿತಳಾಗಿ ನೆಲೆಸಿದಳು.ಸೀತೆಯ ಪ್ರತಿಯನ್ನು ಇಂದ್ರನು ಪ್ರವೇಶಿಸಿದನು. ವ್ಯವಹಾರ ನಿರ್ವಹಣೆಗೆ ತಾನೂ ಅಲ್ಲಿ ಸನ್ನಿಹಿತಳಾದಳು. ರಾವಣ ಆ ಆಕೃತಿಯನ್ನು ಹೊತ್ತು ನಡೆದ."

ಈ ಮೇಲಿನ ಎರಡು ಶ್ಲೋಕಗಳಲ್ಲಿ ಶ್ರೀಮದಾಚಾರ್ಯರು ಹೇಳಿರುವ ವಿಚಾರವು ಕೂರ್ಮ, ವರಾಹ, ಅಗ್ನಿ, ಬ್ರಹ್ಮವೈವರ್ತ, ಭವಿಷ್ಯೋತ್ತರ, ಸಂಗ್ರಹ ರಾಮಾಯಣ ಮೊದಲಾದ ಪುರಾಣಗಳಲ್ಲೂ ಬಂದಿದೆ. ವಾಲ್ಮೀಕಿ ರಾಮಾಯಣದಲ್ಲಿರುವ "ಪ್ರವೇಕ್ಷ್ಯಾಮಿ ಹುತಾಶನಂ" ಎಂಬ ಪದವು ಈ ಮೇಲಿನ ಅರ್ಥವೇ ನೀಡುತ್ತದೆ ಎಂದು ಶ್ರೀಸತ್ಯ ಧರ್ಮತೀರ್ಥರು ತಮ್ಮ ವಾಲ್ಮೀಕಿ ವ್ಯಾಖ್ಯಾನ ರಾಮಾಯಣದಲ್ಲಿ ಸ್ಪಷ್ಟಪಡಿಸಿದ್ದಾರೆ.

ವಾಲ್ಮೀಕಿ ರಾಮಾಯಣದ ರಾಮ-ಸೀತೆ ನರರೂಪದಲ್ಲಿ ಅವತರಿಸಿದ ವಿಷ್ಣು ಹಾಗೂ ಲಕ್ಷ್ಮಿಯಾಗಿದ್ದು ಇಲ್ಲಿ ಇವರು ಎಲ್ಲಿಯೂ ತಮ್ಮ ಎಲ್ಲೆ ಮೀರದೆ ಸಾಮಾನ್ಯ ಮನುಷ್ಯರಂತೆ ಸುಖದುಃಖವನ್ನನುಭಿಸುತ್ತಾರೆ. ಯುದ್ಧಕಾಂಡದ ಕೊನೆಯ ಭಾಗದಲ್ಲಿ ಇವರಿಗೆ ತಮ್ಮ ಅವತಾರದ ಬಗ್ಗೆ ತಿಳಿಯುತ್ತದೆ. ಆದರೆ ಶ್ರೀಮದಾಚಾರ್ಯರ 'ಮಹಾಭಾರತ ತಾತ್ಪರ್ಯ ನಿರ್ಣಯ'ವು ದೇವೋತ್ತಮ ವಿಷ್ಣುವಿನ ಅವತಾರ ಮಹಿಮೆಯನ್ನು ಬಣ್ಣಿಸುವ ಕೃತಿಯಾದ್ದರಿಂದ ಈ ಕೃತಿಯುದ್ದಕ್ಕೂ ರಾಮ-ಸೀತೆ-ಲಕ್ಷ್ಮಣ ಮುಂತಾದ ಪಾತ್ರಗಳು ಅವತಾರ ಪುರುಷರಂತೆ ವರ್ತಿಸುತ್ತಾರೆ.

ಸೀತಾಪಹರಣ ಸಂದರ್ಭದ ಸೀತಾಕೃತಿ ವಿಚಾರಕ್ಕೆ ಈ ರೀತಿ ಕಾರಣ ನೀಡಬಹುದು. ಪತಿವ್ರತೆಯಾದ ಸೀತೆಯನ್ನು ಪರಪುರುಷಬಯಸಿ ಅಪಹರಿಸುವುದು ಭಕ್ತವರೇಣ್ಯರಿಗೆ ಸರಿಕಾಣದೆ ಹಾಗೂ ಸೀತೆ ಮಹಾಮಾಯೆಯಾದುದರಿಂದ ತನ್ನ ಪಾವಿತ್ರ್ಯತೆ ಕಾಪಾಡಿಕೊಳ್ಳಲು ತನ್ನ ಅಪಹರಣವಾಗುವ ಸಂದರ್ಭದಲ್ಲಿ ಆಕೃತಿಯನ್ನು ಸೃಷ್ಟಿಸಿ ಕೈಲಾಸಕ್ಕೆ ಹೋದಳು ಎಂಬ ವಿಷಯವನ್ನು ಉಲ್ಲೇಖಿಸಿರಬಹುದು.

ವಾಲಿವಧೆ :-

ರಾಮನು ವಾಲಿಯನ್ನು ನೇರವಾಗಿ ಎದುರಿಸದೇ ಮರದ ಮರೆಯಲ್ಲಿ ನಿಂತು ಬಾಣವನ್ನು ಪ್ರಯೋಗಿಸಿ ಸಂಹರಿಸಿದ್ದು ಸರಿಯೇ ಎಂಬ ಪ್ರಶ್ನೆಗೆ ವಾಲ್ಮೀಕಿ ರಾಮಾಯಣದಲ್ಲಿ ಸ್ಪಷ್ಟ ನೈತಿಕ ಕಾರಣವನ್ನು ನೀಡಲಾಗಿದೆ. ಪರಸ್ತ್ರೀಯನ್ನು ಬಲಾತ್ಕಾರವಾಗಿ ಅಪಹರಿಸಿದ ರಾವಣನ ವಿರುದ್ಧವಾಗಿ ಹೋರಾಟ ಆರಂಭಿಸಿದ ರಾಮ, ಸುಗ್ರೀವ ಜೀವಂತನಿರುವಾಗಲೇ ಅವನ ಪತ್ನಿಯ ಮೇಲೆ ಬಲಾತ್ಕಾರದ ಅತ್ಯಾಚಾರವನ್ನು ಎಸಗಿ ರಾವಣನಂತೆಯೇ ವರ್ತಿಸುತ್ತಿರುವ ವಾಲಿಯನ್ನು ಸಂಹರಿಸುವುದರಲ್ಲಿ ತಪ್ಪೇನಿದೆ? ದುಷ್ಟರನ್ನು ಅಧರ್ಮಿಗಳನ್ನು ಶಿಕ್ಷಿಸುವಾಗ ನಿಯಮಗಳನ್ನು ಪಾಲಿಸುವ ಅವಶ್ಯಕತೆಯಿಲ್ಲ. ಆದ್ದರಿಂದ ಅತ್ಯಾಚಾರಿಯಾದ ವಾಲಿಯನ್ನು ಮರೆಯಲ್ಲಿ ನಿಂತು ಕೊಂದುದರಲ್ಲಿ ಯಾವುದೇ ಅಪರಾಧವಿಲ್ಲ. ಈ ಸ್ಪಷ್ಟ ಸಮರ್ಥನೆಯನ್ನು ವಾಲ್ಮೀಕಿ ಮಹರ್ಷಿ ನೀಡಿದ್ದಾರೆ.

ರಾಮನು ವಾಲಿಯನ್ನು ನೇರವಾಗಿ ಕೊಂದಿದ್ದರೆ ಅವನ ಕೀರ್ತಿಯೂ ಇನ್ನೂ ಹೆಚ್ಚುತ್ತಿತ್ತು. ವಾಲಿಯನ್ನು ಎದುರಿಗೆ ಕೊಲ್ಲಲು ಸಾಧ್ಯವಿರುವಾಗ ಈ ಮಾರ್ಗವನ್ನು ರಾಮ ಏಕೆ ಅನುಸರಿಸಿದ ಎಂಬಿತ್ಯಾದಿ ಪ್ರಶ್ನೆಗಳಿಗೆ ಶ್ರೀಮದಾಚಾರ್ಯರು ಈ ರೀತಿ ಉತ್ತರಿಸುತ್ತಾರೆ. ವಾಲಿಯು ರಾವಣನಂತೆ ಪರಸ್ತ್ರೀಯನ್ನು ಅತ್ಯಾಚಾರ ಮಾಡಿದ್ದರೂ ಅಂತಹ ದುಷ್ಟತನವು ಅವನಲ್ಲಿ ಇರಲಿಲ್ಲ. ರಾಮನು ನೇರವಾಗಿ ಯುದ್ಧಕ್ಕೆ ಕರೆದಿದ್ದರೆ ಹರಿಭಕ್ತನಾದ ವಾಲಿಯು ಕೂಡಲೇ ಶರಣಾಗತನಾಗುತ್ತಿದ್ದ. ರಾಮನ ಕಾರ್ಯದಲ್ಲಿ ಸಹಭಾಗಿಯಾಗಿ ತನ್ನ ಮಿತ್ರನಾದ ರಾವಣನಿಂದ ರಾಮನಿಗೆ. ಸೀತೆಯನ್ನು ಹಿಂತಿರುಗಿಸುತ್ತಿದ್ದ. ಇದರಿಂದ ರಾಮನ ಅವತಾರ ಕಾರ್ಯ ಸ್ಥಗಿತವಾಗುತ್ತಿತ್ತು. ಲೋಕಕಂಟಕ, ಅತ್ಯಾಚಾರಿ, ರಾವಣನ ವಧೆಯಾಗುತ್ತಿರಲಿಲ್ಲ. ಜೊತೆಗೆ ವಾಲಿಯನ್ನು ಕೊಂದು ಸುಗ್ರೀವನಿಗೆ ಕಿಷ್ಕಿಂದೆಯ ರಾಜನನ್ನಾಗಿಸುತ್ತೇನೆ ಎಂದು ಅಗ್ನಿಯ ಸಮ್ಮುಖದಲ್ಲಿ ಮಾಡಿದ ಪ್ರತಿಜ್ಞೆ ಸುಳ್ಳಾಗುತ್ತಿತ್ತು. ಮತ್ತೆ ರಾವಣನಂತೆ ಅತ್ಯಾಚಾರಿಯಾದ ವಾಲಿಯ ಜೊತೆಗೆ ಅಪವಿತ್ರ ಮೈತ್ರಿಯನ್ನು ಮಾಡುವುದು ಉತ್ತಮ ನೈತಿಕ ಆದರ್ಶಕ್ಕೆ ವಿರುದ್ಧವಾಗಿತ್ತು. ಈ ಎಲ್ಲಾ ಅಂಶಗಳನ್ನು ಗಮನಿಸಿ ರಾಮನು ತನ್ನ ಅವತಾರ ಕಾರ್ಯ ಸುಸಂಬದ್ಧವಾಗಿ ನಡೆಯಲು ಅನುಕೂಲವಾಗುವಂತೆ ಸಾಮಾಜಿಕ ನೈತಿಕ ಹಿನ್ನೆಲೆಯಲ್ಲಿ ಅಪರಾಧಿಯೂ ಭಕ್ತನೂ ಆದ ವಾಲಿಯನ್ನು ಮರದ ಮರೆಯಲ್ಲಿ ನಿಂತು ಸಂಹರಿಸಿದನು.

ಈ ಸಂದರ್ಭದಲ್ಲಿ ಇನ್ನೂ ಒಂದು ಮಹತ್ವದ ಘಟನೆಯನ್ನು ಆಚಾರ್ಯರು ಉಲ್ಲೇಖಿಸಿದ್ದಾರೆ. ರಾಮನ ಬಾಣದಿಂದ ಕುಸಿದು ಧರಾಶಾಯಿಯಾದ ವಾಲಿಯು ರಾಮನ ಜೊತೆ ದೀರ್ಘವಾದ ಚರ್ಚೆಯನ್ನು ನಡೆಸಿ ರಾಮನ ಜ್ಞಾನದ ಮಾತುಗಳಿಂದ ವಾಲಿಗೆ ತನ್ನ ತಪ್ಪಿನ ಅರಿವಾಗಿ ಅವನಲ್ಲಿ ಪಶ್ಚಾತ್ತಾಪ ಭಾವ ಮೂಡುತ್ತದೆ. ಶಾಂತಿಯಿಂದ ಮರಣವನ್ನು ಸ್ವಾಗತಿಸಲು ವಾಲಿ ಸಿದ್ಧನಾಗುತ್ತಾನೆ. ಆಗ ರಾಮನು ಕರುಣೆ ತೋರಿ 'ನೀನು ಅಪೇಕ್ಷಿಸಿದರೆ ನನ್ನ ಬಾಣವನ್ನು ಹಿಂತೆಗೆದುಕೊಂಡು ಪುನಃ ನಿನ್ನನ್ನು

ಬದುಕಿಸುವೆನು' ಎನ್ನುತ್ತಾನೆ. ಆದರೆ ತನ್ನ ತಪ್ಪಿನ ಪ್ರಾಯಶ್ಚಿತ್ತವಾಗಿ ವಾಲಿ ಮರಣವನ್ನು ಬಯಸಿದ. ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸದ ಈ ಘಟನೆಯನ್ನು ಶ್ರೀಮದಾಚಾರ್ಯರು ಉದಾಹರಿಸಿ ರಾಮನ ಕರುಣಾಶೀಲ, ಉದಾರ ವ್ಯಕ್ತಿತ್ವವನ್ನು ಪರಿಚಯಿಸುತ್ತಾರೆ.

ಶಂಬೂಕ ವಧೆ :-

ಉತ್ತರಕಾಂಡದಲ್ಲಿ ಬರುವ ಶಂಬೂಕವಧಾ ಪ್ರಸಂಗವು ರಾಮಾಯಣದ ಪ್ರಮುಖ ಸಮಸ್ಯೆಗಳಲ್ಲೊಂದು. ವರ್ಣಾಶ್ರಮಧರ್ಮದ ವ್ಯವಸ್ಥೆಯ ಬಗ್ಗೆ ಮಾತ್ರವಲ್ಲದೆ ರಾಮನ ಸಚ್ಚರಿತ್ರಕ್ಕೆ ಕಳಂಕವನ್ನು ತರುವ ಘಟನೆಯಗಿದೆ. ಬ್ರಾಹ್ಮಣೇತರರು ತಪಸ್ಸು ಮಾಡಿದರೆ ಶಿಕ್ಷಿಸುವುದು ಅಂದಿನ ಪದ್ಧತಿಯಾಗಿದ್ದರೆ, ರಾಮನೇಕೆ ಬೇಡರ ಜಾತಿಯ ತಪಸ್ವಿನಿ ಶಬರಿಯ ಆಶ್ರಮಕ್ಕೆ ಆಗಮಿಸಿ ಆಕೆಯನ್ನು ಅನುಗ್ರಹಿಸುತ್ತಾನೆ. ನಿನ್ನ ತಪಸ್ಸು ಚೆನ್ನಾಗಿ ನಡೆದಿದ್ದೇಯೆ? ಎಂದು ಪ್ರೀತಿಯಿಂದ ವಿಚಾರಿಸುತ್ತಾನೆ. ಜಾತಿಯಲ್ಲಿ ನಿಷಾದನಾದ ಗುಹನನ್ನು ಮನ್ನಿಸುತ್ತಾನೆ. ಈ ಎಲ್ಲಾ ಘಟನೆಗಳು ಶಂಬೂಕವಧೆಗೆ ವಿಸಂಗತವಾಗುತ್ತದೆ. ಹಾಗಾದರೆ ಶೂದ್ರತಪಸ್ವಿನಿಯನ್ನು ಸಂಹರಿಸದ ರಾಮಶೂದ್ರ ತಪಸ್ವಿಯನ್ನು ಸಂಹರಿಸಿದ್ದೇಕೆ? ಇದಕ್ಕೆ ಶ್ರೀಮದಾಚಾರ್ಯರು ಈ ರೀತಿ ವಿವರಣೆ ನೀಡಿದ್ದಾರೆ.

ಜಂಘನಾಮಾಽಸುರಃ ಪೂರ್ವಂ ಗಿರಿಜಾವರದಾನತಃ । ಬಭೂವ ಶೂದ್ರಃ ಕಲ್ಪಾಯುಃ ಸ ಲೋಕಕಕ್ಷಯ ಕಾಮ್ಯಯಾ

ತಪಶ್ಚಚಾರ ದುರ್ಬುದ್ಧಿರಿಚ್ಛನ್ ಮಾಹೇಶ್ವರಂ ಪದಮ್ । ಅನನ್ಯವಧ್ಯಂ ತಂ ತಸ್ಮಾಜ್ಜಘನ ಪುರುಷೋತ್ತಮಃ [9]

ಅಃ:- "ಹಿಂದೆ ಜಂಘ ಎಂಬ ಅಸುರನು ಕಲ್ಪ ಆಯುಸ್ಸುಳ್ಳ ಒಬ್ಬ ಶೂದ್ರನಾಗಿ ಜನಿಸಿದ್ದನು. ದುಷ್ಟಬುದ್ಧಿಯವನಾದ ಅವನು ಜಗತ್ತಿನ ನಾಶವನ್ನು ಬಯಸಿ ರುದ್ರ ಪದವಿಯನ್ನು ಹೊಂದಲೆಂದು ತಪಸ್ಸನ್ನು ಆಚರಿಸತೊಡಗಿದ್ದನು. ಆದ್ದರಿಂದ ಬೇರೆ ಯಾರಿಂದಲೂ ಸಾವಿಲ್ಲದವನಾಗಿದ್ದ ಅವನನ್ನು ರಾಮ ಸಂಹರಿಸಿದನು."

ತಪಸ್ಸು ಮಾಡುವವರೆಲ್ಲರೂ ಒಳ್ಳೆಯವರೆಂದು ಭಾವಿಸಬೇಕಾಗಿಲ್ಲ ರಾವಣ ಮುಂತಾದ ರಾಕ್ಷಸರು ತಪಸ್ಸನ್ನಾಚರಿಸಿ ಲೋಕಕಂಟಕವಾಗಿಲ್ಲವೆ. ತಪಸ್ಸಿನ ಹಿಂದೆ ದುರುದ್ದೇಶವಿದ್ದರೆ ತಪಸ್ಸು ಅಪವಿತ್ರವೆನಿಸುತ್ತದೆ. ಇಂತಹ ತಪಸ್ಸನ್ನಾಚರಿಸುವವನು ಅಪವಿತ್ರ ಶಿಕ್ಷಾರ್ಹನಾಗಿರುತ್ತಾನೆ. ಆದ್ದರಿಂದ ರಾಮ ಶಂಬೂಕನನ್ನು ಕೊಲ್ಲುತ್ತಾನೆ.

ವಾಲ್ಮೀಕಿ ರಾಮಾಯಣದಲ್ಲೂ ಶಂಬೂಕನು ದೇವತ್ವವನ್ನು ಬಯಸಿ ತಪೋನಿರತನಾಗಿದ್ದ ಎಂಬುದಕ್ಕೆ ಉಲ್ಲೇಖ ದೊರೆಯುತ್ತದೆ.

ದೇವತ್ವಂ ಪ್ರಾರ್ಥಯೇ ರಾಮ ಸಶರೀರೋ ಮಹಾಯಶಃ ।

ನ ಮಿಥ್ಯಾಽಹಂ ವದೇ ರಮ ದೇವಲೋಕಜಿಗೀಷಯಾ । [10]

ಇಲ್ಲಿಯೂ ಸಹ ರಾಮ ಶಂಬೂಕನನ್ನು ಸಂಹರಿಸಿದ್ದು ಅವನು ಶೂದ್ರ ಎಂದು ಹೇಳಲಾಗಿಲ್ಲ ಆತನ ತಪಸ್ಸಿನ ಉದ್ದೇಶವನ್ನು ಹೇಳಿದಾಗ ಮಾತ್ರ ಎಂಬುದನನು ಗಮನಿಸಬೇಕಾದ ವಿಷಯ.

ರಾಮಾಯಣದ ಶ್ಲೋಕಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಅದರ ಅಪಾರ್ಥವನ್ನು ಸಾರಲು ಮುಂದಾಗುವುದನ್ನು ಗಮನಿಸಬಹುದು.

ಸೀತಾ ಪರಿತ್ಯಾಗ :-

ಉತ್ತರಕಾಂಡವನ್ನು ವಾಲ್ಮೀಕಿ ರಾಯಾಯಣದ ಪ್ರಕ್ಷಿಪ್ತ ಭಾಗವೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ಇದು ಇನ್ನು ಹೆಚ್ಚಿನ ಸಂಶೋಧನ ವಿಷಯವಾಗಿದೆ. ಈ ಉತ್ತರಕಾಂಡದಲ್ಲಿ ಸೀತಾಪರಿತ್ಯಾಗ ಪ್ರಸಂಗವೂ ಒಂದು. ರಾವಣನು ಅಪಹರಿಸಿದ್ದ ಸೀತೆಯನ್ನು ರಾಮ ಸ್ವೀಕರಿಸಿ ಆಕೆಯನು ತನ್ನ ಪಟ್ಟದರಾಣಿ ಮಾಡಿದ್ದರೆ ಬಗ್ಗೆ ಸಮಸ್ತ ಅಯೋಧ್ಯಾ ಜನರು ಆಡಿಕೊಳ್ಳುತ್ತಿದ್ದರು. ರಾಜ್ಯದ ಎಲ್ಲಾ ಕಡೆಗಳಲ್ಲಿ ಹಬ್ಬಿರುವ ಈ ಅಪಪ್ರಚಾರದ ಸಂಗತಿಯನ್ನು ದೂತರು ರಾಮನಲ್ಲಿ ನಿವೇದಿಸುತ್ತಾರೆ. ಆಗ ಸಭಿಕರು ಸಹ ಈ ಮಾತು ನಿಜ ಎಂದು ತಲೆತಗ್ಗಿಸುತ್ತಾರೆ. ಹೀಗೆ ರಾಜ್ಯದ ಪ್ರಜೆಗಳೆಲ್ಲರೂ ಒಕ್ಕೊರಳಿನಿಂದ ಸೀತೆಯು ರಾಣಿಯಾಗಿರುವುದನ್ನು ಅಪೇಕ್ಷಿಸಿದಾಗ ಪ್ರಜೆಗಳಿಗಾಗಿ ಯಾವುದೇ ಸ್ವಾರ್ಥವನ್ನು ತ್ಯಾಗ ಮಾಡಲು ರಾಜನು ಸಿದ್ಧನಾಗಬೇಕೆಂಬ ಉತ್ತಮ ನೈತಿಕ ಆದರ್ಶವನ್ನು ತೋರಲು ರಾಮ ಸೀತೆಯನ್ನು ಪರಿತ್ಯಜಿಸುತ್ತಾನೆ.

ಇಲ್ಲಿ ರಾಮ ಯಾರ ಒಬ್ಬ ವ್ಯಕ್ತಿಯ (ಅಗಸ) ನಿಂದನೆಯ ಮಾತಿನಿಂದಾಗಲಿ, ಜನತೆಯ ಇಚ್ಛೆಯನ್ನು ಕಡೆಗಣಿಸಿಯಾಗಲೀ ಸೀತೆಯನ್ನು ಪರಿತ್ಯಜಿಸಿದ್ದಲ್ಲ. ರಾಜನು ಜನಾಭಿಪ್ರಾಯವನ್ನು ಹೇಗೆ ಗೌರವಿಸಬೇಕು, ನೈತಿಕ ವಿಷಯದಲ್ಲಿ ಹೇಗೆ ಸಂಶಯಾತೀತನಾಗಿರಬೇಕು ಎಂಬುದನ್ನು ತನ್ನ ನಡತೆಯಿಂದ ಶ್ರೀರಾಮನು ವಾಲ್ಮೀಕಿ ರಾಮಾಯಣದಲ್ಲಿ ತೋರಿದ್ದಾನೆ.

ಆದರೆ ರಾಮನ ಭಕ್ತರೂ, ಸಾತ್ವಿಕರೂ ಆದ ಅಯೋಧ್ಯೆಯ ಜನರೂ ಸೀತೆಯ ಪ್ರತಿ ಇಂತಹ ಸಂಶಯ ಹೊಂದಲು ಕಾರಣವೇನು? ರಾಮನಿಗೆ ವನವಾಸವಾದ ಸಂದರ್ಭದಲ್ಲಿ ಊರಿಗೆ ಊರೇ ರಾಮನನ್ನು ಸರಿಸಿ ಕಾಡಿಗೆ ಹೋಗಲು ಸಿದ್ಧರಾಗಿದ್ದರು. ಸೀತೆಯು ರಾಮನ ಜೊತೆ ಕಾಡಿಗೆ ಹೋಗುತ್ತಿರುವ ಆಕೆಯ ಪ್ರತಿ ಕರುಣೆ ಹೊಂದಿದ ಜನರು, ವನವಾಸದಿಂದ ಹಿಂದಿರುಗಿದ ಸೀತೆಯ ಪ್ರತಿ ಇಷ್ಟು ಕ್ರೂರರಾಗಲು ಕಾರಣವೇನು? ಸೀತೆಯ ವಿಷಯದಲ್ಲಿ ಏನೂ ವಿಮರ್ಶೆ ಮಾಡದೆ ಇಂತಹ ಅಪಪ್ರಚಾರದ ಸತ್ರವನ್ನು ಏಕೆ ನಡೆಸಿದರು? ಸೀತೆಯ ಪರಿಶುದ್ದ ಚಾರಿತ್ರ್ಯ ಸದ್ಗುಣಗಳನ್ನು ಅರಿಯದಷ್ಟು ಮೂಢತೆ ಉಂಟಾಗಲು ಕಾರಣವೇನು? ಎಂಬೆಲ್ಲಾ ಪ್ರಶ್ನೆಗಳಿಗೆ ಆಚಾರ್ಯರು ಈ ರೀತಿ ಉತ್ತರಿಸಿದ್ದಾರೆ.

ಹಿಂದೆ ಸುರಾಣಕರೆಂಬ ಹೆಸರಿನ ಅಸುರರು ತಪಸ್ಸನ್ನಾಚರಿಸಿ ಬ್ರಹ್ಮನಲ್ಲಿ ತಾವು ಮುಕ್ತಿ ಪಡೆಯಲು ದಾರಿ ತೋರಬೇಕೆಂದಾಗ ಬ್ರಹ್ಮನು

ಯಾವ ದೇವ ರಮಯಾ ರಮೇಶ್ವರಂ

ನೋ ವಿಯೋಜಯಥ ಸದ್ಗೂನಾಣವಮ್ ।

ತಾವದುಚ್ಚಮಪಿ ದುಷ್ಕೃತಂ ವ

ನ್ಮೋಕ್ಷಮಾರ್ಗಪರಿಪಂಥಿ ನೋ ಭವೇತ್ [6]

"ಎಲ್ಲಿಯವರೆಗೂ ರಮಾಪತಿ (ರಾಮ)ಗೆ ರಮೆ (ಸೀತೆ) ಯೊಂದಿಗೆ ವಿಯೋಗವನ್ನು ನೀವು ಕಲ್ಪಿಸುವುದಿಲ್ಲವೋ ಅಲ್ಲಿಯವರೆಗೂ ಎಂತಹ ದೊಡ್ಡ ಪಾತಕವು ಸಹ ನಿಮಗೆ ಮೋಕ್ಷ ಮಾರ್ಗಕ್ಕೆ ಅಡ್ಡಿಯಾಗಲಾರದು" ಎಂದರೆ ಭೂಲೋಕದಲ್ಲಿರುವ ರಾಮ ಸೀತೆಯನ್ನು ಪರಸ್ಪರ ಬೇರ್ಪಡಿಸುವ ಪಾಪದ ಹೊರತು ಬೇರಾವ ಪಾತಕವೂ ನಿಮಗೆ ಮೋಕ್ಷ ಮಾರ್ಗಕ್ಕೆ ಅಡ್ಡಿಯಾಗದಿರಲಿ ಎಂದು ಬ್ರಹ್ಮದೇವರು ವರವಿತ್ತನು. ಅದರಂತೆ ಆ ಸುರಾಣಕರೆಂಬ ಅಸುರರು ಗುಂಪು ರಾಮನ ಆಳ್ವಿಕೆಯ ಕಾಲದಲ್ಲಿ ಜನರ ನಡುವೆ ಒಂದಾಗಿ ಸೀತೆಯ ವಿರುದ್ಧವಾಗಿ ಚಾರಿತ್ರ್ಯಹನನದ ವ್ಯವಸ್ಥಿತ ಅಪಪ್ರಚಾರವೆಸಗಿ ರಾಮ ಸೀತೆಯನ್ನು ಪರಸ್ಪರ ಬೇರ್ಪಡಿಸಲು ಕಾರಣರಾದರು.

ಒಟ್ಟಿಗೆ ಇಲ್ಲಿ ಶ್ರೀಮದ್ವಾಲ್ಮೀಕಿ ರಾಮಾಯಣ ಮತ್ತು ಶ್ರೀಮದಾಚಾರ್ಯರ ಮಹಾಭಾರತ ತಾತ್ಪರ್ಯದಲ್ಲಿನ ಮದ್ವರಾಮಾಯಣದ ನಡುವಿನ ಪ್ರಮುಖ ಪ್ರಸಂಗಗಳಲ್ಲಿರುವ ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದ್ದು, ಈ ಪ್ರಸಂಗಗಳು ವಾಲ್ಮೀಕಿ ರಾಮಾಯಣಕ್ಕಿಂತ ಮದ್ವರಾಯಾಯಣವು ಹೇಗೆ ಭಿನ್ನವಾಗಿದೆ ಎಂಬುದರಿಯಲು ಸಹಾಯಕವಾಗಿದೆ.

ಅಡಿಟಿಪ್ಪಣಿ

೧.ಮಹಾಭಾರತ ತಾತ್ಪರ್ಯ ನಿರ್ಣಯ (ಅಧ್ಯಾಯ೧-೯): (ಅನು) ಪ್ರೊ.ವ್ಯಾಸಕೆರೆ ಪ್ರಭಂಜನಾಚಾರ್ಯ ಅಧ್ಯಾಯ ೪ ಶ್ಲೋಕ ೫೫, ಪುಟ-೩೬೭

೨.ಮಹಾಭಾರತತಾತ್ಪರ್ಯ ನಿರ್ಣಯ (ಅಧ್ಯಾಯ೧-೯): (ಅನು): ಪ್ರೊ.ವ್ಯಾಸಕೆರೆ ಪ್ರಭಂಜನಾಚಾರ್ಯ ಅಧ್ಯಾಯ ೫ ಶ್ಲೋಕ ೧೫, ಪುಟ-೩೯೦

೩.ಮಹಾಭಾರತತಾತ್ಪರ್ಯ ನಿರ್ಣಯ (ಅಧ್ಯಾಯ೧-೯): (ಅನು): ಪ್ರೊ.ವ್ಯಾಸಕೆರೆ ಪ್ರಭಂಜನಾಚಾರ್ಯ ಅಧ್ಯಾಯ ೫ ಶ್ಲೋಕ ೩೭ ಮತ್ತು ೩೮, ಪುಟ-೪೧೦

೪.ಮಹಾಭಾರತತಾತ್ಪರ್ಯ ನಿರ್ಣಯ (ಅಧ್ಯಾಯ೧-೯): (ಅನು) ಪ್ರೊ.ವ್ಯಾಸಕೆರೆ ಪ್ರಭಂಜನಾಚಾರ್ಯ ಅಧ್ಯಾಯ ೯ ಶ್ಲೋಕ ೨೦/೨೧, ಪುಟ-೬೨೩

೫. ಶ್ರೀಮದ್ವಾಲ್ಮೀಕಿ ರಾಮಾಯಣ : (ಅನು)ರಂಗನಾಥಶರ್ಮ.ಎನ್: ಸಂಪುಟ-೧ರಿಂದ ಉತ್ತರಕಾಂಡ ಸರ್ಗ ೭೬ ಶ್ಲೋಕ ೨ ಮತ್ತು ೩

೬. ಮಹಾಭಾರತ ತಾತ್ಪರ್ಯ ನಿರ್ಣಯ (ಅಧ್ಯಾಯ ೧-೯): (ಅನು)ಪ್ರೊ.ವ್ಯಾಸಕೆರೆ ಪ್ರಭಂಜನಾಚಾರ್ಯ ಅಧ್ಯಾಯ ೯ ಶ್ಲೋಕ ೨೯, ಪುಟ-೬೨೮

ಅಧ್ಯಾಯ – ೩

ಬಾಲಕಾಂಡ ಮತ್ತು ಅಯೋಧ್ಯಾಕಾಂಡದ ಪ್ರಸಂಗಗಳು

ಕೀರ್ತನೆಗಳಲ್ಲಿ ರಾಮಸೀತೆ ಹನುಮರ ವರ್ಣನೆ :-

ಹರಿನಾಮ ಸ್ಮರಣೆ ಹರಿನಾಮ ಮಹಿಮೆಗೆ ನೂರಾರು ಕೀರ್ತನೆಗಳನ್ನು ಮೀಸಲಾಗಿಟ್ಟುವ ಹರಿದಾಸರು ಹರಿಯ ಪ್ರತಿ ಆತ್ಮ ಸಮರ್ಪಣ ಭಾವ ಹೊಂದಿದವರು ನಂಬಿ ಕೆಟ್ಟಿಲ್ಲ ಎಂಬ ಆಶ್ವಾಸನೆಯನ್ನು ಪೌರಾಣಿಕ ಪಾತ್ರದ ಮೂಲಕ ಕೊಡುತ್ತಾರೆ. ಹರಿಯನ್ನು ನಂಬಿ ಹರಿನಾಮದಿಂದ ಮೋಕ್ಷ ಹೊಂದಿದ ಭಾಗವತ ಶಿರೋಮಣಿಗಳಾದ ಧ್ರುವ, ಪ್ರಹ್ಲಾದ, ವಿಧುರ, ಗಜೇಂದ್ರ, ವಿಭೀಷಣ, ಅಹಲ್ಯೆ ಶರಭಂಗ ಮುನಿ, ದ್ರೌಪದಿ ಮೊದಲಾದವರ ಹೆಸರನ್ನು ಉದ್ಧರಿಸಿ ಸಾಮಾನ್ಯ ಮನುಷ್ಯರಿಗೆ ಪ್ರೋತ್ಸಾಹಿಸುತ್ತಾರೆ. ಜೊತೆಗೆ ಹರಿದ್ವೇಷದಿಂದ ಕೆಟ್ಟ ರಾವಣ, ಕಂಸ, ದುರ್ಯೋಧನ, ಹಿರಣ್ಯಕಶ್ಯಪ ಮೊದಲಾದವರ ಹೆಸರು ಸೂಚಿಸಿ ನಾಸ್ತಿಕರಿಗೆ ಎಚ್ಚರಿಸುತ್ತಾರೆ.

ಹಾಗೆಯೇ ಹರಿಯ ಅವತಾರವಾದ ಶ್ರೀ ರಾಮ ತನ್ನ ಅವತಾರದಲ್ಲಿ ಮಾಡಿದ ಮಹತ್ಕಾರ್ಯಗಳನ್ನು ಸ್ಮರಿಸುತ್ತಾ ಶ್ರೀ ರಾಮನ ಗುಣಗಳಾದ ಪಿತೃಭಕ್ತಿ ಭ್ರಾತೃಪ್ರೇಮ, ವಚನ ಪರಿಪಾಲನೆ ಮೊದಲಾದವನ್ನು ಹಾಡಿ ಹೊಗಳಿದ್ದಾರೆ. ಜೊತೆಗೆ ಸ್ವಾಮಿನಿಷ್ಠೆ, ಬ್ರಹ್ಮಚರ್ಯದ ಮಹತ್ಸಾಧನೆ, ಪಾವಿತ್ರ್ಯದ ಪವಿತ್ರ ಶಕ್ತಿ ಮೊದಲಾದ ಗುಣಗಳು ರಾಮಾಯಣದ ಪಾತ್ರಗಳಲ್ಲಿ ಗಗನ ಮುಟ್ಟುತ್ತವೆ. ಈ ಪಾತ್ರಗಳ ನಿದರ್ಶನ ನೀಡಿ ಮಾನವ ಜೀವನವನ್ನು ಉನ್ನತಮಟ್ಟಕ್ಕೇರಿಸಲು ಪ್ರಯತ್ನಿಸಿದ್ದಾರೆ.

ವಾಲ್ಮೀಕಿ ಮಹರ್ಷಿಯು ಇಡೀ ರಾಮಯಣದಲ್ಲೆಲ್ಲಾ ತಾವಾಗಿ ನೇರ ಮಾತುಗಳಲ್ಲಿ ಸೀತಾ, ರಾಮ, ಲಕ್ಷ್ಮಣರ ರೂಪ ಸೌಂದ್ಯರ್ಯ ವರ್ಣನೆ ಮಾಡಿಲ್ಲ ಆದರೆ ರಾಮಾಯಣದ ಇತರ ಪಾತ್ರಗಳ ಮುಖೇನವೇ ಅದ್ಭುತ ವರ್ಣನೆ ಮಾಡಿಸಿರುವುದನ್ನು ಕಾಣಬಹುದು ಆದರೆ ಹರಿದಾಸರು ದಶಾವತಾರಗಳನ್ನು ವರ್ಣಿಸುವಲ್ಲಿ, ನಾಮಸ್ಮರಣೆ ಮಾಡುವಲ್ಲಿ ಭಕ್ತರನ್ನು ಉದ್ಧರಿಸಿದ ಪ್ರಸಂಗಗಳನ್ನು ಹಾಡುವಾಗ ಶ್ರೀ ರಾಮನನ್ನು ಕೊಂಡಾಡಿರುವ ಹಲವು ನಿದರ್ಶನಗಳಿವೆ. ಗೋಪಾಲದಾಸರು ಶ್ರೀ ರಾಮನನ್ನೇ ಕುರಿತಾಗಿ ದೀರ್ಘ ಸುಳಾದಿಯನ್ನು ರಚಿಸಿದ್ದು ದಾಸರು ತಮ್ಮ ಸಮಕಾಲೀನ ಶ್ರೀ ವಸುಧೇಂದ್ರ ತೀರ್ಥರು ಪೂಜಿಸುತ್ತಿದ್ದ ಮೂಲ ರಾಮನನ್ನು ಕುರಿತು ರಚಿಸಿರುವ ಸುಳಾದಿ ಇದಾಗಿದೆ.

ಶರಣರ ಪಾಲಕ ದುರಳರ ಶಿಕ್ಷಕ
ಶರಣು ಶರಣು ನಿನ್ನ ಚರಣ ಕಮಲಕೆ
ಪರಮ ಪಾವನನಾಮ ಪರಿಪೂರ್ಣ ಗುಣಕಾಮ
ಸ್ಥಿರ ಯೋಗಿಗಳರಸ ಸ್ಥಿರಜೀವಿಯೂ
ದುರಿತಗಿರಿಗೆ ಕುಲಿಶದೂರ ಅತಿದೂರ

ಚರಣದಂದುಗೆ ಗೆಜ್ಜೆವರ ಜಾನುಜಂಘೆ ಕಟಿ

ಕರ ಮೇಲೆ ಒಲಿವ ಕಿಂಕಿಣಿಯ ಗಂಟೆ

ಪರಮಶೋಭಿತದ ಉದರ ವಕ್ಷಕೌಂಸ್ತುಭ

ಕೊರಳ ಪದಕ ನಾನಾ ಸರಗಳಿಂದೊಪ್ಪುತ

ಸಿರಿಗಂಧ ಕಸ್ತೂರಿ ಪರಿಮಳ ಭೂಷಿತ

ವರ ಸಾರಂಗಪಾಣಿ ಕರ್ಣಕುಂಡಲಧರ

ಸರಸಿಜನಯನ ಸಿರಿಕಿರೀಟಧರ

ಸ್ವರೂಪಾಲಂಕಾರದಿಂದೊಪ್ಪುವ ಶ್ರೀ ರಾಮ

ಪರಮ ಶೋಭಿತನಾಮ ಗುರುರಾಮವಿಠಲ

ನಿರುತ ವಸುಧೇಂದ್ರ ಮುನಿಯ ಮನದಿ ವಾಸ (ಸು೧೬೩ ಸಂ ೧೨) *

ಈ ಸುಳಾದಿಯಲ್ಲಿ ಶ್ರೀ ರಾಮ ಹೇಗೆ ದೇವಾನುದೇವತೆಗಳಿಂದ ಪೂಜಿತಗೊಳ್ಳುತ್ತಿದ್ದ ಆತನ ನಾಮಸ್ಮರಣೆ, ಪಾದಸೇವೆಯಿಂದ ಲಭಿಸುವ ಪುಣ್ಯವನ್ನು, ಅತನು ಧರಿಸುತ್ತಿದ್ದ ಆಭರಣ ಸೌಂದರ್ಯವನ್ನು ನಖ–ಶಿಖಾಂತ ವರ್ಣನೆ ಇಲ್ಲಿ ಬಂದಿದೆ.

ವಾದಿರಾಜರು ತಮ್ಮ ಸಂಕ್ಷಿಪ್ತ ರಾಮಾಯಣದಲ್ಲಿ ಶ್ರೀ ರಾಮ ನಿಂತ ನಿಲುವು, ಗಾವಭಾವಗಳು ದಾಸರ ಮನಸೆಳೆದು ಅವನ ಕತೆಯನ್ನೇ ಹಾಡಾಗಿ ಹಾಡಿದ್ದಾರೆ

ಈ ಮುದ್ದು ಮುಖವೋ ಮತ್ತೆ ತನುವಿನ ಕಾಂತಿ

ಈ ಬಿಲ್ಲು ಈ ಬಾಣ ನಿಂತ ಭಾವ --೧--

ಈ ತನು ಈ ರಾಣಿ ಈ ಬಂಟ ಈ ಭಾಗ್ಯ

ಆವ ದೇವಗಂಟು ಮೂಲೋಕದೊಳಗೆ --೨--(ಕೀ ೨೮೩ ಸಂ ೨)

ರಾಮಾಯಣದ ಕಥಾನಾಯಕಿ ಹಾಗೂ ಎಲ್ಲಾ ಸ್ತ್ರೀ ಪಾತ್ರಗಳಲ್ಲಿ ಅತ್ಯುನ್ನತ ಸ್ಥಾನ ಪಡೆದಿರುವ ಸೀತಾದೇವಿಯನ್ನು ಕುರಿತಾಗಿ ವಿಜಯದಾಸರು ಈ ರೀತಿ ಹಾಡಿದ್ದಾರೆ.

ಸೀತೆಯ ಭೂಮಿಜಾತೆಯ ಜಗ

ನ್ಮಾತೆಯ ಸ್ಮರಿಸಿ ವಿಖ್ಯಾತೆಯ

ಕ್ಷೀರವಾರಿಧಿಯ ಕುಮಾರಿಯ, ತನ್ನ

ಸೇರಿದವರ ಭಯ ಹಾರಿಯ

ತೋರುವಳು ಮುಕ್ತಿ ದಾಲಿಯ, ಸರ್ವೆ

ಸಾರಸುಂದರ ಶ್ರೀ ನಾರಿಯ

ಗೋವಿಂದ ದಾಸರ ಕೀರ್ತನೆಯೊಂದು ಸೀತೆಗೆ ಕುರಿತಾಗಿ ಹೀಗಿದೆ

---

* ಈ ಸಂಪ್ರಬಂಧದಲ್ಲಿ ಬಳಸಿಕೊಂಡಿರುವ ಕೀರ್ತನೆಗಳನ್ನು ಕರ್ನಾಟಕ ಸರ್ಕಾರದ ಸಮಗ್ರದಾಸ ಸಾಹಿತ್ಯ ಸಂಪುಟಗಳಿಂದ ಆರಿಸಿಕೊಳ್ಳಲಾಗಿದೆ.

ಸೀತೆ ಲೋಕಮಾತೆ ರಾಮನ ಪ್ರೀತೆ

ಭೂಮಿಜಾತೇ ಪಾತಕ ಹರೆ ಸರ್ವಾರ್ಥ

ಸಿದ್ಧಿಕರೆ ಖ್ಯಾತಿವಂತೆ ಸುನೀತೆ ಸುರಾರ್ಚಿತೆ -ಪ-

ತಾಯಿ ಮಹಾಮಾಯೆ ರಾಮನ ಛಾಯೆ ವಿಮಲ

ಕಾಯೆ ತೋಯಜಾಕ್ಷಿ ನಿನ್ನ ಸೇವೆಯ ಮಾಡಲು

ವಾಯು ತನಯನಂತರ್ಯನುಪಾಯವ -೧-

ಚಂದ್ರವದನೆ ದೇವೀ ರಾಮಚಂದ್ರನ

ಸಂಜೀವಿನಿ ಸಿಂಧುಬಂಧನ ಗೋವಿಂದನ

ದಾಸಗೆ ಬಂದು ಮೊಗವ ತೋರಿ ಚಂದದಿ ಪಾಲಿಸೆ -೨- (ಕೀ ೩೭೪ ಸಂ ೨೪)

ಇಲ್ಲಿ ಸೀತೆಯ ಪತಿಭಕ್ತಿ, ರಾಮನ ಭಕ್ತಿ ಪ್ರೇಮ ಮತ್ತು ರಾಮನ ಜೀವನದಲ್ಲಿ ಸೀತೆಗಿರುವ ಮಹತ್ವ "ರಾಮಚಂದ್ರನ ಸಂಜೀವಿನಿ" ಎಂಬ ಪದದಿಂದಲೇ ವ್ಯಕ್ತವಾಗುತ್ತದೆ.

ಇಡೀ ರಾಮಾಯಣದಲ್ಲಿ ಬಹುಮುಖ್ಯ ಪಾತ್ರವಾಗಿರುವ ಸೀತೆಯು ರಾಮಾಯಣದ ಪ್ರಮುಖ ಪಾತ್ರಗಳಾದ ಸೀತಾಕಲ್ಯಾಣ, ಸೀತಾಪರಣ, ಅಶೋಕವನದಲ್ಲಿ ಸೀತೆಯ ಅವಸ್ಥೆ, ಅಗ್ನಿಪರೀಕ್ಷೆ, ಸೀತಾಪರಿತ್ಯಾಗ, ಹೀಗೆ ಎಲ್ಲಾ ಸಂದರ್ಭಗಳಲ್ಲೂ ಹೃದಯಸ್ಪರ್ಶಿ ಪಾತ್ರವಾಗಿ ಕಾಣಿಸಿಕೊಳ್ಳುತ್ತಾಳೆ

ರಾಮಾಯಣದ ಪ್ರಸಂಗಗಳನ್ನು ಆರಿಸಿಕೊಳ್ಳುವಲ್ಲಿ ಹರಿದಾಸರಿಗೆ ಶ್ರೀ ರಾಮನ ಮೇಲಿನ ಭಕ್ತಿ ಎಷ್ಟು ಹಿರಿದಾಗಿರುವುದೋ ಅಷ್ಟೇ ಪೂಜ್ಯಭಾವನೆ ಆತನ ಅವಿಚ್ಛಿನ್ನ ದಾಸನಾದ ಹನುಮನ ಮೇಲೆ ಇರುವುದು ವ್ಯಕ್ತವಾಗುತ್ತದೆ. ರಾಮಾಯಣದಲ್ಲಿ ಹನುಮ ತೋರಿದ ಪರಾಕ್ರಮಗಳನ್ನು ಹೊಗಳಿರುವ ನೂರಾರು ಕೀರ್ತನೆಗಳಿದ್ದು ಬೇಲೂರು ವೈಕುಂಠದಾಸರು ಹನುಮನ ಪರಾಕ್ರಮಗಳನ್ನು ಹಾಡುತ್ತಾ ಹನುಮನ ಕುರಿತಾಗಿ ಒಂದು ಕೀರ್ತನೆಯ ಭಾಗ ಹೀಗೆ ಬಂದಿದೆ.

ನೋಡಿರೈ ಕಣ್ದಣಿಯಾ ಸಜ್ಜನರೆಲ್ಲ

ಪಾಡಿರೈ ಮನದಣಿಯೂ -ಪ-

ಉಡಿಯೊಳ್ ಘಂಟೆಗಳೆಸೆಯೆ ಚರಣದೊಳುಳ್ಳ

ತೊಡರುಗಗ್ಗರ ಮುಲಿಯೆ

ಪಿಡಿದ ಪಂಕಜ ಮೆರೆಯೆ ಕುಂಡಲಗಳ

ಕಡೆಯ ಕರ್ಣದಿ ಪೊಳೆಯೆ

ಕಡಗ ಮಣಿ ಮಕುಟಗಳ ಪೇರುವ

ದೆಡೆಯ ವಜ್ರದ ಮಕುಟಗಳ ಪೇರುರ

ದೆಡೆಯ ವಜ್ರದ ಪದಕ ಮೊದಲಹ

ತೊಡಿಗೆಗಳ ಸಡಗರದೊಳುಪ್ಪುವ

ದೃಢತರದ ಮಾರುತಿಯ.............೨ (ಕೀ ೧೧೩ ಸಂ ೩೫/೧)

ರಾಮಾಯಣದ ೭ ಕಾಂಡಗಳಲ್ಲಿ ಕಂಡು ಬರುವ ಶ್ರೀ ರಾಮ ಹನುಮರ ಮಹಾತ್ಮೆಯ ಸನ್ನಿವೇಶಗಳನ್ನು ಮಹತ್ವದ ಪ್ರಸಂಗಗಳನ್ನಾಗಿ ಹರಿದಾಸರು ತಮ್ಮ ಕೀರ್ತನೆಯ ವಸ್ತುವನ್ನಾಗಿಸಿಕೊಂಡು ಹಾಡಿದ್ದಾರೆ. ಅವುಗಳ ವಿವರ ಈ ಅಧ್ಯಾಯ ಮತ್ತು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

ಬಾಲಕಾಂಡದ ಪ್ರಸಂಗಗಳು

ಶ್ರೀ ರಾಮಾವತಾರ :-

ಅಯೊಧ್ಯೆಯ ರಾಜನಾದ ದಶರಥನಿಗೆ ಪುತ್ರಭಾಗ್ಯವಿಲ್ಲದೆ ಪರಿತಪಿಸುತ್ತಿರಬೇಕಾದರೆ ಋಷ್ಯಶೃಂಗ ಮುನಿಯು ದಶರಥನಿಗೆ ಮಕ್ಕಳಾಗಲು ಪುತ್ರಕಾಮೇಷ್ಠಿ ಯಾಗ ಮಾಡಿಸತೊಡಗಿದನು. ಅದೇ ವೇಳೆಯಲ್ಲಿ ದೇವಾನುದೇವತೆಗಳು ರಾವಣನ ಕಾಟ ತಾಳಲಾರದೆ ಅದನ್ನು ನಿವಾರಿಸಲು ಬ್ರಹ್ಮನ ಬಳಿ ಹೋದರು. ಆಗ ಬ್ರಹ್ಮನು ಅವನಿಗೆ ಯಾರಿಂದಲೂ ಮರಣವಾಗಬಾರದೆಂದು ಕೇಳಿಕೊಳ್ಳುವಾಗ (ಗಂಧರ್ವ,ಯಕ್ಷ, ದೇವದಾಸರ ರಾಕ್ಷಸ) ಆ ರಾಕ್ಷಸ ಮನುಷ್ಯನ ಬಗ್ಗೆ ತಿರಸ್ಕಾರದ ಭಾವದಿಂದ 'ಮಾನವನ ಹೆಸರನ್ನು ಹೇಳಲಿಲ್ಲ. ಆದ ಕಾರಣ ರಾವಣ ಮನುಷ್ಯನಿಂದಲೇ ಹತನಾಗುತ್ತಾನೆ' ಆಗ ವಿಷ್ಣು ಅಲ್ಲಿ ಪ್ರತ್ಯಕ್ಷನಾದಾಗ ದೇವತೆಗಳೆಲ್ಲ ಸೇರಿ ಲೋಕಕಂಟಕ ರಾವಣನ ವಧೆಗೆ ನರಲೋಕದಲ್ಲಿ 'ನರ' ನಾಗಿ ಅವತರಿಸಬೇಕೆಂದು ಪ್ರಾರ್ಥಿಸಿದಾಗ ಹರಿಯು ದಶರಥನ ಪುತ್ರನಾಗಿ ಜನಿಸಲು ಇಚ್ಚಿಸುತ್ತಾನೆ. ತನ್ನಂಶವನ್ನು ನಾಲ್ಕು ಭಾಗಗಳನ್ನಾಗಿಸಿ ರಾಮ, ಲಕ್ಷ್ಮಣ, ಭರತ,ಮತ್ತು ಶತ್ರುಘ್ನನಾಗಿ ದಶರಥನ ರಾಣಿಯರಲ್ಲಿ ಜನಿಸುತ್ತಾನೆ. ಹಾಗೆಯೇ ಹಲವಾರು ದೇವತೆಗಳು ತಮ್ಮ ಅಂಶದಿಂದ ಕರಡಿ, ವಾನರರನ್ನು ಸೃಷ್ಟಿಸಿ ದೇವತಾಕಾರ್ಯಕ್ಕೆ ಸಹಾಯಕರಾಗುತ್ತಾರೆ(ವಾಲ್ಮೀಕಿ ರಾಮಾಯಣ)

ಮಧ್ವ ರಾಮಾಯಣದ ೨ನೇ ಅಧ್ಯಾಯದಲ್ಲಿ ಶ್ರೀ ರಾಮಾವತಾರದ ಹಿನ್ನಲೆಯಾಗಿ ಕಪಿಗಳ ಜನನ ಇತ್ಯಾದಿ ಬರುತ್ತದೆ. ಚತುರ್ಮುಖ ಬ್ರಹ್ಮನಿಂದ ಆದಿಯಲ್ಲಿ ಜನಿಸಿದ ದೈತ್ಯರಾದ ರಾವಣ, ಕುಂಭಕರ್ಣರು ಬ್ರಹ್ಮನಿಂದ ವರಪಡೆದು ಅಜೇಯರಾಗಿ ಮಾನವ, ದೇವತೆ, ಋಷಿ ಮುನಿಗಳಿಗೆ ಕಂಟಕವಾಗಿ ಪರಿಣಮಿಸಿದಾಗ ದೇವತೆಗಳೆಲ್ಲ ಕಮಲಜನಲ್ಲಿ ಮೊರೆಹೋಗಿ ರಾವಣನ ಬಾಧೆಯಿಂದ ಪಾರಾಗಲು ಉಪಾಯ ಕೇಳಿದಾಗ ಬ್ರಹ್ಮನು ಸರ್ವಶಕ್ತನಾದ ಹರಿಯು ನರರೂಪದಲ್ಲವತರಿಸಿ ಇವರನ್ನು ಸಂಹರಿಸಬೇಕೆಂದಾಗಿ ಹಾಗೆಯೇ ದಶರಥನ ಯಜ್ಞದಿಂದ ಆರಾಧಿತನಾಗಿ ಶ್ರೀ ರಾಮನಾಗಿ ಅವತರಿಸಿದ.

ಹರಿದಾಸರು ಶ್ರೀ ರಾಮ ಜನನದ ಕುರಿತಾಗಿ ಕೆಳಗಿನಂತೆ ತಮ್ಮ ಕೀರ್ತನೆಯಲ್ಲಿ ಹಾಡಿದ್ದಾರೆ.

ಸೊಕ್ಕಿದ ದೈತ್ಯರ ಭಾಧಿಗಾರದಿಹ ದೇವರ್ಕಳ ಮೊರೆಯನು ಕೇಳಿ ಪಕ್ಕನೆ

ದಶರಥನಾಲಯದೊಳು ಪುಟ್ಟ

ಮಿಕ್ಕನುಜನ ಕೂಡಿ ಬೆಳೆದು

..................-೧- (ಕೀ ೩೮೬ ಸಂ೧೧/೧)

ಎಂದು ಕಾಖಂಡಕಿ ಕೃಷ್ಣದಾಸರು ಹಾಡಿದ್ದಾರೆ ಜಗನ್ನಾಥದಾಸರು

ಅಸುರ ಬಾಧಿಸುತಿರಲು ಋಷಿಗಳು ಸ್ತುತಿ ಮಾಡೆ

ದಶರಥನ ಗರ್ಭದಲಿ ಜನಿಸಿ ಬಂದೆ -೧- (ಕೀ ೧೯೩ ಸಂ.೧೪)

ಇಲ್ಲಿ ಋಷಿಗಳು ಹರಿಯ ಬಳಿ ಹೋಗಿ ರಾವಣನ ಕಂಟಕ ನಿವಾರಣೆಗೆ ಪ್ರಾರ್ಥಿಸಿದರೆ ಕಾಖಂಡಕಿ ಕೃಷ್ಣದಾಸರು ದೇವತೆಗಳು ಪ್ರಾರ್ಥಿಸಲು ಎಂದಿದ್ದಾರೆ.

ನಿಡಗುರುಕಿ ಜೀವೂಬಾಯಿಯವರು ರಾಮ ಜನನ ಕಾರಣ ಸಂಗತಿಯನ್ನು ವಿಸ್ತಾರವಾಗಿ ಬಣ್ಣಿಸಿದ್ದಾರೆ

ರಾಜೀವ ದಳನೇತ್ರ ರಾಮಚಂದ್ರನೆ ಶುಭ
ನಾಮಧೇಯನೆ ನಿನಗಾನಮಿಸುವೆನು -ಪ-
ಸುರರೆಲ್ಲ ನೆರೆದು ಋಷಿವರರೆಲ್ಲ ಒಂದಾಗಿ
ವರ ಕ್ಷೀರಾಂಬುಧಿಯ ಸಾರುತ ವೇಗದಿ
ಪರಮಾತ್ಮ ನಿನ ಕಂಡು ಪರಿಪರಿಸ್ಮರಿಸುತ
ನೆರೆದರು ದೇವ ಗಂಧರ್ವ ನಾರದರೆಲ್ಲ
ಗರುಡಗಮನನೆ ಉರುಗ ಶಯನನೆ
ಪರಮಪುರುಷನೆ ಪುಣ್ಯಚರಿತನೆ
ತ್ವರದಿ ಎಮ್ಮಯ ಮೊರೆಯ ಕೇಳೆಂದು
ಭರದಿ ಪ್ರಾರ್ಥನೆ ಮಾಡುತಿಹರು-೧_

------ದೈತ್ಯರು ನಮ್ಮ ಬಾಡಗೊಡರೂ ದೇವ
ಭಾಳ ವ್ಯಾಕುಲರಾಗಿ ದುಃಖಿಪೆವು
ಕೇಳಿ ತಡಮಾಡದೆ ಪಾಲಿಸಿ ಸಲಹಯ್ಯ
ಶ್ರೀ ಲೋಲ ಶ್ರೀವರ ಶ್ರೀವತ್ಸಲಾಂಛನ
ಶ್ರೀ ಶ ಶ್ರೀ ಭೂ ದೇವಿ ರಮಣನೆ
ಮಾತುಳಾಂತಕ ಮದನ ಜನಕನೆ
ವಾಸು ದೇವನೆ ಭಜಿಪ ಭಕ್ತರ
ಸೋಸಿನಲಿ ರಕ್ಷಿಸುತ ಪೊರೆಯುವೆ-೨-

ಭಕ್ತ ವತ್ಸಲ ಸ್ವಾಮಿ ಭಕ್ತರ ಸುರಧೇನು

ಯುಕ್ತ ಮಾತುಗಳಾಡಿ ಸಂತಯಿಸಿ

ಸತ್ಯಸಂಕಲ್ಪನು ಮಂತ್ರವರನು ಕಳುಹಿ

ಸತ್ಯಸಂಧನ ದಶರಥನು ದರದಿ ಪುಟ್ಟೆ -೩- (ಕೀ ೩೮ ಸಂ.೧೮/೨)

ಎಂದು ವರ್ಣಿಸಿದ್ದರೆ, ಲಕ್ಷ್ಮೀನಾರಾಯಣದಾಸರು ಭೂಲೋಕದಲ್ಲಿ ದಶಶಿರ ರಾವಣನು ಮಾನವರಿಗೆ ದೇವತೆಗಳಿಗೆ, ಋಷಿ ಮುಖ್ಯರನ್ನು ಪೀಡಿಸಿದ ಬಗೆಯನ್ನು ಈ ರೀತಿ ಹಾಡಿದ್ದಾರೆ.

....

.....ಪಡೆದು ವರಗಳನು ಕಡು ಖೂಳ ರಾವಣ

ನಡುಗಿಸಿ ಸುರನರ ಭುಜಗರೊಡೆಯರನ್ನು

ಹಿಡಿದು ಮುನೀಶರ ಹೊಡೆದು ಬಡಿದು ಹಿಂಸೆ

ಪಡಿಸುತ್ತ ಯುವತೇರ ದುಡುಕು ಮಾಡುತ್ತಲಿರೆ -೧- (ಕೀ ೨೪೬ ಸಂ ೨೭)

ಬ್ರಹ್ಮನು ನೀಡಿದ ವರಗಳಿಂದ ರಾವಣ ಹೇಗೆ ಲೋಕಕಂಟಕನಾಗಿ ಕೊಟ್ಟ ಹಿಂಸೆಯನ್ನು ವರ್ಣಿಸಿದ್ದಾರೆ.

ತುಪಾಕಿ ವೆಂಕಟರಮಣಾಚಾರ್ಯರು ತಮ್ಮ ಲಾಲಿ ಪದದಲ್ಲಿ ಶ್ರೀರಾಮ ಜನನಕ್ಕೆ ಕಾರಣವನ್ನು ಬಣ್ಣಿಸುವುದು ಹೀಗೆ-

ಧರಣಿ ಭಾರವನು ಬೇಗಿಳುಹಬೇಕೆಂದು

ಸರಸಿಜಾಸನ ಮುಖ್ಯ ಸುರರು ನಡೆತಂದು

ಸಿರಿವರನ ನಿನ್ನ ಪ್ರಾರ್ಥನೆ ಮಾಡಲಂದು

ಧರೆಯೋಳವ ತರಿಸಿ ರಾಜಿಸಿದೆ ಗುಣಸಿಂಧು-೧-

ಧರಚಕ್ರ ಶೇಷರನು ಸರಿಯಾಗಿ ತನ್ನಾ

ವರಜಪದವೈದು ತವತರಿಸಿರಲು ಮುನ್ನ

ಭರತ ಶತ್ರುಘ್ನ ಲಕ್ಷ್ಮಣರೆಂಬರನ್ನ

ಚರಣಸೇವಕರೆನಿಸಿ ಪೊರದಿ ಗುಣರನ್ನ-೨- (ಕೀ ೨೯೮ ಸಂ ೨೩)

ಇತರ ಎಲ್ಲಾ ಹರಿದಾಸರ ಕೀರ್ತನೆಗಳಲ್ಲಿ ದೇವಾನುದೇವತೆ ಋಷಿ ಮುಖ್ಯರು ಬಂದು ದೈತ್ಯರ ಕಾಟವನ್ನು ನಿವಾರಿಸಲು ಭೂಮಿಯಲ್ಲಿ ಅವತರಿಸಲು ಬೇಡಿದರೆ, ಈ ಮೇಲಿನ ಕೀರ್ತನೆಯಲ್ಲಿ ಸ್ವತಃ ಹರಿಯೇ ತಾನು ಧರೆಯ ಭಾರ ಕಡಿಮೆ ಮಾಡಲು, ದೈತ್ಯರನ್ನು ನಾಶಗೊಳಿಸಲು ಧರೆಯಲ್ಲವತರಿಸುತ್ತಾ ತನ್ನ ಜೊತೆ ತನ್ನ ಆಯುಧ, ಶಯನವನ್ನು ಅವತರಿಸಲು ಸೂಚಿಸುವ ಹೊಸ ಅಂಶಗಳನ್ನು ತಿಳಿಸಿದ್ದಾರೆ.

ನಿಡಗುರುಕಿ ಜೀವೂಬಾಯಿ ತಮ್ಮ ದೀರ್ಘಕೀರ್ತನೆಯಾದ ಶ್ರೀರಾಮ ಜನನ ಮತ್ತು ಸೀತಾಕಲ್ಯಾಣದಲ್ಲಿ ಶ್ರೀ ಹರಿಯು ದೇವತೆ ಋಷಿಮುನಿಗಳ ಮೊರೆ ಕೇಳಿ ಪುತ್ರಕಾಮೇಷ್ಠಿ ಯಾಗ

ಮಾಡುತ್ತಿರುವ ದಶರಥನ ಮನೆಯಲ್ಲಿ ಹುಟ್ಟಲು ನಿರ್ಧರಿಸುತ್ತಾನೆ. ಪುತ್ರ ಸಂತಾನವಿಲ್ಲದೆ ಶೋಕತಪ್ತನಾಗಿದ್ದ ದಶರಥನ ವಿಲಾಪವು ಇಲ್ಲಿ ಮನಮಿಡಿಯುವಂತೆ ಚಿತ್ರಿಸಿದ್ದಾರೆ.

ಯಾತರ ಬದುಕಿದು ಯಾತಕೀ ರಾಜ್ಯವು

ಯಾತಕೀ ದೊರೆತನವು

ಯಾತಕೀ ವೈಭವ ಯಾತಕೀ ಅರಮನೆ

ಯಾತಕೀ ಸಂಪದವು -೩- ಕೀ೨(ದೀ) ಸಂ.೧೮/೨)

ಈ ರೀತಿ ಪ್ರಲಾಪಿಸುತ್ತಿದ್ದ ಅರಸನಿಗೆ ಮುನಿಗಳು ಪುತ್ರಕಾಮೇಷ್ಠಿ ಯಾಗ ಮಾಡಲು ಸೂಚಿಸಿ ಅದರಂತೆಯೇ ಯಾಗದ ಫಲದಿಂದ ಆತನಿಗೆ ೩ ಪತ್ನಿಯರಿಗೆ ೪ ಮಕ್ಕಳ ಜನನವಾಗುತ್ತದೆ

ಚೈತ್ರ ಶುದ್ಧನವಮಿಲಿ ಜನಿಸಿದನೆಂದು

ಚಿತ್ತ ಸಂಭ್ರಮದಿ ದಶರಥನು

ಅರ್ಥಿಲಿ ಶ್ರೀರಘುರಾಮಚಂದ್ರನೆಂ

ದಿಟ್ಟರು ನಾಮದ ಹರುಷದಲಿ -೨ - (ಕೀ(ದೀ) ಸಂ. ೧೮೧/೨)

ದಶರಥ ಶ್ರೀಹರಿಗೆ ರಾಮನೆಂಬ ನಾಮಕರಣ ಮಾಡಿ ಚೌಲ ಉಪನಯನ ನಡೆಸುತ್ತಾನೆ ಕೌಸಲ್ಯಾದೇವಿಯು ತನ್ನ ಮಗನಿಗೆ ಜೋಗುಳ ಹಾಡುವ ಸಂದರ್ಭದಲ್ಲಿ ಮುಂದೆ ನಡೆಯುವ ಎಲ್ಲಾ ರಾಮಾಯಣದ ಪ್ರಮುಖ ಘಟನೆಗಳನ್ನು ಈ ರೀತಿ ಹಾಡಿದ್ದಾರೆ.

ಕೌಸಲ್ಯಾದೇವಿಯ ಕಂದನೆ ಜೋ ಜೋ

ಕೌಶಿಕ ಯಜ್ಞದ ಕಾಯ್ದನೆ ಜೋ ಜೋ

ಧ್ವಂಸ ಮಾಡಿದೆ ಖಳತರೆಯನು ಜೋ ರಘು

ವಂಶಾಧಿಪನಾಗಿ ಮೆರೆದಗೆ ಜೋ ಜೋ

ಸೀತಾದೇವಿ ಕೈ ಪಿಡಿದಗೆ ಜೋ ಜೋ

ಧೂರ್ತರಾವಣನ ಕೊಂದಗೆ ಜೋ ಜೋ

ಆರ್ತವಿಭೀಷಣಗೊಲಿದಗೆ ಜೋ ಜೋ

ಮಾತರಿಶ್ವನ ಒಡೆಯಗೆ ಜೋ ಜೋ

ಎಂದು ಇಡೀ ರಾಮಾಯಣದ ಪ್ರಮುಖ ಘಟನೆಗಳನ್ನು ಹಾಡಿರುವುದರಲ್ಲಿ ದಾಸರು ತಮ್ಮ ಸಂಕ್ಷಿಪ್ತ ಸಾಮರ್ಥ್ಯ ಗುಣವನ್ನು ಮೆರೆದಿದ್ದಾರೆ. ಹಾಗೆಯೇ ಶ್ರೀರಾಮ ದಶರಥನರ ಮನೆಯಲ್ಲಿ ಬೆಳೆದ ರೀತಿ, ಆಡಿದ ಆಟಗಳನ್ನು ತಿಳಿಸಿದ್ದು. ದಾಸರು ದೇವರನ್ನು ತನ್ನ ಮಕ್ಕಳ ಸ್ವರೂಪದಲ್ಲಿ ಕಂಡು ತಮ್ಮ ಮಕ್ಕಳಾಡುವ ಆಟಗಳನ್ನು ರಾಮ ಆಡಿದನೆಂದು ಚಿತ್ರಿಸಿದ್ದಾರೆ.

ಚಿಣ್ಣಿಕೋಲು ಚಂಡು ಬುಗುರಿಗಳಿಂದಲಿ

ಬಣ್ಣ ಬಣ್ಣದಾಟಗಳಾಡೆ

ಸಣ್ಣ ಬಾಲಕರು ಮಾತಾಪಿತೃಗಳಿಗೆ

ಚನ್ನವಾಗಿ ಹರುಷವ ಕೊಡುತ –೪–

ಬಗೆ ಬಗೆ ಆಟಗಳಾಡುತ ಬೆಳೆದರು

.....................೫..... (ಕೀ೨(ದೀ) ಸಂ ೧೮/೨)

ಯಾವ ದಾಸರು ಬಣ್ಣಿಸದ ರಾಮನ ಬಾಲ್ಯದ ಜೀವನ ಮತ್ತು ಆತನ ಆಟಗಳನ್ನು ಜೀವೂ ಬಾಯಿಯವರು ಲವಲವಿಕೆಯಿಂದ ಬಣ್ಣಿಸಿದ್ದಾರೆ

ಐಹೊಳೆ ವೆಂಕಟೇಶದಾಸರ ಶ್ರೀರಾಮ ಪಾರಿಜಾತದಲ್ಲೂ ಶ್ರೀರಾಮ ಜನನ, ಈ ಅವತಾರದ ಹಿನ್ನಲೆ ಬಹಳ ದೀರ್ಘವಾಗಿ ಬಂದಿದ್ದು ಇಲ್ಲಿ ದಶರಥನ ಪತ್ನಿಯರು ಗರ್ಭಧರಿಸಿದ ವಿಷಯ ಹಾಗೂ ಅವರ ದೇಹದ ಅವಯುವಗಳಲ್ಲಾದ ಬದಲಾವಣೆಯನ್ನು ಈ ರೀತಿ ಬಣ್ಣಿಸಿದ್ದಾರೆ.

ಸ್ತನ ಮುಖದಿ ಪೊರಮಟ್ಟು ಪೋಗುವುದು ತೋರ್ಪಂತೆ

ಘನಪಯೋಧರದ್ವಯದ ಮುಂದೊನೆಯು ಕಪ್ಪಾಗಿ

ತನುಸೊಬಗು ಜಡಪಿಡಿದು ತನಿಗಂಪಿನಂಗನಿಯ

ರೆಡೆಯಾಟ ಕಳವಡದೆ ಮುಡಿಮುರಿದು ನಿಡಿಗಾಗಿ

ವನುಮತಿಯರೊಳೊತ್ತರಿಸಿ ವದಗಿ ತೋರಿದವು ಮುಂದ –೩–

ಮಿಸುಪ ತೊಡೆವುಗಳು ಮದಗಜಗಮನಿಯರ ಮೈಗೆ

ಕುಸುಮಗಂಧಿನಿಯರು ತಂದಿಡಲು ನಿಬ್ಬರವಾಗಿ

ಹಸನಾದ ತೆಳ್ವಸರು ಜಘನಗಳು ವೈಸರಿಸಿ

ಅಸಿತ ಕೊಂಕುಳವಾಗಿ ಅಡಗಿದವು ತ್ರಿವಳಿಗಳು

ಬಿಸಜಾಕ್ಷಿಯರು ಬಿಡದೆ ಧಡಧಡನೆ ನಡೆದು ಬಾಹೆ

ನಡೆ ಮಂದವಾಗುತಿರೆ ಬಡನಡುವು ಬಳುಕುತ್ತಾ

ಬಿರಿಮುಗುಳು ಕಬರಿಯರ ನಸುನಗಿಯೊಳೊಂದಿರುವ

ನುಡಿಯು ಬಲು ಸಂಣಾಗಿ ಶಶಿಮೊಗವು ಬಿಳ್ಪೇರಿ

ಸೀಮಂತ ಮಣೆಯರಿಗೆ ನಿಟ್ಟುಸುರು ಭಾರೈಸಲೂ ೪–(ಕೀ ೪೬೨ ಸಂ ೨೧/೨)

ಈ ಮೇಲಿನ ಅಂಶಗಳು ವಾಲ್ಮೀಕಿ ರಾಮಾಯಣದಲ್ಲಾಗಲೀ ಮಧ್ವ ರಾಮಾಯಣದಲ್ಲಾಗಲೀ ಕಾಣಸಿಗದು ಇದು ದಾಸರ ಸ್ವಕಲ್ಪಿತ ಅಂಶಗಳಲ್ಲೊಂದಾಗಿದೆ.

ವಾಲ್ಮೀಕಿ ರಾಮಾಯಣದಲ್ಲಿ ದೇವಾನುದೇವತೆಗಳು ಋಷಿಮುನಿಗಳು ದಾನವ ರಾವಣನ ಬಾಧೆಯನ್ನು ಪರಿಹರಿಸಲು ಬೇಕೆಂದು ಬ್ರಹ್ಮನ ಬಳಿ ಹೋಗುತ್ತಾರೆ. ಆಗ ಅಲ್ಲಿ ವಿಷ್ಣು ಪ್ರತ್ಯಕ್ಷನಾಗಿ ಅಭಯ ನೀಡುವ ಪ್ರಸಂಗವಿದ್ದರೆ ಭಾಗವತ ಸಂಪ್ರದಾಯದವರು ಇದನ್ನು ತಿರುಚಿ ದೇವತೆ. ಋಷಿಗಳು ಹೋಗಿದ್ದು

ಬ್ರಹ್ಮನ ಬಳಿಯಲ್ಲ ನೇರವಾಗಿ ಶ್ರೀಹರಿಯ ವೈಕುಂಠಕ್ಕೆ ಎಂದು ಹರಿಯ ಸರ್ವೋತ್ತಮ ಗುಣವನ್ನು ಬಣ್ಣಿಸುತ್ತಾರೆ. ಇದೇ ಅಂಶವನ್ನು ನಮ್ಮ ದಾಸ ಪರಂಪರೆಯಲ್ಲೂ ಕಾಣ ಸಿಗುತ್ತದೆ.

ಕೌಶಿಕ ಆಗಮನ ಮತ್ತು ತಾಟಕಿ ಸಂಹರಣ:-

ದಶರಥನ ಅರಮನೆಗೆ ಬಂದ ಗಾಧಿಪುತ್ರ ಕೌಶಿಕನು ತನ್ನ ಯಾಗ ರಕ್ಷಣೆಗೆ ಶ್ರೀರಾಮನನ್ನು ಕಳುಹಿಸಬೇಕೆಂದು ಕೇಳಿದಾಗ ದಶರಥ ತನ್ನ ಬಾಲ ರಾಮನನ್ನು ಕಳುಹಿಸಲು ನಿರಾಕರಿಸಿ ತಾನೇ ಯಾಗ ರಕ್ಷಣೆಗೆ ಬರುವುದಾಗಿ ಹೇಳುತ್ತಾನೆ. ಆದರೆ ಕೌಶಿಕನ ಕೋಪಕ್ಕೆ ಹೆದರಿ ರಾಮನನ್ನು ಯಾಗ ರಕ್ಷಣೆಗೆ ಕಳುಹಿಸುತ್ತಾನೆ. ಲಕ್ಷ್ಮಣನೊಡನೆ ಕಾಡಿಗೆ ಹೋದ ರಾಮ ಅಲ್ಲಿ ಕೌಶಿಕನಿಂದ ಅತ್ಯುತ್ತಮ ಅಸ್ತ್ರೋಪಸಂಹಾರ ಮಂತ್ರ, ಬ್ರಹ್ಮಾಸ್ತ್ರ ದಿವ್ಯಾಸ್ತ್ರಗಳೊಡನೆ ಬಲ ಅತಿಬಲ ಎಂಬ ವಿದ್ಯೆಗಳನ್ನು ಕಲಿತು ಲಕ್ಷ್ಮಣನೊಡನೆ ಕೋದಂಡಧಾರಿಯಾಗಿ ತಾಟಕಿ, ಮತ್ತು ಆಕೆಯ ಮಕ್ಕಳಲ್ಲಿ ಒಬ್ಬನಾದ ಸುಬಾಹುರನ್ನು ಕೊಂದು ಮಾನವಾಸ್ತ್ರದ ಮೂಲಕ ತಾಟಕಿಯ ಮತ್ತೋರ್ವ ಮಗ ಮಾರೀಚನನ್ನು ಸಮುದ್ರಕ್ಕೆ ತಳ್ಳಿದನು. ಹೀಗೆ ವಾಲ್ಮೀಕಿ ರಾಮಾಯಣದಲ್ಲಿ ಕೌಶಿಕ ಆಗಮನ, ರಾಮಲಕ್ಷ್ಮಣರಿಂದ ಯಾಗ ರಕ್ಷಣೆ ತಾಟಕಿ ಸುಬಾಹು ವಧೆಯು ತುಂಬಾ ವರ್ಣನಾತ್ಮಕವಾಗಿ ಮೂಡಿಬಂದಿದೆ.

ಆಚಾರ್ಯರು ಕೇವಲ ೫ ಶ್ಲೋಕಗಳಲ್ಲಿ ಕೌಶಿಕ ಆಗಮನ, ಯಾಗ ರಕ್ಷಣೆ, ತಾಟಕಿ ಸುಬಾಹು ಮಾರೀಚ ವಧೆ ಇವುಗಳನ್ನು ಸಂಕ್ಷೇಪವಾಗಿ ವಿವರಿಸಿದ್ದಾರೆ. ಹರಿದಾಸರು ಈ ಸಂದರ್ಭವನ್ನು ಹರಿಯ ಶಿಷ್ಟರಕ್ಷಕ ದುಷ್ಟನಿಗ್ರಹ ಗುಣವನ್ನು ಕೊಂಡಾಡಲು ಹೇರಳವಾಗಿ ಬಳಸಿಕೊಂಡಿದ್ದಾರೆ.

ಚಿಕ್ಕ ಪ್ರಾಯದಿ ಬಲು ರಕ್ಕಸಿಯ ಸೀಳಿ(ಕೀ ೨೯೧ ಸಂ೨)

ರಾಮನ ಸಾಹಸ ವರ್ಣನೆಯನ್ನು

ಋಷಿ ಮುಖ ರಕ್ಷಿಸಿ ಶರದಿ

ಅಸುರೆಯ ಭಂಗೀರಿಸಿ ನಡೆಯಲಿ ಮುನಿ-೧- (ಕೀ ೨೫೯ ಸಂ.೧೧/೧)

ಎಂದು ರಾಮನಲ್ಲಿ ನಂಬಿಕೆಯು

ಮುಖವ ರಕ್ಷಿಸಿ ರಾಜ ಋಷಿಗಭಿಷ್ಠೆಯನ್ನಿತ್ತ-೮- (ಕೀ ೯೭ ಸಂ೮)

ಎನ್ನುತ ರಾಮನ ಅಭಯ ಪ್ರದಾನವನ್ನು

ಗಾಧಿನಂದನನ ಸುಮೇಧಾರಕ್ಷಿಸಿದಾ

......................-೨- (ಕೀ ೩೭ ಸಂ೧೪)

ಎನ್ನುವಲ್ಲಿ ರಾಮನನ್ನು ಸ್ತುತಿಸಿದ್ದಾರೆ.

ಯಾಗ ರಕ್ಷಣೆಗಾಗಿ ಕೌಶಿಕ

ಕೂಗಿ ಲಾಕ್ಷಣ ಓಡಿಪೋದೆ-೧- (ಕೀ.೨೩ ಸಂ ೨೨೧/೨)

ಕೌಶಿಕನ ಪ್ರತಿ ಕರುಣೆ ತೋರಿ ಆತನ ಯಾಗ ರಕ್ಷಣೆಗೆ ಆತನನ್ನು ಹಿಂಬಾಲಿಸಿದ ಹರಿಯು ತಾನು ಪ್ರತಿದಿನ ಹರಿಯ ನಾಮಸ್ಮರಣೆ ಮಾಡಿದರು ತನ್ನಲ್ಲಿ ಏಕೆ ಕರುಣೆಯಿಲ್ಲ ತನ್ನನ್ನೇಕೆ ಉದ್ದರಿಸಲಿಲ್ಲ ಎಂದು ರಾಮನನ್ನು ನಿಂದಿಸುತ್ತಾರೆ

ಸಂಕ್ಷಿಪ್ತ ರಾಮಾಯಣವನ್ನು ಹಾಡುವಾಗ ಹರಿದಾಸರು ಕೌಶಿಕಯಾಗ ರಕ್ಷಣೆ ಮತ್ತು ತಾಟಕಿ ಸುಬಾಹು ವಧೆಯನ್ನು ಒಂದೊಂದು ನುಡಿಯಲ್ಲಾದರು ಪ್ರಸ್ತಾಪಿಸುತ್ತಾರೆ.

ನಂಜನಗೂಡು ತಿರುಮಲಾಂಬರವರು ತಮ್ಮ ಸಂಕ್ಷಿಪ್ತ ರಾಮಾಯಣದಲ್ಲಿ

....

ಅಸುರೆ ತಾಟಕಿಯ ಅಸುವನಳಿದು ದುಷ್ಟ

ನಿಶಿಸಾರರನು ಸದೆದು ಅನುಜನೊಡಗೊಂಡು

ಕೌಶಿಕನಂದನನ ಕ್ರತುವನು ತಾ ಕಾಯ್ದು

ಅಸಮ ಶೂರನೆನಿಸಿ ಅಮರರ ಮನತಣಿಸಿ-೧-(ಕೀ೬೪ ಸಂ ೧೮/೪)

ಎನ್ನುತ್ತ ಶ್ರೀರಾಮ ರಾಕ್ಷಸರಿಂದ ಮುನಿಗಳ ಯಾಗರಕ್ಷಿಸಿ ಅವರ ಮನತಣಿಸಿ ಅತ್ಯಂತ ಶೂರನೆನಿಸಿದ ಎಂದರೆ ಯದುಗಿರಿಯಮ್ಮನವರು ತಮ್ಮ ಶ್ರೀರಾಮಧ್ಯಾನ ಎಂಬ ಕೀರ್ತನೆಯಲ್ಲಿ "ಕರೂಶದೇಶಕ್ಕೆ ಬಂದು ತಾಟಕಿಯನು ಕೊಂದು(ಕೀ೩/೩೧.ಸಂ ೧೮/೪)"ರಾಮ ತಾಟಕಿಯನ್ನು ಕೊಂದ ದೇಶದ ಹೆಸರನ್ನು ಉಲ್ಲೇಖಿಸುತ್ತಿದ್ದಾರೆ. ವಾಲ್ಮೀಕಿ ರಾಮಾಯಣವನ್ನು ಬಹಳ ಸೂಕ್ಷ್ಮವಾಗಿ ಓದಿ ಅಲ್ಲಿನ ಪ್ರತಿಯೊಂದು ಸ್ಥಳ ಪಾತ್ರಗಳ ವಿವರಣೆಯನ್ನು ಕೊಡುವುದರಲ್ಲಿ ಉಲ್ಲೇಖ ಮಾಡುವುದರಲ್ಲಿ ಹರಿದಾಸರು ಎಷ್ಟು ನಿಪುಣರು ಎಂಬುದಕ್ಕೆ ಪ್ರತಿಯೊಂದು ಪ್ರಸಂಗಕ್ಕೆ ಒಂದೊಂದು ಉದಾಹರಣೆ ದೊರೆಯುತ್ತದೆ.

ಐಹೊಳೆ ವೆಂಕಟೇಶದಾಸರು ಶ್ರೀರಾಮಪಾರಿಜಾತ ಎಂಬ ದೀರ್ಘಕೀರ್ತಿನೆಯಲ್ಲಿ ದಶರಥರಮನೆಗೆ ಕೌಶಿಕ ಆಗಮನವನ್ನು ಕೌಶಿಕ ಸ್ವಭಾವವನ್ನು ಈ ರೀತಿ ಹಾಡಿದ್ದಾರೆ.

ಬಿಟ್ಟಾ ಜಡಿಯು ಭಾರದಿರಲು ದಿಟ್ಟ ಮುನಿಯೂ

ಕಟ್ಟಿ ಕೆಡಹುವ ಶಾಪದಲಿ ಬಲು

ನಿಟ್ಟಿಸುವ ಜನರಿಂಗೆ ಭೀಕರ

ಪುಟ್ಟಿಸುವನೆಂಬುದನು ಸಾರುತ

ನೆಟ್ಟನಾ ಭೂಪತಿಯ ಬಳಿಗೆ -೨- (ಕೀ೪೬೨ ಸಾ೨೧/೨)

ಕೋಪಿಷ್ಟನಾದ ಕೌಶಿಕ ಮುನಿಯ ಸ್ವಭಾವ ಚಿತ್ರಣವನ್ನು ಬಹಳ ಪರಿಣಾಮಕಾರಿಯಾಗಿ ಬಣ್ಣಿಸುತ್ತಾ ತನ್ನ ಯಾಗ ಕಾರ್ಯಕ್ಕೆ ಮತ್ತು ಇತರ ಮುನಿಗಳಿಗೆ ದೈತ್ಯರು ತೊಂದರೆ ಕೊಡುತ್ತಿರುವುದಾಗಿ ಅದರ

ನಿವಾರಣೆಗೆ ರಾಮನನ್ನು ತನ್ನೊಡನೆ ಕಳುಹಿಸಬೇಕೆಂದು ಕೇಳಿದಾಗ ತಂದೆಯಾದ ದಶರಥ ತನ್ನ ಮಗನ ಪ್ರತಿ ಚಿಂತಿತನಾಗಿ ಕೌಶಿಕಮುನಿಯಲ್ಲಿ ಈ ರೀತಿ ಬೇಡಿಕೊಳ್ಳುತ್ತಾನೆ.

ಕೋಮಲಾ ತನುವಿನ ಶೈಶವರಿವರೊ

ನೈಮಿತದೈಸರವತ್ತು ಉಂಣುವರೋ -೧-

ಲಲಿತ ಪೂವಿನ ಶರನಿಮಣರೋ ಮುಂನಾ

ಸಲಹುವರಿಂನೆಂತೋಯೋ ಮುನಿಯ ನಿಂನೆ ಜನಾ -೨-(ಕೀಳಿಟಿ೨ ಸಂ ೨೧/೨)

ರಾಮ ಇನ್ನೂ ತರಳ ತಾನು ಬೇಕಾದರೆ ಬಂದು ಯಾಗರಕ್ಷಣೆ ಮಾಡುವೆನೆಂದೆನ್ನುತ್ತಾನೆ ಆಗ ವಸಿಷ್ಠರೂ ವಿಶ್ವಾಮಿತ್ರರ ಬಗೆಗೆ ಸವಿವರವಾಗಿ ಅರಸನಿಗೆ ತಿಳಿಸಿ ರಾಮನನ್ನು ಕೌಶಿಕನೊಡನೆ ಕಳುಹಿಸಲು ಒಪ್ಪಿಸುತ್ತಾರೆ ಮಿಕ್ಕೆಲ್ಲ ಘಟನೆಗಳು ವಾಲ್ಮೀಕಿ ರಾಮಾಯಣದಂತೆ ದೀರ್ಘವಾಗಿ ಬಂದಿದೆ.

ಇಲ್ಲಿ ಗಮನಿಸಬೇಕಾದ ಅಂಶ ಸಾತ್ವಿಕರಾದ ಹರಿದಾಸರು ಯುದ್ಧಾವರ್ಣನೆ ನೀಡುವುದರಲ್ಲಿ ಹಿಂದೇಟಾಗಿರುವಾಗ ಜೊತೆಗೆ ರಾಮನು ಸ್ತ್ರೀಯಾದ ತಾಟಕಿಯನ್ನು ಕೊಂದಿದ್ದರಿಂದ 'ಸ್ತ್ರೀಹತ್ಯಾ' ಪ್ರಸಂಗವನ್ನು ದೀರ್ಘವಾಗಿ ವರ್ಣಿಸದಿರುವುದನ್ನು ನೋಡಬಹುದು. ರಾಮನ ಮಹಿಮೆ, ಶಿಷ್ಟ ರಕ್ಷಣಕಾರ್ಯ ವಿವರಿಸಬೇಕಾದ್ದಲ್ಲಿ ಸಂಕ್ಷಿಪ್ತ ರಾಮಾಯಣ ಹಾಡಬೇಕಾದ ಸಂದರ್ಭದಲ್ಲಿ ಪ್ರಮುಖ ಪ್ರಸಂಗವಾದ ತಾಟಕಿ ಸುಬಾಹು ವಧೆಯನ್ನು ತ್ಯಜಿಸಲಾರದೆ ಕೇವಲ ಒಂದು ನುಡಿಯಲ್ಲಿ ಒಂದು ಸಾಲಿನಲ್ಲಿ ಹಾಡಿ ಮುಗಿಸುತ್ತಾರೆ.

ಅಹಲ್ಯೋದ್ಧಾರ :-

ದೇವೇಂದ್ರನೊಡನೆ ಮನಃಪೂರ್ವಕವಾಗಿ ಕೂಡಿದ್ದಕ್ಕಾಗಿ ಅಹಲ್ಯೆಯು ಕಲ್ಲಾಗಿರುವಂತೆ ಆಕೆಯ ಪತಿ ಗೌತಮ ಋಷಿ ಶಪಿಸದನೆಂದು. ಶ್ರೀರಾಮನ ಪಾದವು ಆ ಕಲ್ಲಿಗೆ ತಾಕಿದೊಡನೆಯೇ ತನ್ನ ನಿಜರೂಪವನ್ನು ಪಡೆದು ಎದ್ದಳೆಂದು ಜನಜನಿತ ಕತೆ ಪ್ರಸಿದ್ಧವಾಗಿದೆ. ಆದರೆ ವಾಲ್ಮೀಕಿ ರಾಮಾಯಣದಲ್ಲೂ ತನ್ನ ಪತ್ನಿಯ ದುರ್ನಡತೆಯನ್ನರಿತು ಅಹಲ್ಯೆಗೆ ಈ ರೀತಿ ಶಾಪ ನೀಡಿರುತ್ತಾನೆ.

"ವಾಯು ಭಕ್ಷಾ ನಿರಾಹಾರ ತಪ್ಯನ್ತೀ ಭಸ್ಮಾಶಾಯಿನೀ!

ಅದೃಶ್ಯಾ ಸರ್ವಭೂತಾನಾ ಮಾಶ್ರಮೇಸ್ಮಿನ್ವಸಿಷ್ಯಸಿ"[೧]

"ದುರ್ವೃತ್ತಿಯುಳ್ಳವಳೇ! ನೀನು ಸಾವಿರ ವರ್ಷಗಳ ಕಾಲ ಈ ಉಪವನದಲ್ಲಿಯೇ ಗಾಳಿಯನ್ನೇ ಆಹಾರವನ್ನಾಗಿ ಸೇವಿಸುತ್ತಾ, ನಿರಾಹಾರಳಾಗಿ ಭಸ್ಮರಾಶಿಯ ಮೇಲೆ ಮಲಗುತ್ತಾ ಸಕಲ ಪ್ರಾಣಿಗಳಿಗೂ ಅದೃಶ್ಯಳಾಗಿ ಈ ಆಶ್ರಮದಲ್ಲಿ ವಾಸ ಮಾಡುವೆ"!

ದಶರಥ ಪುತ್ರ ಶ್ರೀರಾಮ ಈ ಆಶ್ರಮಕ್ಕೆ ಬಂದಾಗ ನಿನ್ನ ಶಾಪ ವಿಮೋಚನೆಯಾಗುವುದೆಂದು ಶಾಪಕ್ಕೆ ಪರಿಹಾರ ಹೇಳಿದರು. ಗೌತಮನು ಅಹಲ್ಯೆಗೆ ಶಾಪಕೊಟ್ಟ ವಿಷಯವನ್ನು ವಿಶ್ವಾಮಿತ್ರರಿಂದರಿತು ರಾಮ, ಲಕ್ಷ್ಮಣ ವಿಶ್ವಾಮಿತ್ರರೊಡನೆ ಆಶ್ರಮ ಪ್ರವೇಶಿಸಿದೊಡನೆ ಅಹಲ್ಯೆ ಪುನಃ ಎಲ್ಲರಿಗೂ

ಗೋಚಾರವಾದಳೆಂದೂ ವಾಲ್ಮೀಕಿ ರಾಮಾಯಣದಲ್ಲಿ ನಿರೂಪಿತವಾಗಿದೆ. ಗಾಳಿಯಾಗಿರು ಎಂಬ ಮಾತನ್ನಾಗಲೇ ಪುರಾಣಗಳು ಪಾಷಾಣ(ಶಿಲೆ) ರೂಪಿಯಾಗು ಎಂದು ಬದಲಾಯಿಸಿದ್ದು ಅದನ್ನೇ ಹರಿದಾಸರು ಸ್ವೀಕರಿಸಿದ್ದಾರೆ.

ಪುರಾಣಗಳಲ್ಲಿ ಉಕ್ತವಾಗಿರುವ ವಿಷಯವನ್ನೇ ಶ್ರೀಮದಾಚಾರ್ಯರು ತಮ್ಮ ತಾತ್ಪರ್ಯ ನಿರ್ಣಯದಲ್ಲಿ ಈ ರೀತಿ ಹೇಳಿದ್ದಾರೆ.

"ಅಥೋಅಹಲ್ಯಾಂಪತಿನಾಭಿಶಪ್ತಾಂಪ್ರದರ್ಷಣಾದಿಂದ್ರ ಕೃತಾಚ್ಛ ಲೀಕೃತಾಮ್

ಸ್ವದರ್ಶನಾನ್ಮನುಷತಾಮುಪೇತಾಂ ಸುಯೋ ಜಯಾಮಾಸ ಸ ಗೌತಮೇನ್ – ೨-

ಅಃ "ಅಹಲ್ಯೆಯು ಇಂದ್ರದೇವರು ಮಾಡಿದ ಬಲಾತ್ಕಾರದ ರಮಣದ ಕಾರಣದಿಂದಾಗಿ ತನ್ನ ಪತಿಯಾದ ಗೌತಮನಿಂದ ಶಪಿಸಲ್ಪಟ್ಟು ಶಿಲೆಯಂತಾಗಿಸಲ್ಪಟ್ಟಳು. ಶ್ರೀರಾಮನ ದರ್ಶನದಿಂದ ಅವಳು ಪುನಃ ಮನುಷ್ಯರಂತಾದಳು ಅಂತಹ ಅಹಲ್ಯೆಯನ್ನು ರಾಮನು ಗೌತಮನೊಡನೆ ಚೆನ್ನಾಗಿ ಜೊತೆಗೂಡಿಸಿದನು".

ಇಲ್ಲಿ ಮೂಲ ವಾಲ್ಮೀಕಿ ರಾಮಾಯಣದಂತೆ ಅಹಲ್ಯೋದ್ಧಾರ ಕತೆ ಬಂದರೂ ಮನಃ ಇಚ್ಛೆಯಿಂದ ಇಂದ್ರನೊಡನೆ ಕೂಡಿದ್ದಳು. ಹಾಗೂ ರಾಮ ಆಶ್ರಮಕ್ಕೆ ಆಗಮಿಸದೊಡನೆ ಆಕೆ ತನ್ನ ನಿಜರೂಪಕ್ಕೆ ಬರುತ್ತಾಳೆ. ಆದರೆ ಶ್ರೀಮದಾಚಾರ್ಯರು ಅಹಲ್ಯೆಗೆ ಇಂದ್ರ ಬಲತ್ಕರಿಸಿದ್ದು ಆಕೆ ಪತಿತಳಲ್ಲ ಅಬಲೆಸ್ತ್ರೀ ವಿನಾಕಾರಣ ಪತಿಯ ಶಾಪಕ್ಕೆ ಗುರಿಯಾದಳು ಕಲ್ಲಾದ ಅಹಲ್ಯೆಗೆ ರಾಮನ ಪಾದಸ್ಪರ್ಶದಿಂದ ತನ್ನ ನಿಜರೂಪ ಪಡೆದಳು ಎಂಬ ವಿಷಯ ಹೇಳುತ್ತಾ ಅಹಲ್ಯೆಯನ್ನು ಸತಿಶಿರೋಮಣಿ ಎಂಬ ಭಾವ ಈ ಮೇಲಿನ ಶ್ಲೋಕದಲ್ಲಿ ಅಡಗಿದೆ.

ಅಹಲ್ಯೋದ್ಧರದ ವಿಷಯದಲ್ಲಿ ಹರಿದಾಸರು ಪುರಾಣೋಕ್ತ ವಿಷಯ ಶ್ರೀ ಮದಾಚಾರ್ಯರ ಕಥಾಸರಣಿಯನ್ನೇ ಅನುಸರಿಸಿರುವುದನ್ನು ಕಾಣಬಹುದು ಪತಿಶಾಪದಿಂದ ಕಲ್ಲಾದ ಅಹಲ್ಯೆ ರಾಮನ ಪಾದಸ್ಪರ್ಶವಾಗಿ ಹೆಣ್ಣಾದಳು ಇದೇ ವಸ್ತುವನ್ನಾಗಿಸಿ ಆಧಾರವಾಗಿಟ್ಟುಕೊಂಡು ಹರಿದಾಸರು ಶ್ರೀಹರಿಯ ಪಾದ ಸ್ತುತಿ ಬಂದಾಗಲೆಲ್ಲ ಅಹಲ್ಯೆಯ ವಿಷಯವಿಲ್ಲದೆ ಮುಗಿಯದಿರುವುದು ನೂರಾರು ಕೀರ್ತನೆಗಳಲ್ಲಿ ಕಾಣಸಿಗುತ್ತದೆ.

ಅಂಬುಜಾಕ್ಷಿಯಳಾದ ಅಹಲ್ಯೆ ಬಲ್ಲಳಂತೆ!

ಅಂಬುಜಾಕ್ಷನ ಪಾದ ಸಂಭ್ರಮದ ಸವಿ ೩(ಕೀ ೨೧೦ ಸಂ ೩೨)

ಎಂದು ರಾಮದಾಸರು ಅಹಲ್ಯೆಯ ಹರಿಭಕ್ತಿಯು ಆಕೆ ಮಾಡಿದ್ದ ಪಾಪ ರಾಮನ ಪಾದಸ್ಪರ್ಶದಿಂದ ಪಾವನವಾಯಿತು. ಇದರ ಸವಿಯುಂಡ ಅಹಲ್ಯೆಗೆ ಪಾದಮಹಿಮೆ ತಿಳಿದಿದೆ ಎಂದಿದ್ದಾರೆ.

ಪುರಂದರದಾಸರು ಶ್ರೀಹರಿಯ ಭಗಲೀಲೆಗಳನ್ನು ಕೊಂಡಾಡುತ್ತಾ

ಪತಿ ಶಾಪದಿ ಶಿಲೆಯಾದ ಅಹಲ್ಯೆಯ ಹಿತದಿಂದ ವಳನು ಉದ್ಧರಿಸಿ

ಪತಿಯೊಡಗೂಡಿಸಿ ಪತಿವ್ರತೆಯೆನಿಸಿದ-ಅ-

ಮಿತಮಹಿಮೆಯ ಕೃತಿಯಲ್ಲಿ ಕಲಿತೆಯೊ -೧೭-(ಕೀ ೧೨೦ ಸಂ ೩/೧)

ಪತಿಯ ಕೋಪಕ್ಕೆ ಗುರಿಯಾದ ಸತಿಯನ್ನು ಮತ್ತವಳ ಮೇಲೆ ಕೋಪಿತಗೊಂಡ ಪತಿಯನ್ನು ಹಿತದಿಂದ ಸಮಾಧಾನ ಮಾಡಿ ಅವಳನ್ನು ಪತಿವ್ರತೆಯನ್ನಾಗಿ ಮಾಡಿದ್ದು ಹರಿಯ ಆಟ. ಇಲ್ಲಿ ದಾಸರು ಅಹಲ್ಯೆಯ ಅಕ್ರಮ ಪ್ರಣಯಗಳನ್ನು ವ್ಯಾಚ್ಯವಾಗಿ ಎಲ್ಲ ಪರೋಕ್ಷವಾಗಿ ಹೇಳಿದ ಅವರು ಅಹಲ್ಯೆ ಪತಿವ್ರತೆ ಎಂದು ಸಾರಿದರು.

ಹರಿಯು ಒಲಿಯುವುದು ಯೋಗ್ಯರಿಗೆ ಹೊರತು ಅಯೋಗ್ಯರಿಗಲ್ಲ "ಯೋಗ್ಯತೆಯಿದ್ದಲ್ಲಿ ಮಾತ್ರ ಫಲಪ್ರಾಪ್ತಿ' ಎನ್ನುತ ವಾದಿರಾಜರು ಅಹಲ್ಯೆಯು ಪತಿವ್ರತೆ ಹಾಗೂ ಹರಿಭಕ್ತೆ ಆದ್ದರಿಂದ ಕಲ್ಲಾಗಿದ್ದವಳು ರಾಮನ ಪಾದ ಸ್ಪರ್ಶದಿಂದ ಹೆಣ್ಣಾದಳು

.........ಅ

ಅಹಲ್ಯೆಯಿದ್ದ ಶಿಲೆ ಹೆಣ್ಣಾದ ವೋಲು ಇಂ

ತುಳಿದದ್ದು ಹೆಣ್ಣಾಯಿತೆ -೩೭- (ಕೀ ೩೪೦ ಸಂ ೨)

ಎಂದರೆ ಯೋಗ್ಯರಿಗೆ, ಭಕ್ತರಿಗೆ ಅವರ ತಕ್ಕಫಲ ದೊರೆಯುತ್ತದೆ. ಯೋಗ್ಯಳಾಗಿದ್ದ ಅಹಲ್ಯೆ ಮಾತ್ರ ಕಲ್ಲಿಂದ ಹೆಣ್ಣಾದಳು ಅದಲ್ಲದೆ ರಾಮ ತುಳಿದ ಮತ್ಯಾವ ಕಲ್ಲು ಹೆಣ್ಣಾಗಲಿಲ್ಲ.

ರಂಗೇಶ ವಿಠಲರು ಅಹಲ್ಯಾ ಶಾಪ ವಿಮೋಚನೆಯನ್ನು ಹೀಗೆ ವಿವರಿಸಿದ್ದಾರೆ

ಹಲವು ಕಾಲದಿ ಶಿಲೆಯಾಗಿರ್ದ

ಲಲನೆ ಅಹಲ್ಯೆಯ ಶಾಪವ ಹರಿಸಿ

ಕಲುಷವ ಕಳೆಯುತ ಕುಲಸತಿ ಮಾಡಿದ

ಚಲುವ ಮಾರುತಿ ನಳಿನ ನಯನನ-೨- (ಕೀ ೧೪೨ ಸಂ.೨೭)

ಮಾಡಬಾರದ ಕೃತ್ಯವನ್ನು ಕಾಮನ ವಶವಾಗಿ ಮಾಡಿ ಪತಿತಳಾಗಿದ್ದ ಅಹಲ್ಯೆಯನ್ನು ತನ್ನ ಪಾದಸ್ಪರ್ಶದಿಂದ ಅವಳ ಶಾಪವನ್ನು ಕಳೆದು ಆಕೆಯನ್ನು ಪಂಚಮಹಾಪತಿವ್ರತೆಯಲ್ಲಿ ಮೊದಲನೆಯವಳನ್ನಾಗಿಸಿದ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ.

ವಿದ್ಯಾರತ್ನಾಕರ ತೀರ್ಥರು ತಮ್ಮದೊಂದು ಕೀರ್ತನೆಯಲ್ಲಿ ಹರಿಯ ಮಹಿಮೆಯನ್ನು ಅಹಲ್ಯಾ ಪ್ರಸಂಗದಲ್ಲಿ ಈ ರೀತಿ ಹೊಗಳಿದ್ದಾರೆ.

ಕೃತಿರಮಣನೇ ಮುನಿಸತಿಯು ಶಾಪದಿ ಶಿಲಾ

ಕೃತಿಯಾಗಿರಲು ಶ್ರೀಪತಿಯೇ ನೀ ಬಂದು

ರತಿಪತಿಪಿತನೆ ಯುವತಿಯನ್ನೇ ಮಾಡಿದ

ಪತಿತಪಾವನ ನೀನಲ್ಲವೇನೋ ಹರಿಯೆ -೧- (ಕೀ ೯೪ ಸಂ ೨೮)

ಇಲ್ಲಿ ಪತಿತಳಾಗಿದ್ದ ಅಹಲ್ಯೆಯ ಶಾಪ ಕಳೆದು ಪಾವನಗೊಳಿಸಿ ರಾಮನು ಪತಿತಪಾವನ ನಾದ ಕೀರ್ತಿಯನ್ನು ಗಳಿಸಿದ ಬಗೆಯನ್ನು ಸೂಚಿಸಿದ್ದಾರೆ.

ನಾರಾಯಣ ದಾಸರು "ಸುಗುಣೆ ಅಹಲ್ಯಾ ಶಾಪದ ಪಾದದಂತಿದ್ದಿ" ಎನ್ನುತ್ತಾ ಅಹಲ್ಯೆಯ ಸುಗುಣಿ ಎಂದು ಹಾಡಿದ್ದರೆ ಹಲವು ಕೀರ್ತನೆಗಳ ಪಾದಗಳಲ್ಲಿ ಅಹಲ್ಯೆಯನ್ನು ಪತಿವ್ರತೆಯೆಂದು ಹೊಗಳಿ ಪತಿತೆಯೆಂದಲೂ ತೆಗಳಿರುವ ಉದಾಹರಣೆ ಸಿಗುತ್ತದೆ. ತುಪಾಕಿ ವೆಂಕಟರಮಣಾಚಾರ್ಯರು "ಖಿಲ್ಲ ಚೇಷ್ಟೆಯ ಮಾಡಿ ಕಲ್ಲಾಗಿ ಬಿದ್ದ ಅಹಲ್ಯೆ ಪತಿವ್ರತೆ ಎಂಬು ಬಿರುದುಕೊಟ್ಟ" (ಕೀ ೦೮ ಸಂ ೨೩) ಎಂತಲೂ ಸರಸ್ವತಿ ಓರಬಾಯಿಯವರು "ಮತಿಹೀನಹಲ್ಯೆಯ ಪತಿವ್ರತೆಯೆನಿಸಿದ ಪತಿತಪಾವನ ಶ್ರೀ ರಾಮ ನಿನ್ನ ಪಾದ" ಎಂದು ಅಹಲ್ಯೆ ಮಾಡಿದ್ದ ಪಾಪ ಕಾರ್ಯವನ್ನು ಸ್ಮರಿಸುತ್ತಾರೆ. ಇಂಥ ಪತಿತೆಯನ್ನು ಪಾವನ ಗೊಳಿಸಿದ ಶ್ರೀ ರಾಮನ ಕರುಣಾಭಾವವನ್ನು ಹೊಗಳುತ್ತಾರೆ.

ಶ್ರೀ ರಾಮ ನಾಮ ಎಂಬೆರಡಕ್ಷರದ ಮಹಿಮೆಯನ್ನು ಕೊಂಡಾಡುತ್ತಾ ವಿಜಯದಾಸರು

ಆಲಾಪಿಸುತ್ತ ಶಿಲೆಯಾಗಿದ್ದ

ಬಾಲೆ ಅಹಲ್ಯೆಯನು ಕೇಳೇನು –೧– (ಕೀ ೩೧ ಸಂ ೧೮/೪)

'ರಾಮ ಎಂಬೆರಡರಕ್ಷರ ಮಹಿಮೆ ಅದರ ಸಾಮರ್ಥ್ಯವನ್ನು ಅಹಲ್ಯೆಯೇ ಬಲ್ಲಳು ಎನ್ನುತ್ತ ಹರಿಭಕ್ತಿಯು ಎಂತಹ ದುರಿತನವನು ತರಿಯಬಲ್ಲ ಅಪೂರ್ವ ಸಾಧನ ಎಂಬ ತತ್ವ ಇದರಿಂದ ಪ್ರಕಾಶಿತವಾಗಿದೆ.

ಐಹೊಳೆ ವೆಂಕಟೇಶದಾಸರು ತಮ್ಮ 'ಶ್ರೀರಾಮ ಪಾರಿಜಾತ' ಎಂಬ ದೀರ್ಘಕೀರ್ತನೆಯಲ್ಲಿ ಅಹಲ್ಯಾ ವೃತ್ತಾಂತವು ಬಹಳ ದೀರ್ಘವಾಗಿ ಬಂದಿದೆ.

"ಇದು ಪೂರ್ವದಲಿ ಕೇಳೋ ಗೌತಮನ ಸದನವೈ
ಮುದದಿ ಮುನಿ ಸತಿಯಳಿಗೆ ಮದನವಿಕ್ಕಿ ಸುರನಾಥ
ಮದನ ಶರಕ್ಕೊಳಗಾಗಿ ಮತ್ತವಳ ಭೋಗದಲಿ
ಸಿಲುಕಿ ಮಿಡುಕಿದಾಗ ಶಾಪದಿಂದೊಡಗೂಡಿ
ಬಲುಮೆಯಲಿ ಪರವಧುವನ್ನು ದೆಡದ ವರಾರೊ
ಅರಸ ಕೇಳಿಪೆಯಲಿ ಅಂಗಭಂಗದೊಳಿಂದ್ರ ಪುಕೈದಿದನು ಬಳಿಕ
ಇತ್ತ ಗೌತಮನು ತಂದ ಸತಿಯೆನಿಪ ಅಹಲ್ಯಳಿಗೆ
ಸಮರಾತ್ರಿಯಲಿ ಪರರ ಸ್ಥಿತಿಯು ನೀನರಿಯದೆಲೆ
ನೆರದ ಕಾರಣದಿಂದ ಉರುತರದ ಸಿಲಿಯಾಗಿ
ಬೀಳೆನಲು ಬಿದ್ದಿಹಳು ಸರಸಿಜಾಂಬಕನಿದರ
ಸಂಗತಿಯ ನೋಡೆನುತ ಸಾರೆಯಕ ಬರಬರಲು
ರಾಮಾಂಘ್ರಿ ರಜವಾಗ ಆವರಿಸದಲಕ್ಷಣ ತೋರಿದಳು

ಮು ನಿಂ ನಾಕೃತಿಯಂತೆ ಸಿಲಿಯೊಳುದ್ಭವಿಸಿದಂತೆ" – ೪–(ಕೀ ೪೬೨ ಸಂ ೨೧/೨)

ವಾಲ್ಮೀಕಿ ರಾಮಾಯಣದ ಪ್ರಕಾರ ಅಹಲ್ಯೆಯೊಡನೆ ಇಂದ್ರ ಕೂಡಲು ಕಾರಣ ಗೌತಮನ ತಪಸ್ಸಿಗೆ ವಿಘ್ನ ಮಾಡಿ ಆತನಲ್ಲಿ ಕೋಪವನ್ನು ಹುಟ್ಟಿಸಿ ಅದರ ತಪಸ್ಸನ್ನು ಹಾಸ್ರಗೊಳಿಸಿ ದೇವತಾಕಾರ್ಯ ನೆರವೇರಿಸುವುದಾಗಿದ್ದು ಆದರೆ ಇಲ್ಲಿ ಇಂದ್ರ ಅಹಲ್ಯೆಯೊಡನೆ ಕೂಡಿದ್ದು ಕಾಮನ ವಶವಾಗಿ ಎಂತಲೂ ರಾಮನ ಪಾದ ರಜದಿಂದ ಕಲ್ಲಾದ ಅಹಲ್ಯೆ ಪುನಃ ಮಾನವಳಾದಳೆಂದು ಎಲ್ಲಾ ಹರಿದಾಸರು ಬಳಸಿಕೊಂಡಿದ್ದಾರೆ.

ಪ್ರಾಣೇಶದಾಸರು ಅಹಲ್ಯೆ ಉದ್ಧಾರದ ಕುರಿತಾಗಿ ಸಂಪೂರ್ಣ ಒಂದು ಕೀರ್ತನೆಯನ್ನು ರಚಿಸಿದ್ದು ಇದರಲ್ಲಿ ಅಹಲ್ಯೆಯ ಶಾಪ ವೃತ್ತಾಂತ ಮತ್ತು ಶಾಪ ವಿಮೋಚನಾ ವಿಷಯ ಈ ರೀತಿ ಬಂದಿದೆ.

ಉದ್ಧಾರ ಮಾಡಿದ ಶ್ರೀ ರಾಮ ಅಹಲ್ಯಾ! ಉದ್ಧಾರ ಮಾಡಿದಾ
ಪದ್ಮ ಜಾಂಡದೊಳು ಪ್ರಸಿದ್ಧವಾದ ಮಾತಿದು –ಪ–
ಮುನಿ ಶಾಪದಿಂದಲಿ ವನದಿ ಕಲ್ಲಾಗಿ ಬಲುದಿನ ಚಿಂತಿಸುತಿಹ
ವನಿತೆಯರ ದಯೆಯಿಂದ –೧–
ಮಂದಮತಿ ಮಾಕೀ ಇಂದುಮುಖಿಗೆ ಇಂಥ ಕುಂದು ಬಂತಲ್ಲಾ
ಎಂದು ಇಂದ್ರರ ಪ್ರಾರ್ಥಿಸುತಿರೆ –೨–
ಮೌನಿ ಸತಿಗೆ ಪಾದರೇಣು ಸ್ಪರ್ಶವಿತ್ತು ಮಾನಿನಿಯ ಮಾಡಿದಾ
ಪ್ರಾಣೇಶ ವಿಠಲನು –೩–

ಪತಿವ್ರತೆಯಾದ ಅಹಲ್ಯೆಗೆ ತನ್ನಿಂದ ಒದಗಿದ ಶಾಪ ಅವಳಿಗುಂಟಾದ ಪರಿಸ್ಥಿತಿಯನ್ನರಿತು ಇಂದ್ರನು ಮರುಗಿದ ರೀತಿಯನ್ನು ಯಾರು ಹೇಳದ ವಿಷಯವನ್ನು ಪ್ರಾಣೇಶದಾಸರು ನೂತನವಾಗಿ ಇಲ್ಲಿ ಹಾಡಿರುವ ಅಹಲ್ಯೆಯ ಕುರಿತಾದ ಸರಳ ಸುಂದರ ಭಾಷಾಶೈಲಿಯಲ್ಲಿ ಮಾಡಿರುವ ಕೀರ್ತನೆ ಇದಾಗಿದೆ.

ಶ್ರೀ ರಾಮನು ತಾನಿರುವ ಆಶ್ರಮಕ್ಕೆ ಬಂದಾಗ ತನ್ನ ಶಾಪವಿಮೋಚನೆಯಾಗುವುದಾಗಿ ತಿಳಿದಿದ್ದ ಅಹಲ್ಯೆಯು ರಾಮನ ಬರವನ್ನು ಕಾಯುತ್ತಿದ್ದ ಬಗೆ ಹಾಗೂ ಅಹಲ್ಯೆಯ ಮನಃಸ್ಥಿತಿಯನ್ನು ಪುರಂದರದಾಸರು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಶಿರವ ತೂಗುವಳು ಚಿತ್ರದ ಪ್ರತಿಮೆಯಂತಿಹಳು
ಕರವ ಗಲ್ಲದೊಳಿಟ್ಟು ಈಡು ಸುಯ್ವಳು
ಇರು ಇರುತಲೊಮ್ಮೆಮ್ಮೆ ಎದುರೆದ್ದು ನೋಡುವಳು
ಬರವ ಕಾಣದೆ ಕಂದಿ ಕುಂದಿ ಬಡವಾದಳೈ

ಕಲ್ಲಾಗಿ ಬಿದ್ದಿದ್ದ ಅಹಲ್ಯೆಯ ವರ್ಣನೆ ಬಂದಿದ್ದರೆ ಮುಂದೆ ದಾಸರು ಆಕೆಯ ದುಃಖಾವೇಶವನ್ನು ಹೀಗೆ ಹಾಡಿದ್ದಾರೆ.

ಕಂಬನಿಯ ತುಂಬುವಳು ಕರೆವಳು ಪೆಸರ್ಗೊಂಡು

ಹಂಬಲಿಸುವಳು ಕಂಡ ಕಾಂತೆಯರೊಳು

ಬೆಂಬಿಡದೆ ಜಡೆ ಮುಡಿದು ತೊಡಿಗೆ ಬೀಸಾಡುವಳು

ಬಿಂಬವರಿತು ಪೊಗಳುವವಳು ನಿನ್ನ ಗುಣಗಣವ (ಕೀ ೧೦ಸಂ ೩/೨)

ಇಲ್ಲಿ ವಾಲ್ಮೀಕಿ ರಾಮಾಯಣದಲ್ಲಿಲ್ಲದ ಅಹಲ್ಯಾ ಪ್ರಲಾಪವು ಕಣ್ಣಿಗೆ ಕಟ್ಟುವಂತೆ ಮೂಡಿ ಬಂದಿದ್ದು ಇದು ದಾಸರ ಕಲ್ಪನಾವಿಲಾಸಕ್ಕೆ ಸಾಕ್ಷಿಯಾಗಿದೆ.

ವಾಲ್ಮೀಕಿ ರಾಮಾಯಣದಲ್ಲಿ ಈ ಪ್ರಸಂಗವು ಹಲವಾರು ಶ್ಲೋಕ ವನ್ನೊಳಗೊಂಡಿದೆ. ದಾಸರು ಈ ಸನ್ನೀವೇಶವನ್ನು ಕೇವಲ ಕೆಲವೇ ನುಡಿಗಳಲ್ಲಿ ಸಮಗ್ರವಾಗಿಯೂ ಸಂಗ್ರಹವಾಗಿ ತಿಳಿಸಿದ್ದಾರೆ. ರಾಮಾಯಣದಲ್ಲಿಯ ಅಹಲ್ಯಾ ಶಾಪ ವಿಮೋಚನ ಕಥೆಯ ಸ್ಥೂಲಪರಿಚಯವಿದ್ದರೆ ಸಾಕು ಅಥವಾ ಅಹಲ್ಯೆ ಎಂಬ ಹೆಸರು ಬಂದ ತಕ್ಷಣವೇ ಇಡೀ ಅಹಲ್ಯಾ ವೃತ್ತಾಂತ ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತದೆ.

ಸೀತಾ ಕಲ್ಯಾಣ :–

ಶಿಧನುರ್ಭಂಗ, ಸೀತಾಕಲ್ಯಾಣ ಸನ್ನೇವೇಶವನ್ನು ಹರಿದಾಸರು ಒಟ್ಟಿಗೆ ತಮ್ಮ ಕೀರ್ತನೆಯಲ್ಲಿ ಹಾಡಿರುವುದರಿಂದ ಈ ಎರಡೂ ಪ್ರಸಂಗಗಳನ್ನು ಒಟ್ಟಿಗೆ ಇಲ್ಲಿ ಪರಿಶೀಲಿಸಲಾಗಿದೆ. ಹರಿದಾಸರು ಶಿವಧನುರ್ಭಂಗ ಪ್ರಸಂಗವನ್ನು ರಾಮನ ಅತುಳ ಬಲ ಸಾಹಸವನ್ನು ವರ್ಣಿಸುವಾಗ ಸೀತಾ ಕಲ್ಯಾಣದ ವೇಳೆ ಒಂದು ನುಡಿ ಒಂದು ಪಾದದಲ್ಲಿ ಹಾಡಿ ಹೊಗಳಿದ್ದಾರೆ.

ರಂಗೇಶ ವಿಠಲದಾಸರು ಶಿವಧನುವನ್ನು ಮುರಿದ ಬಗೆಯನ್ನು ಹೀಗೆ ವರ್ಣಿಸಿದ್ದಾರೆ.

ಹರನ ಧನುವನು ಸ್ಮರನ ಧನುವಿನಂತೆ

ತ್ವರದಿ ಮುರಿದು ನಿಂದ ಸುಕುಮಾರ –ಶಿ– (ಕೀ ೧೪೫ ಸಂ ೦೭)

ಇಲ್ಲಿ ರಾಮನು ಅಗಣಿತ ಭಾರದ ಶೈವಧನುವನ್ನು ಮನ್ಮಥನ ಬಾಣವಾದ ಕಬ್ಬನ್ನು ಮುರಿದ ಹಾಗೆ ನಿರಾಯಾಸವಾಗಿ ಮುರಿದನು ಎಂದಿದ್ದರೆ

ಸೀತಾಕಲ್ಯಾಣ ಪ್ರಸಂಗವು ಹರಿದಾಸರ ಬಹುತೇಕ ಕೀರ್ತನೆಗಳಲ್ಲಿ ಒಂದೊಂದು ಸಾಲಿನ ರೂಪದಲ್ಲಿ ಕೆಲವೊಂದು ನುಡಿಗಳಲ್ಲಿ ಈ ರೀತಿ ಪ್ರಸ್ತಾಪಿಸುತ್ತಾರೆ.

ಶ್ರೀ ಪಾದರಾಜರು

ಜಾಹ್ನವಿಯ ತೀರವಂತೆ ಜನಕರಾಯನ ಕುವರಿಯಂತೆ

ಜಾನಕಿಯ ವಿವಾಹವಂತೆ ಜಾಣ ನೀ ಬರಬೇಕಂತೆ (ಕೀ ೧೩ ಸಂ ೧)

ಇಲ್ಲಿ ಶ್ರೀ ಹರಿಯ ತನ್ನ ಪೂರ್ಣಾವತಾರಗಳಾದ ರಾಮ ಕೃಷ್ಣ ಅವತಾರಗಳಲ್ಲಿ ಆದ ಮದುವೆಯ ಸಂದರ್ಭಗಳನ್ನು ವರ್ಣಿಸುತ್ತಾ ಆಹ್ವಾನ ನೀಡುವಂತೆ ಬಹಳ ಸೊಗಸಾಗಿ ರಚಿಸಿದ್ದಾರೆ.

ವಾದಿರಾಜರು

ಅತುಳ ಬಲದಲಿ ಸೀತೆಯ ಒಲಿಸಿದ ಭಾರ್ಗವ ಮ
ಹಿತಳ ಬಲವಂತ ದೇವೋತ್ತುಂಗ ಜಯತು -೭- (ಕೀ ೨೮೩ ಸಂ ೨)

ಇಲ್ಲಿ ರಾಮನು ಅತ್ಯಂತ ಬಲ ಪ್ರದರ್ಶನದಿಂದ ಸೀತೆಯನ್ನು ವರಿಸಿದ ಎಂಬ ಮಾತನ್ನು ಹೇಳಿದ್ದಾರೆ.ಶ್ರೀಹರಿಯ ದಶಾವತಾರ ವರ್ಣನೆ, ಸಂಕ್ಷಿಪ್ತ ರಾಮಾಯಣ, ರಾಮನ ಮಹಿಮೆ ಬಣ್ಣಿಸುವ ಸಂದರ್ಭಗಳಲ್ಲೆ ಸೀತಾಕಲ್ಯಾಣ ಶಿವಧನುರ್ಭಂಗ ಪ್ರಸಂಗವನ್ನು ಹರಿದಾಸರು ಹಾಡಿ ಹೊಗಳಿದ್ದಾರೆ ಈ ಸಂದರ್ಭದಲ್ಲಿ ಮೂಲ ರಾಮಾಯಣದಲ್ಲಿಲ್ಲದ ಹಲವಾರು ವಿಷಯಗಳನ್ನು ಜಾನಪದ ಮೂಲಗಳಿಂದ ಆಯ್ದುಕೊಂಡು ತಮ್ಮ ಕೀರ್ತನೆಯ ವಸ್ತುವನ್ನಾಗಿಕೊಂಡಿದ್ದಾರೆ.

ಕಾಖಂಡಕಿ ಕೃಷ್ಣದಾಸರು ತಮ್ಮ ಕೀರ್ತನೆಯೊಂದರಲ್ಲಿ "ಸೀತೆಯು ತನ್ನನ್ನು ವರಿಸಲು ಬಂದಂತಹ ರಾಮನನ್ನು ಕನಸಿನೊಳಗೆ ಕಂಡ ವಿಚಾರ ಈತ ಶಿವಧನುವನ್ನೆತ್ತಿ ತನ್ನ ಗಂಡನಾಗಲಿ ಹೀಗಾದರೆ ತಾನು ಗೌರಿ ವ್ರತ ಇರುವುದಾಗಿ ನಿರ್ಣಯಿಸಿಕೊಳ್ಳುವ ಕೀರ್ತನೆ ಈ ರೀತಿ ಇದೆ.

ಎನ್ನ ಪ್ರಿಯನಾ ನೀ ತಂದು ತೋರೇ ಸುಜ್ಞಾನೇ -ಪ-
ಕನಸಿನೊಳಗೆ ಕಂಡ ಪರಿಯ ರೂಪದ ದೋರಿ
ದಾವ ತೇಜ ಮುಸುಕಿತು ಧರಿಯೇ! ತ್ರೆಭುವನವ ರಕ್ಷಿಸ
ಬಂದಾ ಹರಿಯೇ! ಮಜ್ಜೇ ಮರಿಯೇ -೧-
ಮುಟ್ಟಲೆ ತಗದನು ಏಳಲಿ ಝುಮ್ಮನೇ
ನಾವು ನೆಟ್ಟನೆ ಪೂಜಿಪೆವು ಗೌರಮ್ಮನೇ ಎಂದು
ಬಿಟ್ಟ ಮಗಳು ಬೇಡಿಕೊಂಡರು ಸುಮ್ಮನೇ
ಅಡಿಯಿಟ್ಟು ನಲಿದು ಬರುವ ರಾಮೋ ಘಮ್ಮನೇ ಪರಬೊಮ್ಮನೇ-೨-
ಬಂದು ನೋಡಿ ಬಿಲ್ಲನೆತ್ತಿದ್ದಾಚಕ್ಕನೇ
ಅರುವಿಂದ ಲೋಚನೆ ಮಾಲಿ ಹಾಕಲು ಫಕ್ಕನೇ
ವೃಂದ ಕಾಣುತ ಹೆದರಿತು ಧಕ್ಕನೇ
ನಮ್ಮ ತಂದೆ ಮಹಿಪತಿ ನಂದನ ಪ್ರಭು ಠಕ್ಕನೇ ಪಾಲಕ್ಕುಕನೇ-೩- (ಕೀ ೧೦೬ ಸಂ ೧೧/೧)

ಈ ಕೀರ್ತನೆಯಲ್ಲಿ ಗೌರಿವ್ರತ ಕನಸಿನೊಳಗೆ ರಾಮನನ್ನು ಕಂಡ ಸೀತೆ ವಿಷಯವು ಸ್ವಕಲ್ಪಿತವಾಗಿದ್ದು ಬಹುಶಃ ಜಾನಪದ ಮೂಲಗಳಿಂದ ಆರಿಸಿಕೊಂಡಿರಬಹುದು.

ಹೆಳವನ ಕಟ್ಟೆ ಗಿರಿಯಮ್ಮ ತಮ್ಮ ೮೭ ನುಡಿಗಳ 'ಸೀತಾಕಲ್ಯಾಣ'ವನ್ನು ಸರಳ ದೇಸೀ ನುಡಿಯಲ್ಲಿ ರಚಿಸಿದ್ದಾರೆ. ಜಾನಕಿ ರಾಮನ ಉರುಟಣೆ ಇಲ್ಲಿ ವರ್ಣಿಸಲಾಗಿದೆ ಗಿರಿಯಮ್ಮ ಹೇಳಿರುವಂತೆ

ಮದುವೆಯ ನಾಲ್ಕು ದಿವಸದಲ್ಲಿ
ಮದುವಣಿಗನಾ ರಾಮ ಜಾನಕಿಗೆ
ಮುದದಿಂದ ಅರಶಿಣ್ಣೆಯ ಮಾಡೋ ಸಂಭ್ರಮ

ಪದವ ಹೇಳುವೆ ಸುಜನರು ಕೇಳೀ ಜಯ ಜಯ – ೧– (ಕೀ ೬ ಸಂ೧೮/೧)

ಈ ಅರಸಿಣ್ಣೆ ಶಾಸ್ತ್ರಕ್ಕೆ ರಾಮನ ತಾಯಂದಿರು ಇತರ ಪ್ರಮುಖರೊಡನೆ ಕೂಡಿ ಜನಕನ ಮನೆಗೆ ಹೋಗುತ್ತಾರೆ. ಪರಸ್ಪರ ವಧುವರರನ್ನು ಅರಸಿಣ್ಣೆ ಹಚ್ಚಿಸುತ್ತಾರೆ. ಬಾಸಿಂಗಕಟ್ಟುವುದು, ನಿವಾಳಿ ತೆಗೆಯುವುದು. ಓಕುಳಿ ಬೆಲ್ಲ ಮುನಿ ಸತಿಯರು ಸೀತೆ ರಾಮರಿಗೆ ಅಕ್ಷತೆಯನ್ನಿಟ್ಟು ತಾಂಬುಲ ಕೊಟ್ಟು ಹಾಡುತ್ತಾ ಬಗೆ ಬಗೆಯ ರತ್ನಾದಾರತಿಗಳನ್ನು ಬೆಳಗುತ್ತಾರೆ.

ಈ ಅರಸಿನೆಣ್ಣೆ ಶಾಸ್ತ್ರಕ್ಕೆ ರಾಮನಿಗೆ ಅರಸಿನೆಣ್ಣೆ ಶಾಸ್ತ್ರ ಮಾಡಲು ಬಂದಂತಹ ದೇವತೆಗಳ ವಿವರಣೆ

ಗರುಡನ್ವಲ್ಲಭ ಸೌಂದರ ದೇವಿ

ವರುಣನ್ವಲ್ಲಭೆ ಕಾಳಿಕದೇವಿ

ಹರನ್ವಲ್ಲಭೆ ಪಾಪ (ನಾ)ಶಿಗಂಗೆ ಸಹಿತಲಿ

ಅರಸಿನೆಣ್ಣೆಯ ಮಾಡ ಬಂದಾಗ ಜಯ ಜಯ –೬– (ಕೀ ೬ ಸಂ.೧೮/೧)

ಈ ಕಾರ್ಯಕ್ಕೆ ಪಾರ್ವತಿ ಹಿರಿಯ ಮುತ್ತೈದೆಯಾಗಿ ನಿಲ್ಲುತ್ತಾಳೆ. ಸೀತೆಯ ಅಲಂಕಾರ, ರಾಮನ ರೂಪಿನ ವರ್ಣನೆ ಜೊತೆಗೆ ದಶಾವತಾರ ವರ್ಣನೆ ಬಂದಿದ್ದು ವರವಧುವಿನ ಕೈಗಳ ಹಿಡಿದು ಎತ್ತುವ ಸಂದರ್ಭ ಹೇಳುತ್ತಾ ಈ ಸಂದರ್ಭದಲ್ಲಿ ಆಕೆಯ ಹಾಸ್ಯ ಪ್ರವೃತ್ತಿ ಮಿನುಗುವನ್ನು ಕಾಣಬಹುದು.

ಇಳೆಯ ಜಗಂಗಳನುದರದಲಿ

ಅಳವಡಿಸಿದ ಮಹತ್ಮಕನೂ

ಇಳೆಯ ಮಗಳನು ಯೆತ್ತಲಾರದೆ ರಾಮ

ಬಳಲಿದನೆಂದು ನಕ್ಕರು ಜನರೂ (ಕೀ ೬ ಸಂ.೧೮/೧)

ಸೀತಾಕಲ್ಯಾಣ ವಸ್ತುವಿನ ದೃಷ್ಟಿಯಿಂದ ಅಷ್ಟೇನೂ ಮೇಲ್ಮಟ್ಟನ ಕೃತಿಯಲ್ಲ ಮದುವೆಯ ಮನೆಗಳಲ್ಲಿ ಹಾಡಬಹುದಾದ ಒಂದು ಹಾಡಷ್ಟೇ. ಈ ಕೃತಿಯ ಹೆಸರು ಸೀತಾಕಲ್ಯಾಣವಾದರೂ ಇಲ್ಲಿ ಕಲ್ಯಾಣದ ವರ್ಣನೆಯಾಗಲಿ, ಸೀತಾಸ್ವಯಂವರದ ವಿಷಯವಾಗಲಿ ಶಿವಧನು ಮುರಿದ ವಿಷಯ ಇಲ್ಲಿ ಬದಲಿಗೆ ಇದು ಗಿರಿಯಮ್ಮನ ಕಾಲದ ಮದುವೆಯ ಶಾಸ್ತ್ರ ಸಂಪ್ರದಾಯಗಳ ವರ್ಣನೆ "ವಸ್ತು ಯಾವುದೇ ಇರಲಿ ವರ್ಣನೆ ಯಾವುದೇ ಇರಲಿ ತನ್ನ ವ್ಯಕ್ತಿ ವೈಶಿಷ್ಟ್ಯದ ಸ್ವಾನುಭವ ಸಂಪತ್ತಿನ ಬಣ್ಣವನ್ನು ತುಂಬಿಸಿ ಓದುಗರು ಅವುಗಳನ್ನು ಆತ್ಮೀಯತೆಯಿಂದ ಅನುಭವಿಸುವಂತೆ ಮಾಡುವ ಕವಿ ಪ್ರಕೃತಿ ಗಿರಿಯಮ್ಮನಿಗೆ ವಿಶೇಷ ಒಟ್ಟಿನಲ್ಲಿ ಕಾವ್ಯ ದೃಷ್ಟಿಯಿಂದ ಮಹತ್ವವಾದುದನ್ನು ಇಲ್ಲಿ ಕಾಣದೇ ಹೋದರೂ ಕವಿಯ ಸ್ತ್ರೀಸಹಜ ಕೋಮಲ ಮನೊಧರ್ಮ ದೈವ ಭಕ್ತಿ ಪ್ರೇರಿತವಾದ ಆಶು ಕವಿವಾಣಿಯನ್ನು ಇಲ್ಲಿಯೂ ಕಾಣಬಹುದು"[೩] ಎಂಬ ವಿಮರ್ಶಾಮಾತು ಸರಿಯಾಗಿದೆ. ಶ್ರೀ ಹರಿ ಭಕ್ತಿಯನ್ನು ಬಹಳ ಉತ್ಸಾಹದಿಂದ ವರ್ಣಿಸಿದ್ದಾಳೆ ಎನ್ನಬಹುದು.

'ಸೀತಾಕಲ್ಯಾಣ'ದ ಸೀತೆ ಲಜ್ಜೆಯಿಂದ ಕೂಡಿ ಹಿರಿಯರು ಹೇಳುವ ಶಾಸ್ತ್ರಗಳನ್ನು ಮಾಡುವ ನವವಧುವಾಗಿ ಚಿತ್ರಿತಳಾಗಿದ್ದಾಳೆ.

ಶ್ರೀಮುದ್ದು ಮೋಹನದಾಸರ ಉರುಟಣೆ ಪದವೂ ಸಹ ಹೆಳವನ ಕಟ್ಟೆ ಗಿರಿಯಮ್ಮನವರ 'ಸೀತಾಕಲ್ಯಾಣ' ದಂತೆ ಸಂಪ್ರದಾಯದ ಹಾಡಾಗಿದೆ. ರಾಮ ಸೀತೆಯನ್ನು ಕೈಹಿಡಿದು ಎತ್ತಿಕೊಳ್ಳುವಾಗ ಸೀತೆಯ ಸಖಿಯರು ಮಾಡಿದ ವಿನೋದ

ಮಂಗಳಾಂಗಿಯನು ಎತ್ತಿಕೊಂಡು ರಾಮ

ಹಿಂಗಾದೆ ದ್ವಾರದಲ್ಲಿಗೆ ಬರಲು

ಮಂಗಳ ದೇವಿಯ ಹೆಸರು ಹೇಳೆನುತಲು

ಅಂಗನೆಯರು ಅಡ್ಡಗಟ್ಟಿದಾಗ –೧೨–

ನಾಳೆ ಹೇಳುವೆನು ಇವಳ ಹೆಸರು

ತಾಳಲಾರೆನು ಭಾರವು ಎನಲು

ಶ್ರೀಲಕ್ಷ್ಮೀದೇವಿಯ ಹೆಸರು ಹೇಳದೆ ಬಿಡವೆಂದು

ಬಾಲೆಯರೆಲ್ಲಾರು ಇಟ್ಟರು ಕದವಾ–೧೩– (ಕೀ ೫೬ ಸಂ ೧೩)

ಈ ಉರುಟಣೆ ಪದಗಳಲ್ಲಿ ಕನ್ನಡ ನಾಡಿನಲ್ಲಾಗುತ್ತಿದ್ದಂತಹ ಸಂಪ್ರದಾಯ ಬದ್ಧ ಮದುವೆಗಳಲ್ಲಿ ನಡೆಯುತ್ತಿದ್ದ ಸಂಪ್ರದಾಯಗಳನ್ನೊಳಗಂಡಿದೆ. ಗಂಡು ಹೆಣ್ಣನ್ನು ಪರಸ್ಪರ ಪರಿಚಯಿಸುವ ಬಗೆ, ಅವರ ರೂಪ ವರ್ಣನೆ ಇದೇ ಮೊದಲಾದವು ಇರುತ್ತಿದ್ದವು. ಈ ಉರುಟಣೆ ಪದಗಳಲ್ಲಿ ಹರಿದಾಸರು ರಾಮಾಯಣದ ಸೀತಾ ಕಲ್ಯಾಣವನ್ನೇ ಆರಿಸಿಕೊಂಡಿದ್ದರು. ಹಾಗೆ ಹಾಡುವಾಗ ರಾಮಾಯಣದಲ್ಲಿ ಸೀತಾ ಕಲ್ಯಾಣದ ಅನಂತರ ಘಟನೆಗಳಾದ ಮಾರೀಚ ವಧೆ, ವಾಲಿವಧೆ, ಸುಗ್ರೀವ ಸಖ್ಯ, ಸೇತುಬಂಧನ, ರಾವಣವಧೆ, ವಿಭೀಷಣಶರಣಾಗತಿ ಇತ್ಯಾದಿ ಘಟನೆಗಳನ್ನು ಹಾಡಿದ್ದಾರೆ. ಅಂದರೆ ಇಲ್ಲಿ ಹರಿದಾಸರಿಗೆ ಹರಿಯ ಗುಣ, ಆತನ ಮಹಿಮೆಗಳನ್ನು ಕೊಂಡಾಡುವ ಅವಕಾಶ ಬೇಕೇ ಹೊರತು ಯಾವ ಘಟನೆ ಯಾವಾಗ ಜರುಗಿತು ಅದನ್ನು ಯಾವಾಗ ಎಲ್ಲಿ ಹೇಳಬೇಕೆಂಬ ಔಚಿತ್ಯವನ್ನು ಅವರು ಅನುಸರಿಸಿಲ್ಲ ಎಂದು ಹೇಳಬಹುದು.

ನಿಡಗುರುಕಿ ಜೀವೂ ಬಾಯಿಯವರ

ಗಜವದನನ ಪಾದಾಂಬುಜಗಳಿಗೆರಗುವ

ಸುಜನರ ಪೊರೆವಗೆ ಭುಜನ ಭೂಷಣನೇ–ಪ– (ಕೀ ೨ ಸಂ ೧೮/೨)

ಎಂದು ಪ್ರಾರಂಭವಾಗುವ ದೀರ್ಘಕೀರ್ತನೆಯಲ್ಲಿ ರಾಮಾಯಣದ ಬಾಲಕಾಂಡ ಅಧ್ಯಾಯದ ಪ್ರಮುಖ ಪ್ರಸಂಗಗಳಾದ ರಾಮಜನನ ಮತ್ತು ಸೀತಾಕಲ್ಯಾಣವನ್ನು ಕೃತಿಯ ವಸ್ತುವನ್ನಾಗಿಸಿಕೊಂಡಿದ್ದಾರೆ. ಇವರ ಕೃತಿಯ ಎರಡನೆಯ ಭಾಗವೆಂದು ಹೇಳಬಹುದಾದ 'ಸೀತಾಕಲ್ಯಾಣವು ಹಲವು ನೂತನ ನವೀನ

ಅಂಶಗಳನ್ನು ಹಾಗೂ ಸೀತಾಕಲ್ಯಾಣದ ದೀರ್ಘವರ್ಣನೆಯನ್ನು ನಿಡಗುರುಕಿ ಜೀವೂ ಬಾಯಿ ಮತ್ತು ಐಹೊಳೆ ವೆಂಕಟೇಶ ದಾಸರು ಮಾತ್ರ ವಿವರಿಸಿರುವುದನ್ನು ಕಾಣಬಹುದು ಈ ಇಬ್ಬರೂ ತಮ್ಮ ದೀರ್ಘಕೃತಿಗಳಲ್ಲಿ ಹಲವಾರು ಹೊಸ ಅಂಶಗಳನ್ನು ತಮ್ಮ ಸುತ್ತಲಿನ ಪರಿಸರದಿಂದಲೂ ತಮ್ಮ ಕೃತಿ ರಚನಾ ಪಾಂಡಿತ್ಯದಿಂದಲೂ ಜಾನಪದ ಮೂಲಗಳಿಂದಲೂ, ಸಾಮಾಜಿಕ, ವೈವಾಹಿಕ, ಸಂಪ್ರದಾಯಗಳಿಂದ ಆರಿಸಿಕೊಂಡಿರಬಹುದೆಂದು ಹೇಳಬಹುದು.

ಕೌಶಿಕಮುನಿಯ ಯಾಗ ರಕ್ಷಣೆ ಮಾಡಲು ಬಂದಿದ್ದ ಶ್ರೀರಾಮ ಮತ್ತು ಲಕ್ಷ್ಮಣ ಯಾಗ ರಕ್ಷಣೆಯ ನಂತರ ಅಹಲ್ಯೆ ಉದ್ಧಾರವಾದ ಮೇಲೆ ಜನಕ ಮಹಾರಾಜ ತನ್ನ ಮಗಳ ಸ್ವಯಂವರ ಏರ್ಪಡಿಸಿರುವ ಒಸಗೆಯ ಓಲೆಯನ್ನು ಕೌಶಿಕನಿಂದ ಪಡೆದು ಆತನ ಜೊತೆಗೂಡಿ ಮಿಥಿಲಾಪುರಕೆ ಹೊರಟಾಗ ಜನಕ ನಗರದ ವರ್ಣನೆ ಹೀಗಿದೆ.

ಹಾದಿ ಹಾದಿಗೂ ತಳಿರು ತೋರಣಗಳು

ಬೀದಿ ಬೀದಿ ಶೃಂಗಾರಗಳು

ಮೋದದಿ ರಚಿಸಿದ ಕಲಶಕನ್ನಡಿಗಳೂ

ಆದರದಿ ಕರೆಯುವ ಭಟರುಗಳು -೪- (ಕೀ ೨ ಸಂ. ೧೮/೧)

ಸೀತಾ ಸ್ವಯಂವರಕ್ಕೆ ಬಂದಿದ್ದ ರಾಜರುಗಳನ್ನು ಜನಕ ಆದರದಿಂದ ಬರಮಾಡಿಕೊಳ್ಳುತ್ತಾನೆ. ಶಿವಧನು ಎತ್ತಿ ಸೀತೆಯನ್ನು ವರಿಸಲು ದೇವಾನುದೇವತೆಗಳೆಲ್ಲ ಬಂದು ನಿಷ್ಪಲರಾಗಿ ಹಿಂತಿರುತ್ತಾರೆ. ಶ್ರೀಮದಾಚಾರ್ಯರ ತಾತ್ಪರ್ಯ ನಿರ್ಣಯದಲ್ಲಿ ಪ್ರಸ್ತಾಪಿತವಾಗಿರುವಂತೆ, ಇತರ ಪುರಾಣಗಳಲ್ಲಿ ಬಂದಿರುವಂತೆ ಇಲ್ಲಿಯೂ ರಾವಣ ಶಿವಧನು ಎತ್ತಲು ಅಸಫಲನಾದ ವಿಷಯವನ್ನು ಈ ರೀತಿ ಹೇಳಿದ್ದಾರೆ.

ದಶಶಿರ ಧನುವೆತ್ತುತ ಜಾನಕಿ ತನ್ನ

ವಶಳಾಗಬೇಕೆನ್ನುತ

ಕುಶಲದಿಂದೆತ್ತಲು ಕುಸಿಯಲು ಬಲವೆಲ್ಲ

ಅಸುರನು ತಲೆಕೆಳಕಾಗಿ ಬೀಳಲು ಭರದಿ -೨- (ಕೀ ೨ ಸಂ. ೧೮/೨)

ಇಲ್ಲಿ ಉಲ್ಲೇಖಿಸಿರುವ ರಾವಣನ ವಿಷಯವು ವಾಲ್ಮೀಕಿ ರಾಮಾಯಣದಲ್ಲಿಲ್ಲ ಇದನ್ನು ಬಹುಶಃ ಕೀರ್ತನೆಕಾರರು ಜಾನಪದೀಯ ರಾಮಾಯಣಗಳಿಂದಲೋ ಇನ್ನಿತರ ಇತರ ರಾಮಾಯಣಗಳಿಂದಲೋ ಆರಿಸಿಕೊಂಡಿರಬಹುದು.

ಶಿವಧನುವನ್ನು ಹೆದೆಯೇರಿಸಿ ಮುರಿಯುವ ಪ್ರಸಂಗವನ್ನು ಹೊಸ ತೆರನಾಗಿ ವಿವರಿಸಿದ್ದಾರೆ.

ಶ್ರೀ ರಾಮನು

ನುಡಿದನು ಸೌಮಿತ್ರಿಯ ಕೂಡೆ

ತಡೆಯದೆ ಧನುವೆತ್ತುವೆ ನೀಕ್ಷಣದಲಿ

ಬಿಡದೆ ಸೀತೆ ಚಲುವಿಕೆ ಪೇಳು

ಎಂದಾಗ ಲಕ್ಷ್ಮಣನು ತೆರೆಮರೆಯಲ್ಲಿ ನಿಂತಿದ್ದ ಸೀತೆಯ ಚರಣಗಳನ್ನು ಸ್ಮರಿಸಿ ಧ್ಯಾನ ಮಗ್ನನಾಗಿ ಸೀತೆಯ ನಖಶಿಖಾಂತ ವರ್ಣನೆ ಲಕ್ಷ್ಮಣ ಈ ರೀತಿ ಮಾಡುತ್ತಾನೆ.

ವರ ಅಂಗುಷ್ಟ ನಖದಿ ಕಾಂತಿ
ತರಣಿ ಬಿಂಬದಂತೆ ಹೊಳೆಯೆ
ಪರಮ ಪಾವನ ಪಾದ ಮಾವಿನ
ತಳಿರು ಪೋಲುವುದೆಂದು ನುಡಿದು
ಅಂಬುಜಾಕ್ಷಿ ಕಾಲು ಬಾಳೆ
ಕಂಬದಂತೆ ಶೋಭಿಸುವುದು
ಸಂಭ್ರಮದಲಿ ಕಾಂಬ ನಡುವು
ಸಿಂಹ ನಡುವಿನಂತಿಹುದು
ಆನೆಯ ಸೊಂಡಿಲನ್ನು ಪೋಲ್ವ
ಜಾಣೆ ಜಾನಕಿ ಕರದ್ವಯಗಳು
ಬಾಳೆ ಎಲೆಯು ಪೋಲುತಿರುವ
ತೆಳ್ಳನ್ಹೊಳೆವ ಉದರಭಾವ
ಅಂಬುಜಾಕ್ಷಿಯ ಮುಖವು ಪೂರ್ಣ
ಚಂದ್ರನಂತೆ ಹೊಳೆಯುತಿಹುದು
ಕಂಗಳ ಕಾಂತಿಯನ್ನು ನೋಡೆ
ತುಂಬಿ ಸೂಸುತಿಹ ಕಳೆಯು
ಕಾಮನ ಬಿಲ್ಲುಗಳ ಪೋಲ್ವ
ಕಾಮಿನಿ ಹುಬ್ಬುಗಳ ಮಾಟ
ಪ್ರೇಮ ತೋರುತಿರುವ ಕರ್ಣ
ಹೇಮಮಯದಿ ಶೋಭಿಸುವುದು
ಸಂಪಿಗೆ ಹೂ ಪೋಲುತಿರುವ
ಶ್ರೀಕಾಂತಳ ನಾಸಿಕದ ಭಾವ
ರಂಗು ತುಟಿಯ ದಾಳಿಂಬ ಬೀಜ
ದಂತೆ ಶೋಭಿಪ ದಂತಪಂಕ್ತಿಯು
ಅಂಬುಜಾಕ್ಷಿ ಕಂಠ ಮಾಟ
ಚಂದ್ರಬಿಂಬ ಪೋಲುತಿಹುದು
ಮಂದಹಾಸ ನಗೆಯ ಮುಖವು
ಚಂದ ತೋರುವ ಫಣೆಯಭಾವ

ಗುರುಳು ಕೂದಲಿದ್ದೋಳೆವ ಸಿರವು

ಹೆರಳು ಬಂಗಾರಗಳು ಹೊಳೆಯೆ

ಅರಳು ಮಲ್ಲಿಗೆ ಮುಡಿದು ಬೈತಲೆ

ಸರಳವಾಗಿ ಶೋಭಿಸುವುದು

ಮಂಗಳಾಂಗಿ ಸರ್ವಮಂಗಳೋ

ಪಾಂಗದಿಂದ ಶೋಭಿಸುವಳು

ಶೃಂಗಾರದ ಶ್ರೀಲಕ್ಷ್ಮೀದೇವಿ

ಭೃಂಗ ಕುಂತಳೆ ವೈದೇಹಿ ಎನಲು (ಕೀ ೨ ಸಂ. ೧೮/೨)

ಲಕ್ಷ್ಮಣನಿಂದ ಸೀತೆಯ ಇಷ್ಟು ವರ್ಣನೆ ಕೇಳಿ ರಾಮ ಅಟ್ಟಹಾಸದಿಂದ ನಗುತ್ತ ಶಿವಧನು ಮುರಿದನು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವಾಲ್ಮೀಕಿ ರಾಮಾಯಣದಲ್ಲಿ ಈ ಪ್ರಸಂಗವಿಲ್ಲ ಮತ್ತು ಅಲ್ಲಿನ ಲಕ್ಷ್ಮಣನು ಸೀತೆಯನ್ನು ಎಂದೂ ಕತ್ತೆತ್ತಿಯೂ ನೋಡಿರುವುದಿಲ್ಲ ಸೀತಾಪಹರಣವಾದ ನಂತರ ಸೀತಾನ್ವೇಷಣೆಗೆ ಹೊರಟ ರಾಮಲಕ್ಷ್ಮಣರಿಗೆ ಸುಗ್ರೀವ ಸೀತೆಯ ಆಭರಣಗಳು ತೋರಿಸಿದಾಗ ರಾಮನು ಲಕ್ಷ್ಮಣನಿಗೆ ಆ ಆಭರಣ ನೋಡಿ ಗುರುತಿಸು ಎಂದಾಗ

"ನಾಹಂಜಾನಾಮಿ ಕೇಯೋರೇ ನಾಹಂ ಜಾನಾಮಿ ಕುಂಡಲೇ-

ನೂಪುರೇತ್ವಭೀಜಾನಾಮಿ ನಿತ್ಯಂ ಪಾದಾಭಿವಂದನಾತ್!"[೪]

"ಕೇಯೋರ ಕುಂಡಲಗಳನ್ನು ನಾನು ಕಾಣೆ. ಪ್ರತಿದಿನವೂ ಸೀತೆಯ ಪಾದಗಳಿಗೆ ನಮಸ್ಕರಿಸುತ್ತಿದ್ದರಿಂದ ನೂಪುರಗಳನ್ನು ಮಾತ್ರ ಗುರುತಿಸಬಲ್ಲೆ ಎನ್ನುತ್ತಾನೆ"

ಹೀಗೆ ಸೀತೆಯ ಪ್ರತಿ ಆದರ್ಶಯುಕ್ತನಾಗಿದ್ದ ಮಾತೆಯ ರೂಪದಲ್ಲಿ ಕಂಡಿದ್ದ ಲಕ್ಷ್ಮಣನು ಹರಿದಾಸರ ಈ ಕೀರ್ತನೆಯಲ್ಲಿ ಸೀತೆಯ ನಖಶಿಖಾಂತ ಮಾಡಿರುವುದನ್ನು ನೋಡಬಹುದು.

ಸೀತೆಯು ರಾಮನಿಗೆ ವರಮಾಲೆ ಹಾಕಿದ ನಂತರ ಲಕ್ಷ್ಮಣ, ಭರತ, ಶತ್ರುಘ್ನರು ಊರ್ಮಿಳೆ, ಮಾಂಡವಿ, ಶ್ರುತ ಕೀರ್ತಿಯನ್ನು ಮದುವೆಯಾಗುತ್ತಾರೆ. ಇದಾದ ನಂತರ ೪ ದಿನಗಳ ಕಾಲ ದೀರ್ಘವಾಗಿ ಜನಕನು ತನ್ನ ಅಳಿಯಂದಿರಿಗೆ ಬಗೆಬಗೆಯ ರತ್ನಾಭರಣ ಉಡುಗೊರೆಯನ್ನೂ, ತನ್ನ ಹೆಣ್ಣುಮಕ್ಕಳಿಗೆ ಚಿನ್ನದ ಆಭರಣ, ದಾಸಿಯರನ್ನು ನೀಡುತ್ತಾ ಬೀಗರನ್ನು ಉಪಚರಿಸುವ ಸತ್ಕರಿಸುವ ವರ್ಣನೆ ತಮ್ಮ ದೀರ್ಘ ಕೀರ್ತನೆಯಲ್ಲಿ ಹಾಡಿದ್ದಾರೆ.

ಐಹೊಳೆ ವೆಂಕಟೇಶದಾಸರು ತಮ್ಮ 'ಶ್ರೀರಾಮ ಪಾರಿಜಾತ ದೀರ್ಘಕೃತಿಯ ಕಾವ್ಯ ವಸ್ತು ರಾಮಾಯಣದ 'ಬಾಲಕಾಂಡ' ಆದರೆ ಇದರಲ್ಲಿ ವಾಲ್ಮೀಕಿ ರಾಮಾಯಣದಲ್ಲಿಲ್ಲದ ಕೆಲವು ಹೊಸ ವಿಚಾರಗಳೊಂದಿಗೆ ಸೀತಾ ಕಲ್ಯಾಣವು ಬಹು ವಿಸ್ತಾರವಾಗಿ ರಚಿತವಾಗಿದೆ. ಜನಕನು ತನ್ನ

ಅಯೋನಿಜೆಳಾದ ಸೀತಾ ಸ್ವಯಂವರವನ್ನು ಯಜ್ಞಶಾಲೆಯಲ್ಲಿ ಏರ್ಪಡಿಸಿದ್ದು ಮಿಥಿಲಾಪುರದಲ್ಲಿ ಸೀತಾಸ್ವಯಂವರಕ್ಕೆ ಬಂದಂತಹ ರಾಜರುಗಳ ಪಟ್ಟಿ ಈ ಕೆಳಗಿನ ರೀತಿ ಬಂದಿದೆ.

ಅಂಗಮರು ಕಾಂಭೋಜಾ ಬರ್ಬರದ ಸಿಂಧು
ಕಳಿಂಗ ಕರುಷದ ರಾಜಾಖರ್ಪರಸು ತೇಜಾ
ತುಂಗ ವಿಕ್ರಮನಾವರಾಳನು ವಂಗ ಕೈಕೆಯ ಗೌಳಗುಜ್ಜರ
ಸಿಂಗಳ ದ್ರಾವಿಡದಾ ಮುಖ್ಯ ಧರಂಗನಾ ವಲ್ಲಭರು ಜೋಡಿಸಿ-೨-

ಚೀನ ಬೋಟಕುರಂಗಾ ನೇಪಾಳ ಚೋಳಾ
ಮಾನ ಮಾಳವನಂಗಾ ಯೇನು ಹೇಳಲಿ
ಪುರದ ಬಾಹ್ಯದೊಳಾ ನರೇಶ್ವರರಿಳಿದ ತಾವು
ನಿದಾನಿಸಲು ಸಾಗರವ ಸುತ್ತಿರುವಾ ನಗರ ಪರಿಯಂತೆ ಕಾಣಲು (ಕೀ ೪೬೨ ಸಂ ೨೧/೪)

ವಾಲ್ಮೀಕಿ ರಾಮಾಯಣದಲ್ಲಿ ಸೀತಾ ಕಲ್ಯಾಣಕ್ಕೆ ಬಂದಿದ್ದ ರಾಜರು ವೀರ್ಯಶುಲ್ಕವನ್ನು ನೀಡದೆ ಜನಕನ ವಿರುದ್ಧ ಯುದ್ಧ ಮಾಡಿದ ವಿಚಾರ ಬಂದಿದೆ. ಆದರೆ ಸ್ವಯಂವರಕ್ಕೆ ಯಾವ ಯಾವ ದೇಶದ ರಾಜರು ಬಂದಿದ್ದ ವಿಚಾರ ಬರುವುದಿಲ್ಲ ಐಹೊಳೆ ವೆಂಕಟೇಶದಾಸರು ಮೇಲಿನ ಕೀರ್ತನ ಭಾಗದಲ್ಲಿ ರಾಜರುಗಳ ರಾಜ್ಯದ ಹೆಸರನ್ನು ಸಂಕ್ಷೇಪವಾಗಿ ತಿಳಿಸಿದ್ದಾರೆ. ಈ ವಿಚಾರವನ್ನು ಬೇರಾವ ಹರಿದಾಸರು ಹೇಳಿರುವುದಿಲ್ಲ.

ಇತರ ಹರಿದಾಸರು ವರ್ಣಿಸದ ಶಿವಧನು ವೃತ್ತಾಂತವನ್ನು ಐಹೊಳೆ ವೆಂಕಟೇಶದಾಸರು ಹೀಗೆ ಸಂಗ್ರಹಿಸಿದ್ದಾರೆ.

ಹಿರಿಕಿರಿಯರಂಬುವರು ನಿಂಮೊಳಗ ದಾರೆಮಗ
ಸತ್ವದಿಂದೊದಿಗೀಗ ತೋರಬೇಕೆನುತಮರ
ವರಭಟರು ಕೇಳುತಿರೆ ಅಚ್ ದೊಂದು ಸಾವಿರದ
ಪರಿಯಂತ ಹೋರಿದರು ತೀರಿ ಸಾಹಸವಾಗ
ಪರಮನಾರಾಯಣನು ಅಡಗಿದನು ಹರನಿತ್ತ
ಗೀರ್ವಾಣ ಸಂತತಿಯ ಸಂಶಯವ ಕಳೆದರಾ ಬಳಿಕ
ವೈಷ್ಣವ ಚಾಪಕೃತಯುಗದ ಅಂತಿಯಲಿ
ಪರಶುರಾಮಗ ಸಂದು ಜಮದಗ್ನಿ ಭೃಂಗಪಿಡಿದು
ಬಂದುದೀ ಜನಕಂಗೆ ರಾಮ ನೀ ನೋಡೆಂದನೂ -೪- (ಕೀ ೪೬೨ ಸಂ.೨೧/೪)

ಶಿವಧನು ವೃತ್ತಾಂತವನ್ನು ಕೇಳಿದ ರಾಮನಿಗೆ ಕೌಶಿಕ ಮುನಿ ಸಂಕ್ಷಿಪ್ತವಾಗಿ ಮೇಲಿನಂತೆ ಹೇಳುತ್ತಾನೆ.

ಸ್ವಯಂವರಕ್ಕೆ ಸೀತೆಯ ಶೃಂಗಾರಗೊಂಡ ಬಗೆಯನ್ನು ಕಣ್ ಮೆಚ್ಚುವಂತೆ ವರ್ಣಿಸಿದ್ದಾರೆ.

ಕುರುಳುಗೂದಲುಗಳಿಗೆ ಕೊಟ್ಟ ಧೂಪದ ಹೊಗಿಯ
ಸರ ಬೈತಲಿ ತೆಗೆದು ಇರಿಸಿ ರಾಗುಟ ಚೌರಿ
ಹೆರಳು ಭಂಗಾರವನು ಸರಸಿಟ್ಟು ಗೊಂಡಯವ
ಸರಗೊಳಿಸಿ ಜಡಿಗಟ್ಟಿ ರಂನಗಂನಡಿ ತರಿಸಿ
ರಾಜವದುನಿಯ ಮುದ್ದು ಮುಖದ ಮುಂದಿಡೆ ನೋಡಿ -೩-

ವರಕರ್ನ ಭೂಷಣವು ಒಪ್ಪಾಗಿ ತೋರುವುದು
ಸರಿಯಾದ ಚಳತುಂಬು ಗಿಳಿಹಚ್ಚಿದ್ವಾಲಿಗಳು
ಮ್ಯಾಲೆ ದ್ರಾಕ್ಷಾಲತಿಯು ಮಿರುಗುತಿಹ ಬಾವುಲಿಯು
ಮೀಟ ತೋರುತಲಿರಲು ಅರಳು ಸಂಪಿಗಿ ಮೊಗ್ಗಿ
ನನಿಯಂತೆ ಶೋಭಿಸುವ ನಾಶಿಕದ ನಯವಾದ
ಶ್ರೇಷ್ಠ ಮೂಗುತಿನಿಟ್ಟು ಸೀರಕ್ಷದ ಮಾಲಿಯಂತೊಲಿವ
ಬಾಹುದ್ವಯಕ ವಂಕಿ ನಾಗರಮುರಗಿ ಚಂದ್ರ ಬಾಜುವ ಬಂದು
ಕಂಕಣವು ಕರದೋರ್‍ಯಾ ಹರಡಿ ಹಸ್ತವ ಕಡಗ
ಬೆರಳಿಲುಂಗುರವಿಟ್ಟು ಹರಿಮಧ್ಯ ಕಿಂಪಾಗಿ
ಹರಿಮುಖದ ವಡ್ಯಾಣ ಹರಿಣಾಕ್ಷಿಯರಿಡಲು
ಕಾಲ್ಗೊಡರು ಕಡಗ ಬಲು ಪೈಜಣ ಝುಣಕೃತದಿ
ಕಾಲುಂಗ್ರ ಕಿರಿಪಿಲ್ಯಾಮೀನು ಉಲ್ಲುಗಳಂನು
ಸಾಲ್ದಳೆದು ಪಾದದಲಿ ಸರಿಸಿಟ್ಟು ಸೊಬಗಿನಲಿ
ಫಣೆಗೆ ಕುಂಕುವ ಬೆಳಿಟ್ಟರೂ (ಕೀ ೪೬೨ ಸಂ.೨೧/೨)

ಹೀಗೆ ಸರ್ವಾಲಂಕಾರಿತಳಾದ ಸೀತೆಯ ತೊಟ್ಟಿರುವ ಆಭರಣಗಳ ವರ್ಣನೆ ಬಹು ವಿಸ್ತಾರವಾಗಿ ಬಂದಿದ್ದು ಅಲಂಕೃತಗೊಂಡ ಸೀತೆ ಯಜ್ಞಶಾಲೆಗೆ ಬಂದಾಗ ಜನಕ ಮಹಾರಾಜನು ಅಲ್ಲಿ ನೆರೆದಿದ್ದ ರಾಜ, ಯುವರಾಜ, ದೇವಾನುದೇವತೆಗಳಲ್ಲಿ "ನಿನ್ಮನಕ ಬರುವುವರಾರು ನೋಡೆನು" ಎಂದು ಅಲ್ಲಿ ವನರಲ್ಲಿ ಯಾರಿಗೆ ಬೇಕಾದರೂ ಆರಿಸಿಕೊಳ್ಳಲು ಸೀತೆಗೆ ಹೇಳಿದಾಗ ಆಗ ಸೀತೆಯು "ಅಪ್ಪಾ ಕೇಳೋ ಎಂನಾ ಮಾತಾ ಆಲಿಸಿದುಂಟಾದಾರಿಂನೂ ವಪ್ಪುವಾರ್‍ಯಾರೆಂಬುವಾದು ಹೇಳುವೆ ನಿನಗೆ" ಎನ್ನುತ್ತ ಇವರಲ್ಲಿ ಯಾರು ಶಿವಧನುವೆನ್ನತ್ತಲು ಶಕ್ತರೋ ಅವರನ್ನೇ ತಾನು ವಿವಾಹವಾಗುವೆಳೆಂದು ಹೇಳುತ್ತಾಳೆ. ಸೀತೆಯು ಹೇಳಿದ ಮಾತನ್ನು ಅನುಸರಿಸಿ ಜನಕ ಮಹಾರಾಜ ಸಭೆಯಲ್ಲಿ ಶಿವಧನು ಎದೆಯೇರಿಸಿದ ಗಂಡಿಗೆ ತನ್ನ ಮಗಳು ಸೀತೆಯೊಂದಿಗೆ ಮದುವೆ ಮಾಡಿಸಿಕೊಡುವನೆಂದು ಸಾರಿದ ಇದನ್ನೊಪ್ಪಿದ ಅತಿಥಿಗಳೆಲ್ಲ ಶಿವಧನು

ಎದೆಯೇರಿಸಲು ಪ್ರಯತ್ನಿಸಿದ ಸಂದರ್ಭ ಬಹಳ ಹಾಸ್ಯಮಯವಾಗಿ ವರ್ಣಿಸಿದರೂ ಶಿವಧನುವಿನ ಭಾರದ ಪರಿಮಾಣ ತಿಳಿಸಲು ಪ್ರಯತ್ನಿಸಿದ್ದಾರೆ.

ನೆಲದಣುಗಿಯಳ ಬಯಸಿ ಬಂದ ರಾಯರ

ಕರಿಯ ಹೋದವರಿಗಂದರೀ ಪರಿಯಲ್ಲಿ ಕೇಳಿರೈ

ಕೆಲವರಿಗೆ ತಲಶೂಲಿ ಹಲವರಿಗೆ ಮಲಬದ್ಧ

ಛಳಿಜ್ವರವು ಕೆಲವರಿಗೆ ನಾಲ್ಕು ದಿವಸದ ಕ್ರಮವು

ನಮಗೆಂದರೈ ಕೆಲರು ಹೇಳಲೇನೈ ದನಿವಿನ್ನೆಸರುಗೊಂಡರೆ ಸಾಕು

ಸಾರಣೆಯು ತಮಗಿಕ್ಕಿ ಮಿಡುಕುವರು ಕೆಲಕಲರೂ

ಕೋಲು ಬ್ಯಾಡಿರೆಂಬಮನೆಂಬುವರಲ್ಲಿ ಕಾಲ್ಗೆರಗಿ

ಹರಿವಾತ ವುರಿವಾತ ನರವಾತವೀಗೆಂದು

ಹೆಸರು ತೆಗೆಯದಿರೆಂದು ಬಸವಳಿದು ಬಂಣುಗುಂದಿ (ಕೀ ೪೬೨ ಸಂ. ೨೧/೨)

ಹೀಗೆ ಶಿವಧನುವೆತ್ತಲು ವಿಫಲರಾಗಿ ಸಭಿಕರ ಮುಂದೆ ಮುಖಭಂಗ ಪಟ್ಟುಕೊಂಡು ಮಿಥಿಲಾಪುರದ ಜನರ ನಡುವೆ ಅಪಹಾಸ್ಯಕ್ಕೀಡಾದರು. ಆಗ ಪುಷ್ಪಕವಿಮಾನದಿಂದಿಳಿದು ದೈತ್ಯ ಸಾಮ್ರಾಟ ರಾವಣನು ಸೀತಾಸ್ವಯಂವರಕ್ಕೆ ಬಂದ ವಿಷಯವನ್ನು ಪ್ರಸ್ತಾಪಿಸುತ್ತಾ ಯಜ್ಞಶಾಲೆಯಲ್ಲಿ ಯಾರೂ ಶಿವಧನುವೆತ್ತದಿದ್ದಾಗ ಚಿಂತಾಕ್ರಾಂತನಾಗಿರುವಾಗ ಸ್ವಯಂವರಕ್ಕೆ ಆಗಮಿಸಿದ ರಾವಣನು ಧನಸ್ಸುನ್ನು ಎತ್ತಿಬಿಟ್ಟರೆ ತನ್ನ ಕೋಮಲ ಮಗಳನ್ನು ಈ ರಾಕ್ಷಸನಿಗೆ ಕೊಡುವುದುಚಿತವೇ ಎಂದು ಚಿಂತಿಸುತ್ತಾನೆ.

ಮಲ್ಲಿಗೀಯಾ ಹೂವಾನೂ ಬಲ್ಲರಾದಾ ಜಾಣರೂ

ಕಲ್ಲಿನೋಳೀಟ್ಟು ತೀಡುವರೇ ...(ಕೀ ೪೬೨ ಸಂ.೨೧/೨)

ಗೊತ್ತಿದ್ದು ಗೊತ್ತಿದ್ದು ಯಾರಾದರೂ ತನ್ನ ಹೂವಿನಂತ ಮಗಳನ್ನು ಕಲ್ಲಿನಂತ ವ್ಯಕ್ತಿಗೆ ಕೊಟ್ಟು ಮದುವೆ ಮಾಡುವರೆ ಇದೆಲ್ಲ ವಿಧಿಯಾಟ ಎಂದು ಮರುಗುತ್ತಾನೆ

ಸ್ವಯಂವರದ ಸ್ಥಳ ಯಜ್ಞಶಾಲೆಗೆ ಬಂದ ರಾವಣನು ತನ್ನ ಜೀವ ಮಂತ್ರವನ್ನು ಜಪಿಸಿ

ತೋರಿ ಬಲು ಸಾಹಸವ ತವಕದಲಿ ತಂನ ಭುಜ

ನೇರದಲಿ ನಿಲ್ಲಿಸಲು ನಿಬ್ಬರವು ತನಗಾಗಿ ಹರಣ

ಹಾರುತಲಿ ಕಳವಳಿಸಿದನದೇನೆಂಬೆ

ಮೀರಿ ಅಲುಗಿದವಾಗ ಕೈಕಾಲುಗಳು ಬಿಡದೆ

ವಾಮ ದೇವನ ಧನುವು ಯೇರುಕಿವಿಗದೆ ಮಾತ್ರಾ

ಉಳಿದುದಾ ಕೂಟಕ್ಕೆ ಶೇರದೆಂಬುವ ಕಾರ್ಯ

ಖಂಬಲಸಿ ಕೆಡುವಂತೆ ಬಿಲ್ಲು ಮ್ಯಾಲೊರಗಿ ಭೂಮಿಗೆ ಬಿದ್ದನೋ-೨- (ಕೀ ೪೬೨ ಸಂ. ೨೧/೨)

ದಿಗ್ವಿಜಯಿ ಲೋಕಕಂಟಕ, ದೈತ್ಯಸಾಮ್ರಾಟ ಹೀಗೆ ತುಂಬಿದ ಸಭೆಯಲ್ಲಿ ಅವಮಾನಿತನಾಗಿ

.....ಇತ್ತ ರಾವಣ ತಂನ ಮನದಿ ಚಿಂತಿಯ ತಾಳಿ
ಚೇತರಿಸಿಕೊಂಡೆದ್ದು ಕುಳಿತು ಮಾತಾಡಿದನು ಮತ್ತು ಸೀತೆಯ ನಾನು
ಕಳವಿನಲಿ ಕೊಂಡೊಯ್ವೆನುತ ಲಜ್ಜೆಯಲಿಂದ
ಲಗುಬಗಿಯೊಳನುವಾಗಿ
ತೆರಳಿದನು ತಂನ ಪಟ್ಟಣವೆಂಬ ಲಂಕಿಗಾಗ -೧- (ಕೀ ೪೬೨ ಸಂ. ೨೧/೨)

ಅವಮಾನಿತನಾದ ರಾವಣ ಎಚ್ಚೆತ್ತು ಕೊಂಡು ಆಸನದಲ್ಲಿ ಕುಳಿತು ತಾನು ಸೀತೆಯನ್ನು ಕದ್ದೊಯ್ದು ತನ್ನವಳನ್ನಾಗಿಸಿಕೊಳ್ಳುತ್ತೇನೆಂದು ಅಲ್ಲಿಂದ ಹೊರಟು ಹೋಗುತ್ತಾನೆ. ಮುಂದಿನ ರಾಮಾಯಣ ಕಥಾಭಾಗಕ್ಕೆ ಸೀತಾಪಹರಣಕ್ಕೆ ರಾಮಾಯಣ ಯುದ್ಧಕ್ಕೆ ನಾಂದಿ ಇಲ್ಲಿಂದಲೇ ಪ್ರಾರಂಭವಾಗುವುದನ್ನು ಕಾಣಬಹುದು.

ಕೌಶಿಕ ಮುನಿಯ ಆಜ್ಞೆಯಂತೆ ರಾಮ ಶಿವಧನು ಎತ್ತಲು ಬಂದಾಗ ಸೀತೆಯ ಸಖಿಯರಿಗೆ ರಾಮ

...
ನೆರೆದ ಜನರೆಲ್ಲರ್ಗೆ ರಾಜ ನಂದನಂತೆ
ಅರಸರೆಲ್ಲರಿಗೀತನಿಧಿಕಾರಿಯಾದಂತೆ ತರುಣಿಯರ
ಕಣ್ಗಳಿಗೆ ಪೂಗಣೆಯನೆಂಬಂತೆ ಕಾಣಿಸಿದನೀಪರಿಯಲೀ-೨-

ಖ್ಯಾತ ಶಿವ ಚಾಪವನು ಯತ್ತಲೇನಿವನೋಮೆ
ಕಂಡರೆ ಸೀತೆಗೆ ರಾಮ ಯತ್ತದಿದ್ದರು ಸರಿಯು ಮತ್ತ ಪ್ರೀತಿಯ ವಚನ
ಆತುರದಿ ಕಡುಬಡವ
ನತಿಧನವ ಕಂಡಂತೆ ಜಾತಕವು ಚಂದ್ರಿಕೆಯ
ಕಂಡು ನಲಿದೋಲಿವಂತೆ ಸೀತೆ ಶ್ರೀರಾಮಚಂದ್ರನು
ತಂನ ಕಣ್ಗೋನೆಗಳೆಂದಾಗ ನೋಡಿ ಹರುಷಿತಳಾದಳೂ-೩- (ಕೀ ೪೬೨ ಸಂ.೨೧/೨)

ಈತ ಶಿವಧನುವನ್ನೆತ್ತದಿದ್ದರೂ ಪರವಾಗಿಲ್ಲ ಈತನೇ ತನ್ನ ವರವೆನ್ನುತ ಮನದಲ್ಲಿ ನಿಶ್ಚಯಿಸಿದಳು ಎಂಬ ಹೊಸ ವಿಷಯ ತಿಳಿಸಿದ್ದಾರೆ. ಮುಂದಿನ ಮಿಕ್ಕೆಲ್ಲ ಘಟನೆಗಳು ವಾಲ್ಮೀಕಿ ರಾಮಾಯಣದಂತೆಯೇ ವರ್ಣಿಸಿದ್ದಾರೆ. ಜೊತೆಗೆ ಕನ್ನಡ ನಾಡಿನಲ್ಲಿ ನಡೆಯುವ ಸಂಪ್ರದಾಯಬದ್ಧ ಮದುವೆಯ ಸಂಪ್ರದಾಯಗಳಾದ ಅರಸಿನೆಣ್ಣೆ ಶಾಸ್ತ್ರದ ಹಾಡು, ಉರುಟಣೆಪದ ಶೋಭಾನ ಹಾಡುಗಳಲ್ಲಿ ಸೀತಾ ರಾಮರ ಸೌಂದರ್ಯವರ್ಣನೆ, ಪೂಜಾವಿಧಾನಗಳು, ಬೀಗರ ಊಟ, ಅತಿಥಿ ಸತ್ಕಾರದ ವರ್ಣನೆ ಮತ್ತೆ ಅಳಿಯಂದಿರನ್ನು ಅವರ ಮನೆಗೆ ಕಳುಹಿಸ ಬೇಕಾದಾಗ ಬಳುವಳಿ ನೀಡಿ ಸಂತೈಸಿ ಅವರನ್ನು ಅಯೊಧ್ಯೆಗೆ ಬೀಳ್ಕೊಡುತ್ತಾನೆ. ಹೀಗೆ ಪಹೊಳೆ ವೆಂಕಟೇಶದಾಸರ ಶ್ರೀರಾಮ ಪಾರಿಜಾತದಲ್ಲಿ ಸಂಪೂರ್ಣ ಬಾಲಕಾಂಡ

ಬಹಳ ವಿಸ್ತಾರವಾಗಿ ಬಂದಿದ್ದು ಇಲ್ಲಿ ನಡೆಯುವ ಸೀತಾಕಲ್ಯಾಣದ ವಸ್ತು ಮೂಲ ಸೀತಾ ಕಲ್ಯಾಣಕ್ಕೆ ಬಹುಮಟ್ಟಿಗೆ ಹೋಲುತ್ತದೆ. ಆದರೆ ಅಲ್ಲಲ್ಲಿ ಹಲವು ಕಡೆ ತುಂಬ ವಿಸ್ತೃತ ಹಾಗೂ ದೀರ್ಘವರ್ಣನೆಗಳು ಇದರಲ್ಲಿ ಕಾಣಸಿಗುತ್ತದೆ.

ನಂಜನಗೂಡು ತಿರುಮಲಾಂಬರ ಭದ್ರಾಗೀತಾವಳಿ ಎಂಬ ಕೀರ್ತನೆಗಳಲ್ಲಿ ವಧುವರರ ಪರಸ್ಪರ ಉರುಟಣೆಯ ಸೀಸಪದ್ಯಗಳ ನಡುನಡುವೆ ಬರುವ ಸಂಪ್ರದಾಯದ ಕೀರ್ತನೆಗಳಿದ್ದು ಹರಿಯ ನಿಂದಾಸ್ತುತಿ ಇದರ ಮುಖ್ಯ ಉದ್ದೇಶ ಮದುವೆಯ ಸಂದರ್ಭದಲ್ಲಿ ವಧುವರರು ಸಾಕ್ಷಾತ್ ಸೀತಾರಾಮರ ಸ್ವರೂಪ ಎಂಬ ನಂಬಿಕೆ ಇರುವುದರಿಂದ ಸೀತಾರಾಮರೇ ಪರಸ್ಪರ ಉರುಟಣೆ ಮಾಡಿದಂತಿರುವ ಈ ಹಾಡುಗಳನ್ನು ಮದುವೆಯಲ್ಲಿ ವಧೂವರರೇ ಹಾಡುವುದು ಇಲ್ಲವೆ ಅವರ ಪರವಾಗಿ ಬೇರೆಯವರು ಹಾಡುತ್ತಾರೆ. ಈ ಹಾಡುಗಳ ಬಹುಪಾಲು ಭಾಗ ಸೀತಾಕಲ್ಯಾಣವನ್ನೇ ಹೊಂದಿದ್ದು ನಡುನಡುವೆ ಹರಿಯ ದಶಾವತಾರ ವರ್ಣನೆ ರಾಮಾಯಣದ ಇತರ ಭಾಗಗಳನ್ನು ಇದರಲ್ಲಿ ಕಾಣಬಹುದು.

ಪರಶುರಾಮ ಗರ್ವಭಂಗ:-

ಸೀತಾಸ್ವಯಂವರದ ಸಂದರ್ಭದಲ್ಲಿ ರಾಮ ಶಿವಧನಸ್ಸನ್ನು ಮುರಿದ ವಿಷಯವನ್ನು ತಿಳಿದ ಪರಶುರಾಮ ಸೀತೆಯೊಡನೆ ಅಯೋಧ್ಯೆಗೆ ತೆರಳುತ್ತಿದ್ದ ರಾಮನ ಮಾರ್ಗ ಮಧ್ಯೆ ಅಡ್ಡಲಾಗಿ ಬಂದು, ರಾಮನಿಗೆ ಶಿವಧನಸ್ಸು ವೈಷ್ಣವ ಧನುಸ್ಸಿನ ವೃತ್ತಾಂತ ತಿಳಿಸಿ, ತನ್ನ ಬಳಿಯಿರುವ ವೈಷ್ಣವ ಧನುಸ್ಸಿಗೆ ಬಾಣ ಹೂಡಬೇಕೆಂದು ಆಹ್ವಾನಿಸುತ್ತ ಇದರಲ್ಲಿ ರಾಮ ಸೋತರೆ ಪರಸ್ಪರ ದ್ವಂದ್ವ ಯುದ್ಧಕ್ಕೆ ಸಿದ್ಧನಾಗಲು ತಿಳಿಸುತ್ತಾನೆ. ಶ್ರೀರಾಮ ವೈಷ್ಣವ ಧನುಸ್ಸಿಗೆ ಬಾಣ ಹೂಡಿ ಪರಶುರಾಮನ ತಪೋಬಲವನ್ನು ಹೀರುತ್ತಾನೆ. ಅಂದರೆ ಹರಿಯ ಆವೇಶವತಾರವಾದ ಪರಶುರಾಮನ ಅವತಾರ ಕಾರ್ಯವು ಅಲ್ಲಿಗೆ ಮುಗಿಯುತ್ತಾ ಹರಿಯ ಪೂರ್ಣಾವತಾರವಾದ ರಾಮನ ಅವತಾರ ಕಾರ್ಯ ತನ್ನ ಉತ್ತುಂಗಕ್ಕೇರುತ್ತದೆ. ರಾಮನು ಪರಶುರಾಮನ ಮೇಲೆ ಹೂಡಿದ ಬಾಣದಿಂದ ಆತನಲ್ಲಿದ್ದ ವೈಷ್ಣವಾಂಶವನ್ನು ಉಪಾಯದಿಂದ ಕಸಿದುಕೊಳ್ಳುತ್ತಾನೆ ಎಂಬರ್ಥ ವಾಲ್ಮೀಕಿ ರಾಮಯಣದಲ್ಲಿದೆ.

ಆದರೆ ಮಧ್ವ ರಾಮಾಯಣದಲ್ಲಿ ಇದಕ್ಕೆ ಬೇರೆಯಾದ ಕಾರಣ ನೀಡುತ್ತಾರೆ. ಈ ವಿಷಯವನ್ನು ಅಧ್ಯಾಯ 2ರಲ್ಲಿ ವಿವರಿಸಲಾಗಿದೆ.

ಹರಿದಾಸರು ಮಧ್ವರಾಮಾಯಣದಲ್ಲಿ ಬರುವ ಪರಶುರಾಮನ ಪ್ರಸಂಗವನ್ನುಸರಿಸದೆ ವಾಲ್ಮೀಕಿ ರಾಮಾಯಣವನ್ನುಸರಿಸುವುದನ್ನು ಕಾಣಬಹುದು. ಹರಿಯ ದಶಾವತಾರ ವರ್ಣನೆ ಬಂದಾಗ ಮತ್ತು ರಾಮಾಯಣದ ಪ್ರಸಂಗಗಳನ್ನು ಪ್ರಸ್ತಾಪಿಸುವುದಾಗಿ, ಶ್ರೀಹರಿಯ ಪರಾಕ್ರಮ ವರ್ಣಿಸುವಾಗ ಈ ಪ್ರಸಂಗವನ್ನು ಬಹಳವಾಗಿ ಬಳಸಿರುತ್ತಾರೆ.

ಅಂಬಾಬಾಯಿಯವರು ಈ ಪ್ರಸಂಗವನ್ನು ಬಹಳ ಸಂಕ್ಷಿಪ್ತವಾಗಿ ಈ ರೀತಿ ವರ್ಣಿಸಿದ್ದಾರೆ.

ಧನುವ ಮುರಿದುದ ಕೇಳಿ ಜಮದಗ್ನಿ ಕುವರನು

ನಿನ ಸಂಗಡದಲಿ ಕಾಳಗಕೆ ಬರಲು

ದನುಜರಿಗೆ ಭ್ರಮೆಗೊಳಿಸ ಕನಲುತಿಬ್ಬರು ಕಾದಿ

ಘನಬಲ ಗೆಲಿದಂಥೆ ಅನುಗುಣನೆ ರಾಮ ।೪। (ಕೀ ೨೪೮, ಸಂ.೧೮/೩)

ರಾಮ ಪರಶುರಾಮರ ನಡುವೆ ನಡೆದ ಕಾಳಗವನ್ನಾರು ಅರಿಯದಂತೆ ಜನರನ್ನ ಭ್ರಮೆಗೊಳಿಸಿ ಗೆದ್ದಂತಹ ರಾಮ ಎಂದು ನಾರಾಯಣದಾಸರು ತಮ್ಮ ಕೀರ್ತನೆಯೊಂದರಲ್ಲಿ ರಾಮ ಪರಶುರಾಮನ ತಪಬಲವನ್ನು ಧನುಸ್ಸಿನ ಮೂಲಕ ಹೀರಿದ ವಿಷಯವನ್ನು ಈ ರೀತಿ ವಿವರಿಸಿದ್ದಾರೆ.

ಪಥದಿ ನೀ ಬರುತಿರಲು ಪರಶುರಾಮನ ಕಂಡು

ಪರಮ ಶಕ್ತಿಯನು ಸೆಳೆದು (ಕೀ ೧೧. ೨೦೩೦)

ಕವಿ ಪರಮದೇವರು

ಪರಶುರಾಮನ ಗರ್ವಗಿರಿಯ ಜರಿಸಿ

ಪರಾಕ್ರಮವನು ತಮಿಸಿದೆ ಶ್ರೀರಾಮ ।೨। (ಕೀ ೩೨, ಸಂ.೩೩)

ಪರಶುರಾಮನು ತಾನೊಬ್ಬನೇ ಶಾರ್ಙ್ಗ ಬಿಲ್ಲನ್ನು ಎತ್ತಿ ಬಾಣ ಹೂಡಲು ಶಕ್ತನೆಂದರಿತು ಗರ್ವದಿಂದ ಕೂಡಿದ್ದರಿಂದ ರಾಮ ಆ ಬಿಲ್ಲನ್ನು ಎದೆಯೇರಿಸುತ್ತಾನೆ. ಹರಿದಾಸರು ಈ ಪ್ರಸಂಗವನ್ನು ಪರಶುರಾಮ ಗರ್ವಭಂಗ ಎಂದು ಹೇಳಿದ್ದಾರೆ.

ಇದೇ ವಿಷಯವನ್ನು ಹರಪನಹಳ್ಳಿ ಭೀಮವ್ವನವರು ಈ ರೀತಿ ಹಾಡಿದ್ದಾರೆ.

ಅರಸರಂತಕನಾದ ಪರಶುರಾಮನ ಗೆದ್ದ

ಅರಸಂಘ್ರಿಗಳನು ಸ್ಮರಿಸಿಕೊಂಡು ।೬। (ಕೀ ೩೬, ಸಂ.೧೯)

21 ಬಾರಿ ಭೂಮಿಯನ್ನು ಸುತ್ತಿ ಕ್ಷತ್ರಿಯ ಕುಲವನ್ನೇ ನಾಶಮಾಡುತ್ತಿದ್ದ ಪರಶುರಾಮನ ಗರ್ವಭಂಗ ಮಾಡಿದಂಥ ರಾಮನ ಪಾದಗಳನ್ನು ಸ್ಮರಿಸಿದ್ದಾರೆ.

ಐಹೊಳೆ ವೆಂಕಟೇಶರಾಯರು ಬಹಳ ಪರಿಣಾಮಕಾರಿಯಾಗಿ ಮಾಡಿದ ಪರಶುರಾಮನ ವರ್ಣನೆ ಹೀಗಿದೆ.

ಆಲಿಗಳು ಕೆಂಪಡರಿ ವುದರಿದವು ಕೆಂಗಿಡಿಯು

ಪೇಳಲೆನದನಿಂನೂ ಕುಣಿದವೈ ಕುಡಿಮೀಸಿ

ಕಲ್ಪಾಂತರದಿ ತೆಗೆದ ಹರನ ಕಂಣುರಿಯಂತೆ

ತೋರುವಂದದಲಾಯಿತಾಗ ಭೃಗುಸುತ ಮುಳಿದು

ಅರಿಯಬಹುದಿಂದನೆನುತ ಕೊಡಲಿಯನು

ಜಡಿದನೈ ಪರಶುರಾಮ(ಕೀ೪೬೨, ಸಂ೨೧/೨)

ಇಲ್ಲಿ ಪರಶುರಾಮನ ರೌದ್ರಾವೇಶದ ವರ್ಣನೆ ಬಂದಿದ್ದು ವಾಲ್ಮೀಕಿ ರಾಮಾಯಣದಲ್ಲಿ ಈ ತೆರನಾಗ ವರ್ಣನೆಯಿಲ್ಲ. ಮುಂದಿನ ಘಟನೆಗಳೆಲ್ಲ ರಾಮಾಯಣದಂತೆ ಇವರ ದೀರ್ಘ ಕೀರ್ತನೆಯಲ್ಲಿ ಸಾಗಿದೆ.

ಅಯೋಧ್ಯಾಕಾಂಡದ ಪ್ರಸಂಗಗಳು

ರಾಮನಿಗೆ ವನಘಾಸವಾದದ್ದು:-

ವಾಲ್ಮೀಕಿ ರಾಮಾಯಣದ ಪ್ರಕಾರ ಸೀತಾಸ್ವಯಂವರವಾದ ಹನ್ನೆರಡು ವರ್ಷಗಳ ಕಾಲ ದಾಂಪತ್ಯ ಜೀವನ ಅನುಭವಿಸಿದ ರಾಮನಿಗೆ ದಶರಥನು ಪಟ್ಟಾಭಿಷೇಕ ನಡೆಸಲು ಉದ್ಯುಕ್ತನಾದಾಗ ದಾಸಿ ಮಂಥರೆಯ ಮಾತಿನಂತೆ ಕೈಕೆ ತನ್ನ ಪೂರ್ವದ ವರಗಳನ್ನು ಮಹಾರಾಜನಲ್ಲಿ ಕೇಳಬಯಸಿ ರಾಮನಿಗೆ ಹದಿನಾಲ್ಕು ವರ್ಷ ವನವಾಸ, ಭರತನಿಗೆ ಪಟ್ಟಾಭಿಷೇಕ ಮಾಡುವುದನ್ನು ಬಯಸುತ್ತಾಳೆ. ಹರಿದಾಸರ ಕೀರ್ತನೆಗಳಲ್ಲಿ ಗಮನಿಸಬೇಕಾದ ಅಂಶವೆಂದರೆ ಸೀತಾಕಲ್ಯಾಣ ಆದ ನಂತರವೋ ಪರಶುರಾಮನು ಬಂದ ವಿಷಯದ ನಂತರವೋ ದಶರಥನ ಮಾತಿನಂತೆ ಕೈಕೆ ನುಡಿಗೆ ತಕ್ಷಣ ರಾಮ, ಸೀತೆ ಮತ್ತು ಲಕ್ಷ್ಮಣನೊಡನೆ ವನವಾಸಕ್ಕೆ ಹೋದ ವಿಷಯ ಪ್ರಸ್ತಾಪಿಸುತ್ತಾರೆಯೇ ಹೊರತು ಈ ಹನ್ನೆರಡು ವರ್ಷಗಳ ಪ್ರಸ್ತಾಪ ಎಲ್ಲಿಯೂ ಇಲ್ಲ ಇದಕ್ಕೆ ಕಾರಣ ತಾವು ರಚಿಸುತ್ತಿರುವ ಕೀರ್ತನೆ ಚಿಕ್ಕದಾಗಿರುವುದರಿಂದ. ಹಾಡಲು ಅನುಕೂಲವಾಗುವಂತೆ ಮತ್ತೆ, ಅಯೋಧ್ಯೆಯಲ್ಲಿ ಸೀತೆಯೊಡನೆ ಇದ್ದ ಹನ್ನೆರಡು ವರ್ಷಗಳ ಕಾಲ ರಾಮ ತನ್ನ ಯಾವುದೇ ಚಮತ್ಕಾರ ಮಹಿಮೆಯನ್ನು ತೋರಿಸದಿದ್ದರಿಂದ ಇದನ್ನು ತಮ್ಮ ಕೀರ್ತನೆಯಲ್ಲಿ ಬಳಸಿಕೊಂಡಿಲ್ಲ. ವಾಲ್ಮೀಕಿ ಮಹರ್ಷಿಯೂ ಅಷ್ಟೇ ಇದನ್ನು ಪ್ರಸ್ತಾಪಿಸಿದ್ದಾರೆಯೇ ಹೊರತು ಇದರ ಸಂಪೂರ್ಣ ವಿವರಣೆ ನೀಡಿಲ್ಲ.

ರಾಮ ವನವಾಸಕ್ಕೆ ಹೋದದ್ದು ತನ್ನ ತಂದೆಯ ಮಾತನ್ನು ನಡೆಸಿ ಕೊಡುವುದಕ್ಕಾಗಿ ಹಾಗೆಯೇ ದುಷ್ಟ ನಿಗ್ರಹವಾಗಿಸಲೂ ಈ ಘಟನೆ ಅವಶ್ಯಕವಾಗಿತ್ತು ಎಂಬುದು ಒಳಾರ್ಥ. ಆದರೆ ಇದನ್ನು ವಾಲ್ಮೀಕಿ ನೇರವಾಗಿ ಹೇಳಿಲ್ಲ ಶ್ರೀಮದ್ವಾಚಾರ್ಯರು ರಾಮ ವನವಾಸಕ್ಕೆ ಹೋದದ್ದು ತಂದೆ ಮಾತನ್ನು ನಡೆಸಬೇಕೆಂಬ ಗೌರವ ಭಾವ ಮತ್ತು "ಸಂಸ್ಥಾಪ್ಯಾಶೇಷಜಂತುನ್ ಸ್ವವಿರಹ ಜರುಪಾ ತ್ಯಕ್ತ ಸರ್ವೇಷಣಾರ್ಥಾನ್" (ಅಧ್ಯಾ ೫ ಶ್ಲೋಕ ೩)[೫] ಶ್ರೀರಾಮ ನಿಜಕ್ಕೂ ಕಾಡಿಗೆ ತೆರಳಿದ್ದು ದೇವತೆಗಳು ಮುನಿಗಳು ಬಯಸಿದ ರಾವಣ ವಧಾದಿ ಎಂದು ಹಾಡಿಹೊಗಳುವಾಗಲೆಲ್ಲ ಈ ಸಂದರ್ಭವನ್ನು ಬಳಸಿಕೊಂಡಿದ್ದಾರೆ.

ಯದುಗಿರಿಯಮ್ಮನವರು ಶ್ರೀಮದ್ರಾಮಾಯಣದಲ್ಲಿ ರಾಮನಿಗೆ ವನವಾಸ ಪ್ರಾಪ್ತವಾದ ಸಂದರ್ಭವನ್ನ ಹೀಗೆ ಹಾಡಿದ್ದಾರೆ.

ಕಂಡವರ ಮನದಲ್ಲಿ ರಮಿಸುವ ಪುಂಡರೀಕಾಕ್ಷನಿಗೆ ರಾಜ್ಯವ

ಕೊಡುವೆನೆ (ನುತ) ದಶರಥ ವ್ರತವನಾಚರಿಸಿದೆ ರಾಮಚಂದ್ರಗೆ ।೧೨।

ಕೈಕೆ ಪೂರ್ವದ ವರವ ಸ್ಮರಿಸಿ ಭರತನಿಗೆ ರಾಜ್ಯವನು ಬೇಡಿ ರಾಮನರ
ಣ್ಯಕ್ಕೆ ಪೋಗೆನೆ ಬೇಡ ಪೊರಟ ಶ್ರೀರಾಮಚಂದ್ರನೆ ।೧೩।

ಮಾತೆಯನು ಬಹುವಿಧದಿ ಮನ್ನಿಸಿ ಪಿತನ ಪ್ರಜ್ಞೆಯನು ಪಾಲಿಸಿ
ಸೀತೆಲಕ್ಷ್ಮಣರೊಡನೆ ವನವಾಸ ಪೊರಟ ರಾಮಚಂದ್ರಗೆ (ಕೀ.೫೨, ಸಂ.೧೮/೪)

ಕೈಕೆಯ ವರದ ಫಲವಾಗಿ ಕಾಡಿಗೆ ಹೊರಟ ಇಡೀ ಪ್ರಸಂಗವನ್ನು ಕೇವಲ ಮೂರು ನುಡಿಗಳಲ್ಲಿ ಹೆಣೆದಿದ್ದು ಇದು ಹರಿದಾಸರ ಸಂಕ್ಷೇಪ ಸಾಮರ್ಥ್ಯವನ್ನು ತಿಳಿಸುತ್ತದೆ.

ನಿಡಗುರುಕಿ ಜೀವೂಬಾಯಿಯವರು ದಶರಥ ರಾಮನಿಗೆ ಪಟ್ಟಕಟ್ಟಲು ಮಾಡಿದ ತಯಾರಿ ಅದಕ್ಕೆ ವಿಘ್ನ ತಂದ ಕೈಕೆ ಮತ್ತು ಕಾಡಿಗೆ ತೆರಳಿದ ರಾಮನ ಬಗ್ಗೆ

ದಶರಥನು ಪುತ್ರಗೆ ಪಟ್ಟವನು ಕಟ್ಟುವೆನು ಎನಲು
ದಶದಿಕ್ಕಿಗೆ ಪತ್ರವನು ಕಳುಹಿಸಲು
ಎಸೆವ ಮಂಗಳ ವಾದ್ಯ ಕೇಳುತಲೆ ಕೈಕೇಯಿ ಬರಲು
ಅಸದಳದವರ ಬೇಡಿ ಕಾಡಿಸಲು
ವಸುಧೆಗೀಶನ ವನಕೆ ಕಳುಹಲು
ಕುಶಲವಿಲ್ಲದೆ ಮರುಗೆ ದಶರಥ
ಮಿಸುಣಿಮಣಿ ಸಿಂಹಾಸನ ತ್ಯಜಿ
ಸುತಲಿ ಪಿತೃವಾಕ್ಯ ನಡೆಸಿದಾಗೆ ।೨। (ಕೀ ೧೩೧, ಸಂ.೧೮/೨)

ಇಲ್ಲಿ ರಾಮನ ತ್ಯಾಗ, ಪಿತೃವಚನ ಪಾಲನೆಯನ್ನು ಹೊಗಳಿದ್ದಾರೆ.

ದಶರಥರಾಮ ನೀನರಸನಾಗಲು
ಅಸುರಾವೇಶದಿ ಕೈಕೆವರವ ಯಾಚಿಸಲು
ಎಸೆವ ಸಿಂಹಾಸನ ತೊರೆದು ಪೊರೆಮಾಡಲು
ಶಶಿಮುಖಿ ಸೀತಾಲಕ್ಷ್ಮಣರ ಕೂಡಿ ಬರಲು ।೨। (ಕೀ ೪೦, ಸಂ.೧೬/೨)

ಇಲ್ಲಿ ಕೈಕೆಯನ್ನು 'ಅಸುರೆ' ಎಂದಿದ್ದು ಬಹುಶಃ ಶ್ರೀಮದಾಚಾರ್ಯರು ಹೇಳಿರುವ 'ನಿಕೃತಿ' ಎಂಬ ಅಸುರೆಯ ಆವೇಶ ಅವಳಲ್ಲಿತ್ತು ಎಂಬ ಮಾತನ್ನು ಜೀವೂಬಾಯಿಯವರು ನೆನಪಿಸಿರಬಹುದು.

ನಾರಾಯಣದಾಸರು ವಾಲ್ಮೀಕಿ ರಾಮಾಯಣದಲ್ಲಿ ರಾಮ ವನವಾಸಕ್ಕೆ ಹೋಗಬೇಕಾದ ಸಂದರ್ಭದಲ್ಲಿ ತನ್ನದಾಗಿದ್ದ ಸಂಪತ್ತನ್ನು ದಾನ ಮಾಡಿ ಕಾಡಿಗೆ ಹೋಗುವ ವಿಷಯವನ್ನು ತಮ್ಮ ಕೀರ್ತನೆಯಲ್ಲಿ ಈ ರೀತಿ ವಿವರಿಸಿದ್ದಾರೆ.

ಸತಿಯಿಂದಲೊಡಗೂಡಿ ಪುರವ ಸೇರಲು
ಪತಿಯವರವನು ಕೇಳಲು
ವಿತಿತ ಚಿಂತಿತನಾಗಿ ನುಡಿವ ತಂದೆಯ ಮಾತ
ನತಿ ಹರುಷದಿಂದ ತಾಳಿದೆ ಸ್ವಾಮಿ ।೨।
ಜನನಿಗೆರಗುತ ಆಕೆ ವಮಾಡಿದಾಶೀರ್ವಾದ
ವನು ಶಿರದೊಳಾಂತು ಬಂದು
ಧನಕನಕ ವಸ್ತು ಗೋವುಗಳ ಬ್ರಹ್ಮರಿಗಿತ್ತು
ಮುನಿವೇಷವನ್ನು ಧರಿಸಿ
ಅನುಜ ಲಕ್ಷ್ಮಣ ಸೀತೆ ಸಹಿತ ಪುರವನು ಬಿಟ್ಟು
ವನವಾಸಕಾಗಿ ತೆರಳಿ ।೩। (ಕೀ ೧೧, ಸಂ.೩೦)

ಇಲ್ಲಿ ರಾಮ ತಂದೆಯ ವಚನ ವಾಕ್ಯ ಪರಿಪಾಲಿಸಲು ಕಾಡಿಗೆ ಹೊರಟರೆ ವರವಣಿ ರಾಮರಾಯರು ರಾಮ ವನವಾಸಕ್ಕೆ ತೆರಳಲು ಕೆಳಗಿನಂತೆ ಕಾರಣ ನೀಡುತ್ತಾರೆ.

ಕುಶಲದಿಂದ ಯುವರಾಜ ಪಟ್ಟಕ್ಕೆ ಸನ್ನಾಹ
ವೆಸೆದಿರಲು ವಿಧಿಲೀಲೆಯೇನೆಂಬನಾಹ ।೮।
ದಶರಥ ಕಿರುಮಡದಿ ಪಡೆದ ವರಕನುವಾಗಿ
ಅಸಮ ಸತ್ಯಾತ್ಮಕನು ಸತಿ ಅನುಜ ಸಹಿತನಾಗಿ ।೯।
ವಸುಮತಿಯೊಳವತರಿಸಿ ಬಂದ ಕಾರ್ಯವನೆನೆದು
ಅಸಮ ನಾಟಕ ಸೂತ್ರಧಾರಿ ಅಡವಿಗೆ ನಡೆದು ।೧೦। (ಕೀ ೩೫೮, ಸಂ೨೭)

ಕುಶಲವರಿಗೆ ವಾಲ್ಮೀಕಿ ಮಹರ್ಷಿ ರಾಮಾಯಣ ಕತೆ ಹೇಳುವ ಹಾಗೆ ಈ ಕೀರ್ತನೆ ರಚಿತಗೊಂಡಿದ್ದು ಅರಮನೆಯಲ್ಲಿ ವಾಸವಾಗಿದ್ದ ಕಾಡಿಗೆ ಸೇರಲು ವಿಧಿವಿಲಾಸ ಎಂತಲೂ, ಶ್ರೀಹರಿಯ ರಾಮಾವತಾರವೆತ್ತಲು ಕಾರಣ ದುಷ್ಟಶಿಕ್ಷೆ ಶಿಷ್ಟ ರಕ್ಷಣವಾದ್ದರಿಂದ ತನ್ನ ಕಾರ್ಯಪೂರ್ಣಗೊಳಿಸಲು ಕಾಡಿಗೆ ಹೋಗುವುದು ಅನಿವಾರ್ಯವಾಗಿತ್ತು. ಆದ್ದರಿಂದ ಇಲ್ಲಿ ಕೈಕೆ ರಾಮವನವಾಸಕ್ಕೆ ಹೋಗಿಸಲು ಬಂದು ಸಾಧನ ಮಾತ್ರವಾಗಿದ್ದಾಳಷ್ಟೆ.

ರಾಮನಿಗೆ ವನವಾಸವಾಗಲು ಕೈಕೆಯೇ ಕಾರಣಳೆಂದು ಹಲವು ಹರಿದಾಸರು ನಿರೂಪಿಸಿದ್ದು, ಆದರೆ ಕೈಕೆ ಈ ರೀತಿ ಮಾಡಲು ಪ್ರೋತ್ಸಾಹಿಸಿದವಳು. ಮಂಥರೆಯಾಗಿದ್ದು ಇವಳ ಬಗ್ಗೆ ಒಂದೆರಡು ಹರಿದಾಸರು ಬಿಟ್ಟು ಯಾರು ಪ್ರಸ್ತಾಪ ಮಾಡದಿರುವುದನ್ನು ಕಾಣಬಹುದು.

ಅಯ್ಯಯ್ಯ ಕೈಕೆ ಮುನಿದರೆ ಏನವ್ವ
ದೀ ಪೌಕಸರನಾಳುವ ನಿನ್ನದ್ವೈತತನವು

ಅಚಿಂತ್ಯಶಕ್ತಿ ಹೋಹುದೆ ಪ್ರಭುವೆ

ಅಯ್ಯ ಮಂಥರೆ ಜರಿದರೆ ಪಂತಿದೇರನಾಳುವ

ನಿನ್ನ ಲೋಕತಿಂತಿಣಿಯ ಗೆಲುವ ಶೀಲಬಹುದೆ (ಕೀ೨೬, ಸಂ.೮)

ಪುರಂದರದಾಸರ ಮೇಲಿನ ಈ ಸುಳಾದಿಯಲ್ಲಿ ರಾಮಾಯಣವನ್ನು ಬಹುವಿಸ್ತಾರವಾಗಿ. ಜಾನಪದ ಶೈಲಿಯ್ನು ಕಥನಕವನದಂತೆ ಇದೆ. ಇಲ್ಲಿ ಕೈಕೆಯ ಕೋಪ ಮುನಿಸನ್ನು, ಮಂಥರೆಯ ಕೌಟಿಲ್ಯ ಹಾಗೂ ನೀಚಬುದ್ಧಿ, ದುಷ್ಟಬುದ್ಧಿಯನು ಹಳಿಯುವಿಕೆ ಇದೆ.

ಕವಿ ಪರಮದೇವರು ಶ್ರೀಹರಿಯ ಲೀಲೆ, ಮಹಿಮೆಗಳನ್ನು ಹೊಗಳುತ್ತಾ

ನಭಕೆ ಬಿಟ್ಟೆ ಶ್ರೀಕೃಷ್ಣ

ನರನಾಟಕವ ನಟಿಸಿ

ಪುರದೊಳು ಮಂಥರೆಯನು ಬೆಳೆಸಿದೆ ।೨। (ಕೀ ೩೨, ಸಂ.೩೩)

ಎಂದರೆ ರಾಮಾವತಾರದ ಉದ್ದೇಶ ಪೂರ್ಣಗೊಳಿಸಲು ಮತ್ತು ಹರಿಯು ತನ್ನ ನರನಾಟಕವನ್ನು ಆಡಲು ಸಹಾಯವಾಗುವಂತೆ ತನ್ನ ಮನೆಯೊಳಗೆ ಮಂಥರೆಯನ್ನು ಸಾಕಿದೆ ಎಂದು ಹರಿಯ ಮಹಿಮೆ ಕೊಂಡಾಡಿದ್ದಾರೆ. 'ಪ್ರಾಣ ಹೋದರೂ ಹೋಗಲಿ ಆದರೆ ವಚನ ಭ್ರಷ್ಟವಾಗದೆ ಇರಲಿ' ಎಂಬ ಹಿಂದಿಯ ನುಡಿಗಟ್ಟು ರಾಮನ ಪಿತೃವಾಕ್ಯ ಪರಿಪಾಲನೆಗೆ ಕುರಿತದ್ದೇ ಆಗಿದೆ. ರಾಮ ತನ್ನ ಈ ತ್ಯಾಗ ಕಾರ್ಯದಿಂದ ರಘುಕುಲದ ಹೆಸರನ್ನು ಅಜರಾಮರಗೊಳಿಸಿದನು.

ಪಾದುಕಾಪಟ್ಟಾಭಿಷೇಕ:–

ರಾಜಗೃಹಪುರಕ್ಕೆ ತನ್ನ ಸೋದರಮಾವನ ಮನೆಗೆ ಹೋಗಿದ್ದ ಭರತ, ಶತ್ರುಘ್ನರಿಬ್ಬರೂ ಅಯೋಧ್ಯೆಗೆ ಹಿಂತಿರುಗಿದಾಗ ರಾಮ, ಲಕ್ಷ್ಮಣ, ಸೀತೆ ತನ್ನ ತಾಯಿಯ ಮಾತಿನಿಂದ ಕಾಡಿಗೆ ಹೋಗಿರುವುದಾಗಿಯೂ, ಈ ದುಃಖ ತಡೆಯಲಾರದೆ ತಂದೆ ದಶರಥ ಸಾವನ್ನಪ್ಪಿರುವುದನ್ನು ತಿಳಿದು ತಾಯಿ ಕೈಕೆಯ ಮೇಲೆ ಕೋಪಗೊಂಡು ಹಿರಿಯರ ಮಾತಿನಂತೆ ತಂದೆಯ ಸಂಸ್ಕಾರ ಮಾಡಿದ ನಂತರ ತಾನು ರಾಜ್ಯವನ್ನು ಸ್ವೀಕರಿಸದೆ ಅಣ್ಣನನ್ನು ಕರೆತರಲು ಅರಣ್ಯಕ್ಕೆ ಹೋಗಿ ದಶರಥನ ಸಾವಿನ ವಿಷಯ ತಿಳಿಸಿ ರಾಮನಿಂದ ದಶರಥನಿಗೆ ಪಿಂಡೋದಕಗಳನಿತ್ತಿಸಿದ, ನಂತರ ಭರತ ರಾಮನಿಗೆ ರಾಜ್ಯವನ್ನು ಸ್ವೀಕರಿಸುವಂತೆ ಬೇಡಿದಾಗ ರಾಮ ತಂದೆಯನ್ನು ಸತ್ಯವಂತನನ್ನಾಗಿ ಮಾಡಲು ಅರಣ್ಯವಾಸ ಮಾಡಲೇಬೇಕು. ಆದ್ದರಿಂದ ತಾನು ರಾಜ್ಯ ಸ್ವೀಕರಿಸಲಾರೆ ಎಂದಾಗ ಭರತ ತಾನು ರಾಮ ಬರುವವರೆಗೆ ನಂದಿಗ್ರಾಮದಲ್ಲಿ ವಲ್ಕಲವನ್ನುಂಟು ಇರುವುದಾಗಿ ಸತ್ಯಾಗ್ರಹ ಮಾಡಿ ರಾಜ್ಯಕ್ಕೆ ರಾಮನ ರಾಜತ್ವದ ಪ್ರತಿನಿಧಿಗಳಾಗಿ ನಿನ್ನ ಪಾದುಕೆಗಳನ್ನು ದಯಪಾಲಿಸಲು ಅವುಗಳನ್ನೇ ರಾಜತ್ವದ ಪ್ರತಿನಿಧಿಗಳಾಗಿ ನಿನ್ನ ಪಾದುಕೆಗಳನ್ನು

ದಯಪಾಲಿಸಲು ಅವುಗಳನ್ನೇ ರಾಜಾಭಿಷೇಕ ಮಾಡಿ ನಿನ್ನ ಪ್ರತಿನಿಧಿಯಾಗಿ ವಿರಕ್ತನಾಗಿದ್ದು ರಾಜ್ಯಭಾರ ನಡೆಸುತ್ತೇನೆಂದು ರಾಮನಿಂದ ಪಾದುಕೆ ಪಡೆದು ಅವನ್ನು ಹೊತ್ತು ಅಯೋಧ್ಯೆಗೆ ತೆರಳುತ್ತಾನೆ.

ವಾಲ್ಮೀಕಿ ರಾಮಯಣದಂತೇ ಈ ಪ್ರಸಂಗವನ್ನು ಶ್ರೀಮಧ್ವಾಚಾರ್ಯ ತಮ್ಮ ತಾತ್ಪರ್ಯ ನಿರ್ಣಯದಲ್ಲಿ ನಿರೂಪಿಸಿದ್ದಾರೆ. ಹರಿದಾಸರು ನವವಿಧ ಭಕ್ತಿಗಳಲ್ಲೊಂದಾದ 'ಪಾದಸೇವನ ಭಕ್ತಿ' ಬಂದಾಗಲೆಲ್ಲ ಭರತನ ವಿಚಾರ ಬಂದೇ ಬರುವುದನ್ನು ಕಾಣಬಹುದು. **ಭರತನಿಗೆ ಒಲಿದು ಪಾದುಕೆಯಿತ್ತ ಪಾದ ।೬। (ಕೀ ೩, ಸಂ.೧೮/೪)** ಎಂದು ಯದುಗಿರಿಯಮ್ಮ ರಾಮನ ಪಾದದ ಮಹಿಮೆಯನ್ನಾಡಿದ್ದಾರೆ. ಹಾಗೆಯೇ ತಮ್ಮ ಶ್ರೀಮದ್ರಾಮಾಯಣ ಎಂಬ ದೀರ್ಘ ಕೀರ್ತನೆಯಲ್ಲಿ ದಶರಥನ ಸಾವು ರಾಮನಿಗೆ ಭರತ ರಾಜ್ಯ ಒಪ್ಪಿಸಲು ಬಂದಾಗ ಆತನಿಗೆ ಸಮಜಾಯಿಷಿ ತನ್ನ ಪಾದುಕೆಯನ್ನಿತ್ತು ಅಯೋಧ್ಯೆಗೆ ಕಳುಹಿಸಿದ ವಿಷಯವನ್ನು ಈ ರೀತಿ ಹಾಡಿದ್ದಾರೆ

ಅರಸು ಸ್ವರ್ಗವನೈದೆ ಭರತ ಕರಸಿ ಕರ್ಮವನೆಲ್ಲ ಕಳೆದು
(ವರ)ಮಾತೆಗೆ ಭಾಷೆ ಕೊಟ್ಟು ತಮ್ಮನಾಲಿಂಗಿಸಿದ ರಾಮಗೆ ।೧೬।

ಭರತನಂಕದೊಳಿಟ್ಟು ಪ್ರೇಮದಿ ಮನ್ನಿಸಿ ಮೃದುವಾಕ್ಯದಿಂದ
ಗುರುಗಳನುಮತದಿಂದ ಪಾದುಕೆಯಿತ್ತು ಕಳುಹಿಸಿದ ರಾಮಚಂದ್ರಗೆ ।೧೭। (ಕೀ ೫೨, ಸಂ.೧೮/೪)

ಶ್ರೀಪ್ರಸನ್ನ ಶ್ರೀನಿವಾಸದಾಸರು ತಮ್ಮ 'ಕೂಡಲ ಮಾಣಿಕ್ಯ ಕ್ಷೇತ್ರಸ್ಥ ಭರತ ಪ್ರದ್ಯುಮ್ನ ಎಂಬ ಕೀರ್ತನೆಯಲ್ಲಿ ಭರತನ ಬಗ್ಗೆ ಸಂಕ್ಷಿಪ್ತವಾಗಿ ಹಾಡಿದ್ದಾರೆ.

ಕೈಕೆಯಕೆ ನೀ ಪೋಗೆ ಕೈಕೇಯಿ ವರದಿಂದ
ರಾಕೇಂದುನಿಭಮುಖನು ನಿಷ್ಕಳ ಶ್ರೀರಾಮನ
ನೂಕಲು ವನಕೆ ನೀ ಬಂದರಿತು ಧಿಕ್ಕರಿಸಿ
ಏಕಾತ್ಮ ರಾಮನಲಿ ಪೋಗಿ ಬೇಡಿದೆಯಾ ।೩।

ಸ್ವೀಕರಿಸಿ ರಾಜ್ಯವಾಳೆಂದು ನೀ ಬೇಡಲು
ಅಖಿಲಾಂಡಕೋಟಿ ಬ್ರಹ್ಮಾಂಡಪತಿ ರಾಮ
ನಾಕಿ ಭೂಸುರರೊಡೆಯ ಹದಿನಾಲ್ಕು ವರ್ಷಗಳು
ಆಗೆ ತಾ ಬರುವೆನು ಎಂದು ಪೇಳಿದನು ।೪।

ದೇವ ಶ್ರೀರಾಮನ ಸುಖಜ್ಞಾನಮಯಪಾದ
ಸೇವಿಸಿ ಪ್ರೇಮಪ್ರವಾಹದಲಿ ನೀನು
ಬುವಿಯನು ಪವಿತ್ರ ಮಾಡುವ ಪಾದಪೀಠವನು
ನವವಿಧ ಭಕ್ತಿಯಲಿ ತಂದು ಪೂಜಿಸಿದೆ ।೫। (ಕೀ ೬೦, ಸಂ.೨೨)

ಇಲ್ಲಿ ಭ್ರಾತೃಪ್ರೇಮ, ಸತ್ಯದ ತುಡಿತ, ನ್ಯಾಯನಿಷ್ಠೆ, ತ್ಯಾಗಶೀಲತೆ, ನಿಃಸ್ವಾರ್ಥನೆ ಭರತನ ರೂಪವೆತ್ತಂತಿದೆ. ರಾಮ, ಭರತರು ತ್ಯಾಗದ ಸ್ಪರ್ಧೆ ನಡೆಸಿದಂತಿದ್ದು ಸೋದರ ಪ್ರೇಮದ ಜತೆಗೆ ದೈವತ್ವದ ಭಾವವೂ ಸೇರಿಕೊಂಡು ದಿವ್ಯವಾದ ಭಕ್ತಿಭಾಗವೆನಿಸಿದೆ.

ವರವಣಿ ರಾಮರಾಯರು ಚಿತ್ರಕೂಟಕ್ಕೆ ಬಂದ ಭರತನು ರಾಮನಿಗೆ ರಾಜ್ಯವಪ್ಪಿಸಲು ಇದನ್ನು ನಿರಾಕರಿಸಿದ ರಾಮ ಹದಿನಾಲ್ಕು ವರುಷದ ತರುವಾಗ ರಾಜ್ಯ ಸ್ವೀಕರಿಸುವುದಾಗಿ ಹೇಳಿದಾಗ ಭರತ ಇದನ್ನೊಪ್ಪಿ ರಾಜನ ರಾಜತ್ವದ ಪ್ರತಿನಿಧಿಯಾಗಿ ಪಾದುಕೆಗಳನ್ನು ಕೇಳುವ ಸಂದರ್ಭದ ವಿವರಣೆ ಕೆಳಗಿನಂತಿದೆ.

ಪಾದುಕೆಗಳ ದಯಪಾಲಿಸು ಪರಮ
ಪಾವನ ಮಹಿಮೆ ಸುದೇವ ಲಲಾಮ ।ಪ।
ನೀ ದಯದಿಂದ ತವಪಾದ ಪಯೋಜಗ
ಳಾದರದಲಿ ಕೊಡು ಹೇ ದಯಧಾಮ ।ಅ.ಪ.।
ಅಜನವ್ವಯನ ಪ್ರಾಕೃತ ಮಹಿಮನು
ಅಜನ ಪಿತನು ತನ್ನಿಚ್ಛೆಯೊಳು
ಅಜಸುತ ದಶರಥ ಸುತನೆಂದೆನಿಸಿದ
ತ್ರಿಜಗ ನೋಡೆ ಆಶ್ಚರ್ಯದೊಳು ।೧।
ತುಂಗಮಹಿಮ ತವ ಮಂಗಳಕರ ಚರ
ಣಂಗಳು ಈ ತ್ರಿಜಗಂಗಳ ಪಾಲಿಪುವು
ಅಂಗಜ ಕೋಟಿ ಶುಭಾಂಗನೆ ತವಪದ
ಭೃಂಗನೆನಿಸಿ ಕೃಪಾಪಾಂಗದಿ ಈಕ್ಷಿಸೊ
ಮಂಗಳಕರ ರಘುಪುಂಗವ ಕರಿಗಿರಿ
ರಂಗ ನೃಸಿಂಹ ಸಿತಾಂಗನೆಯರಸ ।೨। (ಕೀ ೩೬೨, ಸಂ.೩೨)

ಹೀಗೆ ಹರಿದಾಸರು ಭರತನ ಸೋದರತ್ವದ ಆರ್ದ್ರ ಭಾವನೆಯನ್ನು ತಮ್ಮ ಕೀರ್ತನೆಯಲ್ಲಿ ವ್ಯಕ್ತಪಡಿಸಿದ್ದಾರೆ. ಸಂಕ್ಷಿಪ್ತ ರಾಮಾಯಣ ಬಂದಾಗಲೆಲ್ಲ ಭರತನ ಪಾದುಕಾಪಟ್ಟಾಭಿಷೇಕ ವಿಚಾರ ಬರುವುದನ್ನು ಕಾಣಬಹುದು.

ಹರಿದಾಸರು ತಮ್ಮ ಕೀರ್ತನೆಗಳ ಕಥಾನಿರ್ವಹಣೆಯಲ್ಲಿ ವಾಲ್ಮೀಕಿ ರಾಮಾಯಣವನ್ನೇ ಅನುಸರಿಸಿದ್ದರೂ ವಾಲ್ಮೀಕಿಯ ವಿಸ್ತಾರವಿಲ್ಲ. ವಿಶ್ವಾಮಿತ್ರ ಪೂರ್ವಕತೆ, ಕುಶನಾಭನ ಕತೆ, ಕಾರ್ತಿಕೇಸ್ವಾಮಿ ಅವತಾರ ವೃತ್ತಾಂತ, ಸಗರ ಪುತ್ರನ ಕತೆ, ಗಂಗಾವತರಣ, ಸಮುದ್ರಮಂಥನ ಕತೆ ಮೊದಲಾದ ವಿಷಯಗಳು ಬಿಟ್ಟು ಹೋಗಿದ್ದು ಬಹುಶಃ ಇದು ರಾಮನಿಗೆ ಸಂಬಂಧಿಸಿಲ್ಲ ಎಂದು ಹರಿದಾಸರು

ಬಿಟ್ಟಿರಬಹುದು. ಹೀಗೆ ಹರಿದಾಸರು ತಮ್ಮ ಕೀರ್ತನೆಗಳಲ್ಲಿ ರಾಮಾಯಣದ ಬಾಲಕಾಂಡ ಅಯೋಧ್ಯಾ ಕಾಂಡವನ್ನು ಬಹಳ ಸಂಕ್ಷೇಪವಾಗಿಯೂ, ದೀರ್ಘವಾಗಿಯೂ ಹಾಡಿ ವಿಸ್ತರಿಸಿರುವುದನ್ನು ನೋಡಬಹುದು.

ಒಟ್ಟಿನಲ್ಲಿ ದಾಸರು ರಾಮಾಯಣದ ಪ್ರಮುಖ ಪ್ರಸಂಗಗಳನ್ನು ದಾಸರು ತಮ್ಮ ಕೃತಿಗಳಲ್ಲಿ ವಿಶಿಷ್ಟವಾದ ಪಾತ್ರದಿಂದ ರಾಮಜನನ, ಅಹಲ್ಯೋದ್ಧಾರ, ಸೀತಾಕಲ್ಯಾಣ ಪ್ರಸಂಗಗಳು ಸುಂದರವಾಗಿ ಚಿತ್ರಿಸಿದ್ದಾರೆ. ರಾಮಾಯಣ ವಸ್ತುವಿನ ಸ್ವಂತಿಕೆಯ ತಂತ್ರ ಭಾವ ಮತ್ತು ಭಾಷೆಗಳ ಮೆರುಗಿನಿಂದ ದಾಸಸಾಹಿತ್ಯ ಭಂಡಾರಕ್ಕೆ ಅಮೂಲ್ಯವಾದ ಕಾಣಿಕೆ ಕೊಟ್ಟು ಶ್ರೀಮಂತಗೊಳಿಸಿದ್ದಾರೆ.

ಅಡಿ ಟಿಪ್ಪಣಿ

೧. ಶ್ರೀಮದ್ವಾಲ್ಮೀಕಿ ರಾಮಾಯಣ (ಸಂಪು ೧–೮): (ಅನು) ರಂಗನಾಥಶರ್ಮ ಎನ್. ಬಾಲಕಾಂಡ ಸರ್ಗ ೪೮, ಶ್ಲೋಕ ೩೦

೨. ಮಹಾಭಾರತ ತಾತ್ಪರ್ಯ ನಿರ್ಣಯ (ಅಧ್ಯಾಯ ೧–೯)ಅನು:ಪ್ರೊ. ವ್ಯಾಸನಕೆರೆ ಪ್ರಭಂಜನಾಚಾರ್ಯ ಅಧ್ಯಾಯ ೪ ಶ್ಲೋಕ ೧೦, ಪುಟ–೩೪೦

೩. ಇತಿಹಾಸ ಕಥನ : ಬಿ. ರಾಜಶೇಖರಪ್ಪ, ಪು. ೧೮೩

೪. ಶ್ರೀಮದ್ವಾಲ್ಮೀಕಿ ರಾಮಾಯಣ (ಸಂಪು ೧–೮) (ಅನು)ರಂಗನಾಥ ಶರ್ಮ ಎನ್. (ಕಿಷ್ಕಿಂದಾ ಕಾಂಡ. ಸರ್ಗ ೬, ಶ್ಲೋಕ ೨)

೫. ಮಹಾಭಾರತ ತಾತ್ಪರ್ಯ ನಿರ್ಣಯ(ಅಧ್ಯಾಯ ೧–೯): (ಅನು)ಪ್ರೊ.ವ್ಯಾಸನಕೆರೆ ಪ್ರಭಂಜನಾಚಾರ್ಯ (ಅಧ್ಯಾಯ ೫ ಶ್ಲೋಕ ೩), ಪುಟ–೩೭೮

ಅಧ್ಯಾಯ – ೪

ಅರಣ್ಯಕಾಂಡದ ಮತ್ತು ಕಿಷ್ಕಿಂದಾ ಕಾಂಡದ ಪ್ರಸಂಗಗಳು

ರಾಮನ ವನವಾಸ ಚಿತ್ರಣ:-

ತಂದೆಯ ಮಾತಿನಂತೆ ಹದಿನಾಲ್ಕು ವರುಷ ವನವಾಸಕ್ಕೆ ಹೊರಟ ರಾಮ, ಸೀತಾಲಕ್ಷ್ಮಣನೊಡಗೂಡಿ ಚಿತ್ರಕೂಟ, ಪಂಚವಟಿ ಜನಸ್ಥಾನ ಎಂಬ ಅರಣ್ಯ ಪ್ರದೇಶದೊಳಗಿಂದ ದಂಡಕಾರಣ್ಯದಲ್ಲಿ ವಾಸಿಸುತ್ತಿದ್ದಾಗ ಆತನು ಅರಣ್ಯವಾಸದಲ್ಲಿ ಕಂಡುಂಡ ಕಷ್ಟದುಃಖಗಳಿಗೆ ಮರುಕಗೊಂಡ ಹರಿದಾಸರು ಈ ಕೆಳಕಂಡಂತೆ ತಮ್ಮ ಕೀರ್ತನೆಗಳಲ್ಲಿ ರಾಮನ ವನವಾಸ ಚಿತ್ರಣ ನೀಡಿದ್ದಾರೆ.

ಹನುಮಂತನು ಅಶೋಕವನದಲ್ಲಿ ಸೀತೆಯನ್ನು ಕಂಡಾಗ ಸೀತೆಯು ಲಕ್ಷ್ಮಣನ ಕುಶಲದ ಬಗ್ಗೆ ವಿಚಾರಿಸಿದಾಗ ಆತ ಸೀತೆಯ ಮನದ ಅಂತರಾಳವನ್ನರಿತು ರಾಮನ ಕುಶಲವಾರ್ತೆಯನ್ನೇ ಅರಹುತ್ತಾನೆ. ರಾಮನ ವನವಾಸ ಚಿತ್ರಣ ನೀಡುತ್ತಾನೆ. ಇಲ್ಲಿ ಕನಕದಾಸರು ಹನುಮನನ್ನು ನೆಪ ಮಾಡಿಕೊಂಡು ಶ್ರೀರಾಮ ಅರಣ್ಯದಲ್ಲಿ ಹೇಗೆ ಬಾಳಿದರೆನ್ನುವುದನ್ನು ಹೀಗೆ ಚಿತ್ರಿಸುತ್ತಾರೆ.

ಎನ್ನ ಕಂದ ಹಳ್ಳಿಯ ಹನುಮ
ಚೆನ್ನಾಗೈದಾರ ಲಕ್ಷ್ಮಣ ದೇವರು ।ಪ।

ತುಪ್ಪ ಪಂಚಾಮೃತವಂದು ಅಡವಿಗಡ್ಡೆಗಳಿಂದು
ಕರ್ಪೂರ ವೀಳ್ಯವಂದು ಕುರುಕು ಇಂದು
ಸುಪ್ಪತ್ತಿಗೆ ಮಂಚೆವಂದು ಹುಲ್ಲು ಹಾಸಿಗೆಯಿಂದು
ಶ್ರೀಪತಿ ರಾಘವ ಕ್ಷೇಮದಲೈದಾರೆ ।೧।

ನವವಸ್ತ್ರಗಳು ಅಂದು ನಾರಸೀರೆಗಳಿಂದು
ಹೂವಿನ ಗಂಟು ಅಂದು ಜಡೆಗಳಿಂದು
ಜವ್ವಾಜಿ ಕತ್ತುರಿಯಂದು ಭಸಿತ ಧೂಳಿಂದು
ಶ್ರೀವರ ರಾಘವ ಕ್ಷೇಮದಲೈದಾರೆ ।೨।

ಕನಕ ರಥಗಳೆಂದು ಕಾಲುನಡಿಗೆಯಿಂದು
ಘನ ಛತ್ರ ಚಾಮರವಂದು ಬಿಸಿಲು ಇಂದು
ನಕಾದಿಗಳೋಲೈಪ ಆದಿಕೇಶವ ನಮ್ಮ
ಹನುಮೇಶ ರಾಘವ ಕ್ಷೇಮದಲೈದಾರೆ -೩- (ಕೀ ೪೧ ಸಂ. ೫/೧)

ಹೀಗೆ ಕನಕದಾಸರು ರಾಮನ ವನವಾಸ ಚಿತ್ರಣ ನೀಡಿದ್ದರೆ, ವ್ಯಾಸವಿಠಲರು ರಾಮನು ಅರಮನೆಯಲ್ಲಿ ಭೋಗಿಸಿದ ಜೀವನಕ್ಕೂ ಕಾಡಿನಲ್ಲಿ ಅನುಭವಿಸಿದ ಕಷ್ಟ ಪರಿಪಾಟಲುಗಳು ಕನಕದಾಸರ ಮೇಲಿನ ಕೀರ್ತನೆಯಂತಿದ್ದರೂ ಇದೊಂದು ನಿಂದಾಸ್ತುತಿಯಾಗಿದೆ.

ವನವನಂಗಳ ತಿರುಗಿ! ಹಣ್ಣು, ಹಂಪಲ ಮೆದ್ದು
ದಣುವಾದ ಪಾಡು ನಿನಗರಿಕಿಲ್ಲವೇ ॥
ದಿನದಿನದಿ ಚಿತ್ರವಿಚಿತ್ರ ಭೋಜ್ಯಗಳನ್ನು
ಕ್ಷಣ ಬಿಡದೆ ಕೈಕೊಂಬ । ಘನ ಗರ್ವದಿಂದೆನ್ನ ।೧।
ನಾರವಸ್ತ್ರವನ್ನುಟ್ಟು । ತಲೆ ಜಡೆ ಗಟ್ಟಿದುದು
ತೋರದೇನೊ ನಿನ್ನ ಮನಸಿಗಿಂದೂ ॥
ಮೇರೆಯಿಲ್ಲದ ಪದಕ । ವಜ್ರಮಣಿ ಮಕುಟಗಳ
ಭಾರವನು ನೀ ವಹಿಸಿ । ಬಹು ಬಿಂಕವನೆ ತಾಳೀ ।೨।
ಅರ್ಭಕನ ತೆರನಂತೆ । ದರ್ಭೆ ಹಾಸಿಕೆ ಮೇಲೆ
ಗುಬ್ಬಿಯಂದದಿ ಮಲಗಿದುದು ಮರೆತೆಯಾ ॥
ಲಭ್ಯವಾದಾ ಹೇಮ ತೊಟ್ಟಿಲೊಳು ನೀ ಮಲಗಿ
ಉಬ್ಬಿ ಓಲಗಗೊಂಬ ಉತ್ಸಾಹದಿಂದೆನ್ನ ।೩। (ಕೀ ೮೯ ಸಂ ೧೩)

ಹೀಗೆ ಕೆಲವು ದಾಸರು ರಾಮನ ವನವಾಸ ಚಿತ್ರಣಕ್ಕೆ ಒಂದೊಂದು ಕೀರ್ತನೆಯನ್ನು ಮೀಸಲಾಗಿಟ್ಟರೆ, ಕೆಲವು ಹರಿದಾಸರು ತಮ್ಮ ಸಂಕ್ಷೇಪ ರಾಮಾಯಣದಲ್ಲಿ ಕೆಲವು ಪಾದಗಳಲ್ಲಿ ವನವಾಸ ಚಿತ್ರಣ ಈ ರೀತಿ ನೀಡಿದ್ದಾರೆ.

ನಂಜನಗೂಡು ತಿರುಮಲಾಂಬ ಈ ರೀತಿ ವರ್ಣಿಸಿದ್ದಾರೆ :

ಧುರಧೀರನಿವನೆಂದು ನೆರೆವರೆಯಲೈತಂದು
ಮರುಳಾದೆ ನಾನಿಂದು ಮುಂದೆ ನಿಂದು
ನಾರ್ವಟ್ಟೆಯುಟ್ಟಿರುವ ಅರಣ್ಯದೊಳಗಲೆವ
ನಾರುಬೇರನೆ ಮೆಲುವ ಅರರೆ ಚೆಲುವ
ಜನಪದನಂದನೆನಿಸಿ ಮುನಿಜವರ ತಾವೆರಸಿ
ವನವನದಿ ಸಂಚಸುತಿರುವ ಸಹಿಸಿ (ಕೀ ೪೨ ಸಂ.೧೮/೪)

ನಾರುಬಟ್ಟೆಯನ್ನುಟ್ಟು ಗೆಡ್ಡೆಗೆಣಸನ್ನು ತಿಂದ ರಾಮನ ಬಗ್ಗೆ ಹೇಳಿದ್ದಾರೆ. ಹೀಗೆ ಹರಿದಾಸರು ಹರಿಯ ನಿಂಧಾ, ವ್ಯಾಜ್ಯಸ್ತುತಿ ಮಾಡಬೇಕಾದ ಸಂದರ್ಭದಲ್ಲಿ, ದಶಾವತಾರ ವರ್ಣನೆಯಲ್ಲಿ, ಸಂಕ್ಷೇಪ ರಾಮಾಯಣದಲ್ಲಿ ರಾಮನು ವನವಾಸ ಕಾಲದಲ್ಲಿ ಅನುಭವಿಸಿದ ಕಷ್ಟಕೋಟಲೆಗಳನ್ನು ಬಹಳ ಸಂಕ್ಷೇಪವಾಗಿ ವಿವರಿಸಿದ್ದಾರೆ. ಆದರೆ ಈ ಪ್ರಕಾರದ ವನವಾಸ ಚಿತ್ರಣ ವಾಲ್ಮೀಕಿ ರಾಮಾಯಣದಲ್ಲಿ ಇಲ್ಲದಿರುವುದನ್ನು ಗಮನಿಸಬಹುದು.

ಶೂರ್ಪನಖಾ ಪ್ರಕರಣ:-

ಅಗಸ್ತ್ಯ ಋಷಿಯಿಂದ ದಿವ್ಯಾಯುಧಗಳನ್ನು ಪಡೆದು ಅವರ ಮಾರ್ಗದರ್ಶನದಂತೆ ಪಂಚವಟಿಯಲ್ಲಿ ಆಶ್ರಮ ಕಟ್ಟಿ ವಾಸಿಸತೊಡಗಿದ್ದಾಗ ಆ ದಂಡಕಾರಣ್ಯದಲ್ಲಿ ವಾಸವಾಗಿದ್ದ ಶೂರ್ಪನಖಿಯು ರಾಮನ ಸೌಂದರ್ಯಕ್ಕೆ ಮರುಳಾಗಿ ವಿವಾಹಕ್ಕೆ ಪ್ರಸ್ತಾಪವಿಟ್ಟಾಗ ರಾಮ ತಾನು ವಿವಾಹಿತ. ತನ್ನ ಬಳಿ ಭಾರ್ಯೆ ಇದ್ದಾಳೆ, ನನ್ನ ತಮ್ಮ ಲಕ್ಷ್ಮಣ ಆತನು ತನ್ನ ಹೆಂಡತಿಯೊಡನಿಲ್ಲ. ಹೆಂಡತಿಯ ಸುಖ ಕಂಡವನಲ್ಲ, ಕಿರಿಯ ವಯಸ್ಸಿನವನೂ, ಸುಂದರನೂ ಆಗಿರುವ ಲಕ್ಷ್ಮಣನೇ ನಿನಗೆ ಸರಿಸಮಾನ ಎಂದು ಹೇಳಿದಾಗ, ಲಕ್ಷ್ಮಣನು ಕಾಮದಾಸೆಯಿಂದ ಬಂದ ಶೂರ್ಪನಖಿಯನ್ನು ತಿರಸ್ಕರಿಸುತ್ತಾನೆ. ಮತ್ತೆ ರಾಮನ ಬಳಿ ಬಂದು ರಾಮನನ್ನು ಮದುವೆಯಾಗಲು ಪೀಡಿಸಿ ರಾಮ ಅವಳನ್ನು ತಿರಸ್ಕರಿಸಿದಾಗ ತನ್ನ ಸವತಿರೂಪದಲ್ಲಿರುವ ಸೀತೆಯನ್ನು ತಿಂದುಬಿಡುತ್ತೇನೆ ಎಂದು ನುಗ್ಗಿದಾಗ ರಾಮ ಲಕ್ಷ್ಮಣನ ಕೈಯಿಂದ ಆಕೆಯ ಕಿವಿ, ಮೂಗನ್ನು ಕತ್ತರಿಸುತ್ತಾನೆ. ಈ ಒಂದು ಘಟನೆಯು ಖರ ದೂಷಣರ ಸಾವಿಗೆ, ಸೀತಾಪಹರಣಕ್ಕೆ, ಮುಂದಿನ ರಾಮಾಯಣಕ್ಕೆ ತಳಹದಿಯಾಗುತ್ತದೆ.

ಚಂಡಿ ಶೂರ್ಪನಖಿ ಕಿವಿ ಮೂಗಂ ಕೊಯಿಸಿಯು (ಕೀ ೩೪೩ ಸಂ ೩೪)

ಎಂದು ಲಕ್ಷ್ಮಣನಿಂದ ಹಠಮಾರಿ ಶೂರ್ಪನಖಿಯನ್ನು ಶಿಕ್ಷಿಸಿದೆ ಎಂದಿದ್ದಾರೆ. ಗುರುರಾಮ ವಿಠಲರು ತಮ್ಮ ಸಂಕ್ಷಿಪ್ತ ರಾಮಾಯಣದಲ್ಲೂ ಈ ಪ್ರಸಂಗವನ್ನು ಪ್ರಸ್ತಾಪಿಸುತ್ತಾರೆ.

ವಾಲ್ಮೀಕಿ ರಾಮಾಯಣದಲ್ಲಿ ರಾಮ, ಲಕ್ಷ್ಮಣನಿಂದ ಶೂರ್ಪನಖಿಯ ಕಿವಿ, ಮೂಗನ್ನು ಕತ್ತರಿಸಿದ ವಿಷಯವಿದೆ. ಆದರೆ ಕೆಲವು ಹರಿದಾಸರು ಮೊಲೆ, ಮೂಗು, ಕತ್ತರಿಸಿದ ಎಂಬ ವಿಷಯವನ್ನು ಈ ರೀತಿ ಪ್ರಸ್ತಾಪಿಸಿದ್ದಾರೆ. ತುಪಾಕಿ ವೆಂಕಟರಮಣಾಚರ್ಯರು ತಮ್ಮ ಸಂಸ್ಕೃತದ ಕೀರ್ತನೆಯೊಂದರಲ್ಲಿ

ಲಕ್ಷ್ಮಣ ಪೂರ್ವಜ ಋಕ್ಷವಿನುತ ಕಮ

ಲಾಕ್ಷ ಶೂರ್ಪನಖ ಶಿಕ್ಷಾ

ದಕ್ಷಿಣ ದುರಿತಾರಣ್ಯ ರಮಾಸ್ಪದವಕ್ಷಸ್ಥಳ ವಿಭವೈಕನಿಭೆ

ಅಕ್ಷ ವಿಘಾತಿ ಕಟಾಕ್ಷದಾಯಿ ಶುಭಲಕ್ಷಣ

ಜಯದ್ವಿದಶಾಕ್ಷಿ ವಿಘತನ ।೨। (ಕೀ ೮೩, ಸಂ೨೩)

ಎಂತಲೂ, ಹಾಗೆಯೇ ರಾಮದಾಸರು ಸಹ ಇದೇ ವಿಷಯವನ್ನು ಬಹಳ ಸ್ಪಷ್ಟವಾಗಿ ರಚಿಸಿದ್ದಾರೆ.

\- - - - - - - - -

ಮೊಲೆ ಮೂಗು ಕೊಯ್ದು ಹೊಲೆದೈತ್ಯಳೊದೆದ (೨) (ಕೀ ೩೬೫ ಸಂ ೩೦)

ಇಲ್ಲಿ ರಾಮ ಮಾಡಿಸದ ಕಾರ್ಯವನ್ನು ಮಾಡಿಸಿದ ಎಂದು ಹೇಳಿರಲು ಕಾರಣ ಸೀತಾಪಹರಣ ನಂತರ ಸೀತಾನ್ವೇಷಣೆಗೆ ಹೊರಟ ರಾಮ, ಲಕ್ಷ್ಮಣರು ಆಯೋನಿಜೆ ಎಂಬ ರಾಕ್ಷಸಿಯ ಕೈಗೆ ಸಿಕ್ಕಾಗಿ ದೈತ್ಯಗಳ ಮೊಲೆ ಮೂಗು ಕತ್ತರಿಸಿದ ವಿಚಾರ ವಾಲ್ಮೀಕಿ ರಾಮಾಯಣದಲ್ಲಿದ್ದು ಈ ಪ್ರಸಂಗವನ್ನೇ

ಹರಿದಾಸರು ಶೂರ್ಪನಖಿಗೆ ಹೋಲಿಸಿ ರಚಿಸಿರಬಹುದು. ಇದೇ ರೀತಿಯ ವಿಷಯವು ಯಕ್ಷಗಾನದಲ್ಲಿ ಕಂಡುಬರುತ್ತದೆ. "ಲಕ್ಷ್ಮಣನು ನಿನ್ನನ್ನು ವಿವಾಹವಾಗುವಂತೆ ಆದೇಶವನ್ನು ನಿನ್ನ ಬೆನ್ನಿನ ಮೇಲೆ ಬರೆಯುವೆನು ಎಂದು ಅವಳನ್ನು ನಂಬಿಸಿ ಅವಳ ಸ್ತನ ಮತ್ತು ಮೂಗನ್ನು ಕತ್ತರಿಸಬೇಕೆಂದು ಬರೆದು ಅವಳನ್ನು ನಂಬಿಸಿ ಆಕೆಯನ್ನು ವಂಚಿಸುತ್ತಾನೆ" ಬಹುಶಃ ಈ ಅಂಶವನ್ನೂ ಸಹ ಕೆಲವು ಹರಿದಾಸರು ತಮ್ಮ ಕೀರ್ತನೆಗೆ ಆಕರವನ್ನಾಗಿ ಬಳಸಿಕೊಂಡಿರಬಹುದು.

ಶ್ರೀರಾಮನನ್ನು ಮೋಹಿಸಿ ತನ್ನ ರಾಕ್ಷಸೀ ಪ್ರವೃತ್ತಿಯನ್ನು ತೋರಿಸಿದ್ದಕ್ಕಾಗಿ ಲಕ್ಷ್ಮಣನ ಕೈಯಿಂದ ಕಿವಿ, ಮೂಗು ಕತ್ತರಿಸಿಕೊಂಡು ಅಂಗವಿಕಲಳಾದ ಶೂರ್ಪಣಖಿಯನ್ನು ಖರದೂಷಣರ ವಧೆಗೆ ಸೀತಾಪಹರಣಕ್ಕೆ ರಾಮಾಯಣ ಯುದ್ಧಕ್ಕೆ ಕಾರಣಳಾದವಳು ಎಂದು ಗುರುತಿಸಲಾಗುತ್ತದೆ. ಆದರೆ ಶೂರ್ಪಣಖಿಯು ರಾವಣನಿಗೆ ಸೀತಾಪಹರಣಕ್ಕೆ ಪ್ರಚೋದಿಸಿದ್ದು ಬಹುಶಃ ಸ್ತ್ರೀಸಹಜವಾದ ಅಸೂಯೆ ಭಾವನೆಯಿಂದ ತನಗೆ ಲಭಿಸದ ಸುಖ ಇನ್ನೊಬ್ಬಳಿಗೂ ದೊರೆಯದಿರಲಿ ಎಂತಲೂ ತಾನನುಭವಿಸುತ್ತಿರುವ ವಿರಹ, ಯಾತನೆ, ದುಃಖ, ಪೀಡನೆ ಸ್ವತಃ ಸೀತಾರಾಮರೂ ಅನುಭವಿಸಲೆಂದು.

ರಾವಣನನ್ನು ಸೀತಾಪಹರಣಕ್ಕೆ ಪ್ರೇರೇಪಿಸಿದ ನಂತರ ರಾಮಾಯಣದಲ್ಲಿ ಶೂರ್ಪಣಖಿಯ ಪಾತ್ರ ಎಲ್ಲಿಯೂ ಕಾಣಸಿಗುವುದಿಲ್ಲ ಮತ್ತವಳ ಬಗ್ಗೆ ಯಾವುದೇ ಮಾಹಿತಿ ದೊರೆಯುವುದೂ ಇಲ್ಲ. ಆದರೆ ಸರಗೂರು ವೆಂಕಟವರದಾರ್ಯ ದಾಸರು ತಮ್ಮದೊಂದು ಕೀರ್ತನೆಯಲ್ಲಿ ಶೂರ್ಪಣಖಿಯ ವೃತ್ತಾಂತವನ್ನು ಹೀಗೆ ಹಾಡಿದ್ದಾರೆ.

ರಾವಣನನುಜೆಯು ರಾಘವ ದೇವನ ಲಾವಣ್ಯಕೆ
ಮೋಹಿಸಿ ಮನದಿ
ಭಾವಜನಸ್ತ್ರದ ಬಾಧೆಯಿಂದ ಪತಿಭಾವದಿ ನೋಡುತ ಭರದಿ ।೨।

ಕಾಮಿಸಿ ಕಾಡಲು ಕಾಕುತ್ಸ್ಥನು ಬಲರಾಮ ಸಹಜನವತಾರದಲಿ
ಕಾಮಿತವದದೆನೆ ಕಾಮಿನಿ ರಾಧಾ ನಾಮದಿ ಜನಿಸಿರೆ ಗೋಕುಲದಿ
ಮುಕುಂದನ ಧ್ಯಾನಿಸುತಡಿಗಡಿಗೆ -೩- (ಕೀ ೭೩ ಸಂ.೧೫)

ಶ್ರೀರಾಮನನ್ನು ಮೋಹಿಸಿದ್ದ ಶೂರ್ಪಣಖಿಯು ರಾಮ ತನ್ನವನಾಗಬೇಕು. ತಾನು ಅವನೊಡನೆ ಸುಖಿಸಿ ರಮಿಸಬೇಕೆಂಬ ಆಸೆ ಕೈಗೂಡಲೆಂದು ಶ್ರೀಹರಿಯ ಕುರಿತು ತಪಸ್ಸು ಮಾಡಿದರ ಫಲವಾಗಿ ದ್ವಾಪರಯುಗದಲ್ಲಿ ಶ್ರೀಹರಿಯು ಶ್ರೀಕೃಷ್ಣನ ಅವತಾರವೆತ್ತಾಗ ಶೂರ್ಪಣಖಿಯು ಗೋಪಾಲಕೃಷ್ಣನ ಪ್ರೇಯಸಿ ರಾಧೆಯಾಗಿ ಜನಿಸಿ ತನ್ನ ಆಸೆ, ಆಕಾಂಕ್ಷೆಗಳನ್ನು ತೀರಿಸಿಕೊಂಡಳು ಎಂಬ ವೃತ್ತಾಂತ ಕೀರ್ತನೆಯಲ್ಲಿದೆ.

ಈ ಕೀರ್ತನೆಯಲ್ಲಿ ಚಿತ್ರಿತವಾಗಿರುವ ಶೂರ್ಪಣಖಿಯ ಪುನರ್ಜನ್ಮ ಹಾಗೂ ಆಕೆ ಹರಿಭಕ್ತೆಯಳಾದುದರ ವೃತ್ತಾಂತವನ್ನು ದಾಸರು ಯಾವ ಪುರಾಣ ಕಾವ್ಯದಿಂದ ತೆಗೆದುಕೊಂಡು ತಮ್ಮ

ಕೀರ್ತನೆಯವಸ್ತುವನ್ನಾಗಿಸಿಕೊಂಡಿದ್ದಾರೋ ಅಥವಾ ದಾಸರು ಶ್ರೀಹರಿಯ ಕ್ಷಮಾಗುಣ ಕರುಣಾಭಾವವನ್ನು ಉದಾಹರಣೆ ಸಹಿತ ಸಾಬೀತುಪಡಿಸಲೆಂದು ದಾಸರದೇ ಸ್ವಕಲ್ಪಿತ ರಚನೆಯೂ ಆಗಿರಬಹುದು. ನಿಖರವಾಗಿ ಈ ವೃತ್ತಾಂತದ ಮೂಲ ತಿಳಿದುಬಂದಿಲ್ಲ.

ಕಾಕಾಸುರ ವಧೆ:-

ವಾಲ್ಮೀಕಿ ರಾಮಾಯಣದ ಸುಂದರಕಾಂಡದಲ್ಲಿ ಸೀತೆಯು ಹನುಮನಿಗೆ ತನ್ನ ಅಭಿಜ್ಞಾನವಾಗಿ ರಾಮನಿಗೆ ತಿಳಿಸಲು ಅರಣ್ಯವಾಸ ಕಾಲದಲ್ಲಿ ಚಿತ್ರಕೂಟದಲ್ಲಿ ನಡೆದ ಕಾಕಾಸುರವಧೆ ಪ್ರಸಂಗವನ್ನು ಹೇಳುತ್ತಾಳೆ. ಈ ಕಾಕಾಸುರ ವೃತ್ತಾಂತವನ್ನು ಅಧ್ಯಾಯ ೨ರಲ್ಲಿ ಸಂಕ್ಷಿಪ್ತವಾಗಿ ವಿವರಿಸಿರುವುದರಿಂದ ಮತ್ತೆ ಈ ವೃತ್ತಾಂತವು ಪುನರಾವರ್ತನೆಯಾಗಬಾರದೆಂದು ಇದನ್ನು ಹೇಳಿದೆ ನೇರವಾಗಿ ದಾಸರು ಈ ಪ್ರಸಂಗವನ್ನು ಬಳಸಿರುವ ರೀತಿಯನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ. ಹರಿದಾಸರು ತಾವು ನಿರೂಪಿಸಿರುವ ಸುಂದರಕಾಂಡದ ಯಾವುದೇ ಭಾಗದಲ್ಲೂ ಈ ಪ್ರಸಂಗವನ್ನು ಹೇಳದೇ ಇರುವುದರಿಂದ ಇದನ್ನು ಅರಣ್ಯಕಾಂಡದ ಈ ಭಾಗದಲ್ಲೇ ನೋಡಲಾಗಿದೆ.

ವಾದಿರಾಜರು ತಮ್ಮ ಭ್ರಮರಗೀತೆ ಮತ್ತು ಸುಳಾದಿಯೊಂದರಲ್ಲಿ ರಾಮನ ಮಹಿಮೆ, ಕರುಣಾಭವ, ದುಷ್ಟಶಿಕ್ಷಕ ಗುಣವನ್ನು ಹಾಡುವಲ್ಲಿ ಈ ಪ್ರಸಂಗವನ್ನು ನಿರೂಪಿಸಿದ್ದಾರೆ.

ಪೆಣ್ಣಿಗೆ ಮೋಹಿಸಿದ ಜಯಂತನ ತೃಣವೆಚ್ಚು
ಗೆಲಿದವನ - -- --------- (ಕೀ ೩೪೨, ಸಂ೨)

ಎಂತಲೂ

- - - - - -

ಅಂದು ಸೀತೆಯ ಸ್ತನದ ಮೇಲೆ ಬಂದ ನಿಂತ ಖಳನ ರಾಮ
ಚಂದ್ರನ ಕೈಯಿಂದ ಕೊಲ್ಲಿಸಿತು (ಸುಳಾದಿ ೨೫೪, ಸಂ. ೨)

ಇಲ್ಲಿ ಕಾಗೆಯ ರೂಪದಲ್ಲಿದ್ದ ಜಯಂತನನ್ನು ರಾಮಸಂಹಾರ ಮಾಡಿದ ಎಂಬ ವಿಷಯವಿದೆ. ಆದರೆ ಮೂಲತಃ ರಾಮ ತೃಣದ ಬ್ರಹ್ಮಾಸ್ತ್ರ ಪ್ರಯೋಗಿಸಿದ್ದು ಕಾಗೆಯ ಕಣ್ಣಿನಲ್ಲಿ ವಾಸವಾಗಿದ್ದ ಕುರಂಗನೆಂಬ ಅಸುರನನ್ನು.

ದೀಪ್ತಕಾಯ ಕುಶಸುಪ್ತಜಯ ರಾಮ ।೧। (ಕೀ ೧೪೫, ಸಂ.೮)

ಎಂದು ಪ್ರಸನ್ನ ವೆಂಕಟೇಶದಾಸರು. ರಾಮನ ವೀರತ್ವ, ಪರಾಕ್ರಮಗಳನ್ನು ಹೊಗಳುವ ಸಂದರ್ಭದಲ್ಲಿ ಈ ಕಾಕಾಸುರ ವಿಷಯವನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದು. ಆದರೆ ದಾಸರು

ನಿರೂಪಿಸಿರುವ ರಾಮಾಯಣಕ್ಕೆ ಸಂಬಂಧಪಟ್ಟ ಕೀರ್ತನೆಗಳನ್ನು ಈ ಪ್ರಸಂಗವು ಪ್ರಸ್ತಾಪವಾಗದೇ ಇರುವದನ್ನು ಕಾಣಬಹುದು.

ಸೀತಾಪಹರಣ:-

ದಂಡಕಾರಣ್ಯದಲ್ಲಿ ಶೂರ್ಪನಖಿಗಾದ ಅವಮಾನ, ಅಂಗಭಂಗವನ್ನ ಖರದೂಷಣರ ವಧೆಯನ್ನು 'ಅಕಂಪನ'ವೆಂಬ ರಕ್ಕಸನಿಂದರಿತ ಲಂಕಾಧಿಪತಿ. ದಶಶಿರ ರಾವಣ ಕೆಂಡಾಮಂಡಲನಾಗಿ ಸೀತಾಪಹರಣ ಮಾಡುವಂತೆ ಪ್ರೇರೇಪಿಸುತ್ತಾಳೆ. ರಾಮನಿಂದ ದೈತ್ಯಕುಲವನ್ನು ರಕ್ಷಿಸಬೇಕೆಂದು ಮೊರೆಯಿಟ್ಟಾಗ ಪ್ರಜಾರಕ್ಷಣಾ ಕಾರ್ಯದಿಂದ ಬಂಧಿತನಾದ ರಾವಣ ಸೀತಾಪಹರಣಕ್ಕೆ ತಾಟಕಿಯ ಮಗನಾದ ಮರೀಚನಲ್ಲಿಗೆ ಹೋಗಿ ಸೀತೆಯನ್ನು ಅಪಹರಿಸಲು ತನಗೆ ಸಹಾಯ ಮಾಡಬೇಕೆಂದು ಕೇಳಿಕೊಂಡಾಗ ಈತ ಮಾಯಾಮೃಗದ ರೂಪಧರಿಸಿ ಸೀತೆಯನ್ನು ಮರುಳು ಮಾಡುತ್ತಾನೆ. ಸೀತೆಯು ಅದನ್ನು ಅಪೇಕ್ಷಿಸಿ ರಾಮನಲ್ಲಿ ಬೇಡಿದಾಗ ಅದನ್ನು ಹಿಡಿಯಲು ದಂಡಕಾರಣ್ಯಕ್ಕೆ ಪ್ರವೇಶಿಸಿದ ಸ್ವಲ್ಪ ಹೊತ್ತಿನಲ್ಲಿ ರಾಮನ ಧ್ವನಿಯಲ್ಲಿ 'ಹಾ ಲಕ್ಷ್ಮಣ ! ಹಾ ಸೀತೆ!' ಎಂದು ಮಾರೀಚನು ಬಾಣದೇಟಿನಿಂದ ಅರಚುತ್ತಾನೆ. ಆ ಧ್ವನಿ ಕೇಳಿ ಸೀತಾಲಕ್ಷ್ಮಣ ವಿಚಲಿತರಾಗುತ್ತಾರೆ. ಸೀತೆಯು ರಾಮನ ರಕ್ಷಣೆಗೆ ಲಕ್ಷ್ಮಣನನ್ನು ಅಟ್ಟಿದಾಗ ರಾವಣನು ಸನ್ಯಾಸಿಯ ವೇಷಧರಿಸಿ ಸೀತೆಯ ಅಪಹರಣ ಮಾಡುತ್ತಾನೆ.

ಮೇಲಿನ ವಾಲ್ಮೀಕಿ ರಾಮಾಯಣದ ಕಥಾಪ್ರಕಾರದಂತೆ ರಾವಣನ ಬಳಿ ಮೊದಲು ಬಂದು ಖರದೂಷಣರ ವಧೆ ವಿಚಾರವನ್ನು ತಲುಪಿಸಿದವ ಅಕಂಪನ; ಅನಂತರ ಹಾಗೆ ಮಾಡಿದವಳು ಶೂರ್ಪನಖಿ ಇವರಿಬ್ಬರಿಂದ ಪ್ರೇರಿತನಾಗಿ ರಾವಣ ಸೀತಾಪಹರಣ ಮಾಡುತ್ತಾನೆ. ಆದರೆ ಶ್ರೀಮದಾಚಾರ್ಯರು ಶೂರ್ಪನಖಿ ಹೆಸರನ್ನು ಮಾತ್ರ ಹೇಳುವ ಮೂಲಕ ಸೀತಾಪಹರಣ ಎಂಬ ಪಾಪಕಾರ್ಯದಲ್ಲಿ ಅವಳ ಪಾತ್ರವೇ ಹಿರಿದಾದದ್ದು ಎಂದು ಸೂಚಿಸುತ್ತಾರೆ. ಹಾಗೆಯೇ ಜನಸಾಮಾನ್ಯರೂ ಸಹ ಸೀತಾಪಹರಣಕ್ಕೆ ಶೂರ್ಪನಖಿ ಕಾರಣವೆಂದು ಹೇಳುತ್ತಾರೆಯೇ ಹೊರತು ಅಕಂಪನದ್ದಲ್ಲ. ಹರಿದಾಸರೂ ಸಹ ಶೂರ್ಪನಖಿಯ ಹೆಸರನ್ನೇ ಮೊದಲಿಗೆ ಹೇಳಿರುವುದನ್ನು ಗಮನಿಸಬಹುದು.

ಶ್ರೀಪಾದರಾಜರು ಸೀತಾಪಹರಣ ಪ್ರಸಂಗವನ್ನು ಹೀಗೆ ಹಾಡಿದ್ದಾರೆ.

ತ್ರೇತಾಯುಗದಿ ನಿನ್ನ ಮಾತೆಯಾಜ್ಞೆಯ ಕೊಂಡು
ಪ್ರೀತಿಯಿಂದಲೆ ವನಕೆ ನೀ ಪೋಗಲು
ಆತುರದಿ ಸೀತೆ ಮೃಗಬೇಡಲು ಬಾಣ ಎಸೆಯಲು ಅದು
ಲಕ್ಷ್ಮಣಯೆಂದು ಕೂಗಲು
ಮತ್ತಾವ ಪೋಗಲು ಇತ್ತ ರಾವಣನು ಕರೆದೊಯ್ಯ (ಕೀ ೨೨ ಸಂ ೧)
ಸತಿಯಳ ವಾತಸುತ ತಾನೆನಿಸೇ

ಶ್ರೀಪಾದರಾಜರು ಇಲ್ಲಿ ಯಾರೂ ವರ್ಣಿಸದ ವಿಷಯವಾದ ಮಾರೀಚನೂ 'ಲಕ್ಷ್ಮಣಾ' ಎಂದು ಕೂಗಿದ್ದನ್ನು, ಹೇಳಿದ್ದಾರೆ.

ರಾವಣ ನಿಜವಾದ ಸೀತೆಯನ್ನು ಅಪಹರಿಸಿಲ್ಲ ಆಕೆ ಪ್ರತಿಕೃತಿಯನ್ನು ಅಪಹರಿಸಿದ್ದು ಎಂಬ ವಿಚಾರವನ್ನು ಶ್ರೀಮದಾಚಾರ್ಯರು. ಹಾಗೆಯೇ ಹಲವು ಪುರಾಣಗಳಲ್ಲೂ ಉಕ್ತವಾಗಿದ್ದು ಇದೇ ವಿಷಯವನ್ನು ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಬಳಸಿಕೊಂಡಿದ್ದಾರೆ.

ರಾಮದಾಸರು ಸೀತಾಪಹರಣ ಪ್ರಸಂಗವನ್ನು ಸ್ವಲ್ಪ ದೀರ್ಘವಾಗಿ ಹೀಗೆ ವರ್ಣಿಸಿದ್ದಾರೆ.

ಪುಂಡ ವಾಸಿಸಿದ ದಂಡಕಾರಣ್ಯದಲಿ
ಭಂಡ ರಕ್ಕಸರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ।೩೯।

ಅಗ್ನಿದೇವನಲ್ಲಿ ಸಂಜ್ಞೆ ತಿಳುಹಿ ತನ್ನ
ಪ್ರಾಜ್ಞೆ ಸತಿಯನಿಟ್ಟ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ।೪೦।

ಮಾಯಾಸೀ(ತೆಯಂ/ತನಂ) ಮಾಯದಿಟ್ಟು
ಪಾಯದಿಂದರ್ನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ।೪೧।

ವನಕೆಳೆದೊಯ್ಯುವಕನಕಮೃಗವ ಕೊಂದು
ಘನತ್ವರ ತಿರುಗಿದ ಗೋವಿಂದ
ಮುಕ್ತಿದಾಯಕ ಸಿರಿಗೋವಿಂದ ।೪೨।

ಮೇಲೆ ಹೇಳಿದ ಸೀತಾಕೃತಿ ವಿಚಾರವನ್ನು ಕಾಖಂಡಕಿ ಕೃಷ್ಣದಾಸರು.

'ಲೋಕ ಮಾತೆಯಾಕೃತಿ ಒಯ್ಯಲು ರಾವಣ' ।೨।ಎಂತಲೂ ಹಾಡಿದ್ದಾರೆ.

ವಾಲ್ಮೀಕಿ ರಾಮಾಯಣದಲ್ಲಿ ಬರುವ ಮಾಯಾಮೃಗದ ವರ್ಣನೆ, ರಾಮ, ಲಕ್ಷ್ಮಣನಿಗೆ ಸೀತೆಯನ್ನು ಎಚ್ಚರದಿಂದ ನೋಡಿಕೊಳ್ಳಲು ಹೇಳಿದ ವಿಷಯ, ಮಾರೀಚ ರಾಮನನ್ನು ಕಾಡಿನಲ್ಲಿ ಅಲೆಸಿದ ಬಗೆ, ರಾಮ ಮಾಯಾಮೃಗವನ್ನು ಕೊಂದ ಬಗೆ, ರಾಮನ ಧ್ವನಿಯಲ್ಲಿ ಕೂಗಿದ ಮಾರೀಚನ ಕೂಗನ್ನು ಕೇಳಿ ಸೀತೆ ಆತಂಕಗೊಂಡು ರಾಮನ ರಕ್ಷಣೆಗೆ ಹೋಗಲೆಂದು ಲಕ್ಷ್ಮಣನಿಗೆ ಹೇಳಿ ಆತ ಹೋಗಲು ನಿರಾಕರಿಸಿದಾಗ ಬಿರುನುಡಿಯಿಂದ ನಿಂದಿಸಿ ಕಾಡಿಗಟ್ಟುತ್ತಾಳೆ. ನಂತರ ರಾವಣನ ಪ್ರವೇಶ ಆತನೊಂದಿಗೆ ಸೀತೆಯ ಸಂಭಾಷಣೆ. ತನ್ನ ವಶವಾಗಲೆಂದು ಸೀತೆಯಲ್ಲಿ ಅರಮನೆ ವಾಸದ ಲೋಭ ತೋರಿಸಿದಾಗ ದಿಟ್ಟತನದಿಂದ ಪ್ರತ್ಯುತ್ತರ ನೀಡಿದ್ದು ಕೋಪಿಷ್ಠನಾದ ರಾವಣ ಸೀತೆಯನ್ನು ಅಪಹರಿಸಿದ ವಿಷಯ ಸುಮಾರು ೮

ಸರ್ಗಗಳಷ್ಟು ದೀರ್ಘವಾಗಿ ವರ್ಣಿತವಾಗಿದ್ದರೆ. ಹರಿದಾಸರು ಇದನ್ನು ಕೇವಲ ಒಂದೆರಡು ನುಡಿಗಳಲ್ಲಿ ಹಾಡಿ ತಮ್ಮ ಸಂಕ್ಷೇಪ ಸಾಮರ್ಥ್ಯವನ್ನು ಸಮರ್ಥಿಸಿದ್ದಾರೆ.

ಸೀತಾ ವಿಯೋಗ:-

ಸೀತೆ ಅಪೇಕ್ಷಿಸಿದ ಸ್ವರ್ಣಮೃಗವನ್ನು ತರಲು ಅದನ್ನು ಬೆನ್ನಟ್ಟಿದ ರಾಮ ಮಾಯಾಜಿಂಕೆರೂಪಿಯಾದ ಮಾರೀಚನನ್ನು ಕೊಂದು ಪಂಚವಟಿಗೆ ಮರಳಿದ ಅಲ್ಲಿ ಸೀತೆಯನ್ನು ಕಾಣದ ರಾಮನ ಪ್ರಲಾಪ ಗಗನಮುಟ್ಟುವಂತೆ, ರಾಮನ ದುಃಖವನ್ನು ವಾಲ್ಮೀಕಿ ರಾಮಾಯಣದಲ್ಲಿ ಮನಕರಗುವಂತೆ ವರ್ಣಿತವಾಗಿದೆ. ರಾಮನು ಸೀತೆಯನ್ನು ಹುಡುಕುತ್ತ ವನವೆಲ್ಲ ತಿರುಗುತ್ತಾನೆ. ಕಂಡಕಂಡ ವೃಕ್ಷಗಳಿಗೆಲ್ಲಾ 'ಸೀತೆ' ಎಂದು ತಬ್ಬಿಕೊಳ್ಳುತ್ತಾನೆ. ಪ್ರಾಣಿ, ಪಕ್ಷಿ, ಗಿಡ-ಮರಗಳಿಗೆಲ್ಲ ಸೀತೆಯನ್ನು ನೋಡಿದ್ದರೆ ಹೇಳಿ ಎಲ್ಲಿರುವಳು, ಹೇಗಿರುವಳು ಹೇಳಿ ಎಂದು ವನ ಪರಿಸರದ ಎಲ್ಲಾ ಜೀವಿಗಳನ್ನು ಪ್ರಶ್ನಿಸುತ್ತಾನೆ. ಕಾಡಿನ ಬೆಟ್ಟದ ತಪ್ಪಲುಗಳನ್ನೂ, ಗುಹೆ, ಶಿಖರಗಳಲ್ಲಿ ನದಿ, ಕೆರೆಗಳಲ್ಲೂ ಸೀತೆಯನ್ನು ಹುಡುಕುವನು ವಾಲ್ಮೀಕಿ ಋಷಿಯ ರಾಮಾಯಣವು ಸಾಮಾನ್ಯ ಮನುಷ್ಯನ ಚರಿತ್ರೆಯಾದ್ದರಿಂದ ಇಲ್ಲಿಯ ಕಥಾನಾಯಕ ರಾಮ ಸಾಮಾನ್ಯ ಮನುಷ್ಯನಂತೆಯೇ ಪ್ರಲಾಪಿಸುತ್ತಾನೆ. ಶ್ರೀಮದಾಚಾರ್ಯರು ಮೂಲ ರಾಮಾಯಣದಲ್ಲಿರುವ ರಾಮನ ಪ್ರಲಾಪವನ್ನು ವಿವರಿಸಿಲ್ಲ. ಕಾರಣ ರಾಮನನ್ನು ಶ್ರೀಹರಿಯ ಅವತಾರವೆಂತಲೂ, ಶ್ರೀಹರಿಯು ಸಾಮಾನ್ಯ ಮನುಷ್ಯನಂತೆ ದುಃಖಿಸುವುದು ಕೇವಲ ಒಂದು ಹೆಣ್ಣಿಗಾಗಿ ಮಾಯೆಗೆ ವಶವಾದವನಂತೆ ಪ್ರಲಾಪಿಸುವುದು ಸರಿಕಾಣದೆ ರಾಮನ ದೈವೀಗುಣಕ್ಕೆ ಧಕ್ಕೆ ಬರುವುದೆಂದು ಈ ಅಂಶವನ್ನು ಬಿಟ್ಟಿರಬಹುದು.

ಆದರೆ ಶ್ರೀಮದಾಚಾರ್ಯರು ವರ್ಣಿಸದ ರಾಮನ ಪ್ರಲಾಪವನ್ನು ಹರಿದಾಸರು ರಾಮನ ವಿಲಾಪವನ್ನು ತಮ್ಮ ನಿಂದಾಸ್ತುತಿಯಲ್ಲಿ, ವ್ಯಾಜ್ಯಸ್ತುತಿಯಲ್ಲಿ ಸಂಕ್ಷೇಪ ರಾಮಾಯಣದಲ್ಲಿ ಈ ಸನ್ನಿವೇಶವನ್ನು ಬಳಸಿಕೊಂಡಿದ್ದಾರೆ.

ರಾಮದಾಸರು ತಮ್ಮ ದೀರ್ಘ ಕೀರ್ತನೆಯಲ್ಲಿ ಸೀತಾಪಹರಣವಾದ ನಂತರ ರಾಮನ ಪ್ರಲಾಪವನ್ನು ಐದು ನುಡಿಗಳ ಮೂಲಕ ವಿವರಿಸಿದ್ದಾರೆ.

ಅರಿಯದ ನರನಂತೆ ಮರುಗುತ ಬಂದು ಕಂಡು
ಬರಿಯ ಆಶ್ರಮವ ಗೋವಿಂದ ನಮೋ
ಮುಕ್ತಿದಾಯದ ಸಿರಿಗೋವಿಂದ ।ಪಲ।

ಸತಿಯೆ ಪೋದೆಯೆಂದು ಕ್ಷಿತಿಯ ಮೇಲೆರಗಿದ

ಮತಿದಪ್ಪದವನಂತೆ ಗೋವಿಂದ ನಮೋ

ಮುಕ್ತಿದಾಯಕ ಸಿರಿಗೋವಿಂದ ।೪೯।

ಎದ್ದು ನಿಂತು ಮತ್ತೆ ಮುದ್ದು ಮೋಹಿನಿ ಎ

ಲ್ಲಿದ್ದೆಯೆಂದು ಕೂಗುತ ಗೋವಿಂದ ನಮೋ

ಮುಕ್ತಿದಾಯಕ ಸಿರಿಗೋವಿಂದ ।೫೦।

ಹೆಂಡತಿಯಿಲ್ಲೆಂದು ಕಂಡಕಂಡಂತೆ ಮೃಗ

ಹಿಂಡನು ಕೇಳಿದ ಗೋವಿಂದ ನಮೋ

ಮುಕ್ತಿದಾಯಕ ಸಿರಿಗೋವಿಂದ ।೫೧।

ಘನರೋಷದಿ ಹೊರಟನು ಸತಿಯನ್ನುಡುಕುತ

ದನುಜಕುಲಾಂತಕ ಗೋವಿಂದ ನಮೋ

ಮುಕ್ತಿದಾಯಕ ಸಿರಿಗೋವಿಂದ ।೫೨। (ಕೀ ೭೬೨ ಸಂ.೩೨)

ಇಲ್ಲಿ ರಾಮದಾಸರು ವಾಲ್ಮೀಕಿ ರಾಮಾಯಣದಲ್ಲಿ ಬರುವ ರಾಮನ ವಿಲಾಪವನ್ನು, ದುಃಖವನ್ನು ಯಥಾವತ್ತಾಗಿ ಅಂದರೆ ಸಂಕ್ಷೇಪವಾಗಿ ರಚಿಸಿದ್ದಾರೆ.

ಶಬರಿ ಪ್ರಸಂಗ:-

ಮಧ್ವರಾಮಾಯಣದಲ್ಲಿ (ಅಧ್ಯಾಯ ೫ ಶ್ಲೋಕ ೪೪-೪೫) ಶಬರಿಯ ವೃತ್ತಾಂತವನ್ನು ಆಚಾರ್ಯರು ೨ ಶ್ಲೋಕಗಳಲ್ಲಿ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಕಬಂಧೋದ್ಧಾರವಾದ ಮೇಲೆ ಅವನ ಮಾರ್ಗದರ್ಶನದಂತೆ ಸೀತೆಯನ್ನು ಹುಡುಕುತ್ತಾ ಸುಗ್ರೀವನಿರುವ ಋಷ್ಯಮೂಕ ವನ ಪ್ರದೇಶಕ್ಕೆ ಹೋಗುವ ದಾರಿಯಲ್ಲಿ ಪಂಪಾ ಸರೋವರದ ಬಳಿ "ಶಬರಿಯು ಶ್ರೀರಾಮನನ್ನು ಕಂಡಳು. ಇವನೆ ಪರಮಪುರುಷ ಹರಿ ಎಂದರಿತು ಅವನೆದುರು ಬೆಂಕಿಗೆ ಹಾರಿ ತನ್ನನ್ನು ಅವನಿಗೆ ಅರ್ಪಿಸಿಕೊಂಡಳು. ಶ್ರೀರಾಮ ಅವಳಿಗೆ ತನ್ನ ಲೋಕ ವೈಕುಂಠವನ್ನೇ ನೀಡಿದನು. ಅವಳು ಮಾತಂಗ ಮುನಿಯ ವಚನದಂತೆ ರಾಮನ ಬರವನ್ನೇ ಕಾದು ಎಲ್ಲ ಅಂಜಿಕೆ ತೊರೆದು ಕುಳಿತವಳು"[೨]

ಇಲ್ಲಿ ಮಧ್ವಾಚಾರ್ಯರು ಶಬರಿಯ ಪೂರ್ವಜನ್ಮದ ಕಥೆಯನ್ನು ಹೇಳುತ್ತಾರೆ. ಇದು ಇತರ ರಾಮಾಯಣಗಳಲ್ಲೆಲ್ಲೂ ದೊರೆಯುವುದಿಲ್ಲ. "ಶಬರಿ ನಿಜವಗಿ ಒಬ್ಬ ಅಪ್ಸರೆ, ಇಂದ್ರದೇವನ ಮುಂದೆ ದರ್ಪ ತೋರಿದುದರಿಂದ ಅವಳಿಗೆ ಶಚಿಯ ಶಾಪ ತಟ್ಟಿತು; ಕಾದಾಡಿ ಆದಳು; ಭಗವಂತನ ಕರುಣೆ ಶಾಪದಿಂದ ಬಿಡುಗಡೆಗೊಳಿಸಿತು ಕೇವಲ ಒಂದೂವರೆ ಶ್ಲೋಕದಲ್ಲಿ ಸಂಕ್ಷಿಪ್ತವಾಗಿರುವ ಶಬರಿಯ ವೃತ್ತಾಂತವನ್ನು ವಿನೂತನ ಸಂಗತಿಯಾಗಿದೆ.

ಪ್ರಭಂಜನಾಚಾರ್ಯರು ಹೇಳುವಂತೆ "ಮೂಲತಃ ಅಪ್ಸರೆ ಆಗಿದ್ದ ಅವಳು ಬೇಡತಿಯಾಗಲು ಶಚಿಯ ಶಾಪ ಕಾರಣವಾಯಿತು. ಅವಳು ಮತ್ತೆ ಅಪ್ಸರೆಯಾಗಿ ಉದ್ಧಾರವಾಗಲು ಶ್ರೀರಾಮನ ದರ್ಶನ

ಕಾರಣವಾಯಿತು. ಅಂತಹ ದರ್ಶನಕ್ಕೆ ಗುರು ಮತಂಗ ಮುನಿ ನೀಡಿದ ಉಪದೇಶ ಕಾರಣವಾಯಿತು. ಗುರೂಪದೇಶದಂತೆ ಅವಳು ಶ್ರೀರಾಮನಿಗಾಗಿ ಮಾಡಿದ ಪ್ರತೀಕ್ಷೆ ದೊಡ್ಡ ಉಪಾಸನೆಯಾಯಿತು. ಶಬರಿಯು ಒಬ್ಬ ಬೇಡತಿಯಾದರೂ ಅವಳು ಮೂಲತಃ ಬ್ರಹ್ಮಜ್ಞಾನಿಯಾಗಿದ್ದ ಒಬ್ಬ ಅಪ್ಸರೆಯಾಗಿದ್ದಳು. ಅದಕ್ಕೆಂದೇ ಶ್ರೀರಾಮ ಅವಳನ್ನು ಉದ್ಧರಿಸಿದ; ಭಗವದನುಗ್ರಹಕ್ಕೆ ಬ್ರಹ್ಮಜ್ಞಾನದ ಹೊರತು ಮತ್ತೊಂದು ಉಪಾಯವೇ ಇಲ್ಲ"[೫] ಎಂಬ ತತ್ವವು ಇದರಿಂದ ಧ್ವನಿತವಾಗಿದೆ.

ಆದರೆ ಶ್ರೀ ವಿಶ್ವೇಶ್ವರ ತೀರ್ಥ ಶ್ರೀಪಾದರು ತಮ್ಮ ಶ್ರೀಮದ್ರಾಮಾಯಣಸಾರ ಮತ್ತು ಪಾತ್ರ ಚಿತ್ರಣ ಗ್ರಂಥದಲ್ಲಿ ಶಬರಿಯ ಭಕ್ತಿಯ ಬಗ್ಗೆ ಈ ರೀತಿ ಹೇಳಿದ್ದಾರೆ "ಭಕ್ತಿಯಿಂದ ಶ್ರೀರಾಮನಿಗೆ ಫಲಗಳನ್ನು ಸಮರ್ಪಿಸುತ್ತಾಳೆ. ಅದನ್ನು ಸಂತೋಷದಿಂದ ಸ್ವೀಕರಿಸಿದ ಪ್ರಾಣಿಯಾದ ಗಜರಾಜನು ಕೊಟ್ಟ ಪುಷ್ಪವನ್ನು ಆದರದಿಂದ ಸ್ವೀಕರಿಸಿದ ಭಗವಂತನು ಕೆಳವರ್ಗದ ಮಹಿಳೆ ಶಬರಿ ಕೊಟ್ಟ ಫಲವನ್ನು ಆದರದಿಂದ ಸ್ವೀಕರಿಸಿದ. ಇವನ ಸ್ವೀಕಾರಕ್ಕೆ ಜೀವನದಲ್ಲಿರಬೇಕಾದ ಅರ್ಹತೆ ಎಂದರೆ ಪ್ರಾಮಾಣಿಕವಾದ ಭಕ್ತಿಯೊಂದೇ. ಗುಹ, ಜಟಾಯು, ಪಕ್ಷಿ, ಶಬರಿ ಹೀಗೆ ಪ್ರತಿಯೊಬ್ಬರ ಭಕ್ತಿಯನ್ನು ಕಂಡು ಶ್ರೀರಾಮಚಂದ್ರನು ಅನುಗ್ರಹಿಸಿದ್ದಾನೆ."[೬]

ಹೀಗೆ ಮಧ್ವರಾಮಾಯಣದ ಶಬರಿ ಪ್ರಸಂಗವನ್ನು ಕುರಿತು ಶಬರಿಯ ಮುಕ್ತಿಗೆ ಭಗವದನುಗ್ರಹಕ್ಕೆ ಬ್ರಹ್ಮಜ್ಞಾನವೇ ಮಾರ್ಗ ಎಂದು ಪ್ರಭಂಜನಾಚಾರ್ಯರು ಹೇಳಿದರೆ, ಭಗವಂತನಲ್ಲಿ ಆಳ ಭಕ್ತಿಯೇ ಮುಖ್ಯಸಾಧನ ಎಂದು ವಿಶ್ವೇಶ್ವರತೀರ್ಥರು ಸಾರಿದ್ದಾರೆ. ಶಬರಿಯ ಕಥೆಯನ್ನು ವಾಲ್ಮೀಕಿಗಳು ಚಿತ್ರಿಸಿರುವುದು ಇನ್ನೊಂದು ಬಗೆಯದು. ಶಬರಿಯು ಮಾತಂಗ ಮುನಿಯ ಅನುಚರೆ, ಶಿಷ್ಯೆಯಾಗಿದ್ದು. ಮಾತಂಗ ಮುನಿಯು ಮೋಕ್ಷ ಹೊಂದಿ ಸ್ವರ್ಗಕ್ಕೆ ಹೋಗುವಾಗ ಶಬರಿಗೆ "ನಿನ್ನ ಬಲುಪುಣ್ಯಕರವಾದ ಈ ಆಶ್ರಮಕ್ಕೆ ರಾಮನು ಲಕ್ಷ್ಮಣನೊಡನೆ ಬರುವನು ಆ ಅತಿಥಿಯನ್ನು ನೀನು ಸತ್ಕರಿಸಬೇಕು. ಆತನ ದರ್ಶನದಿಂದ ನೀನು ಉತ್ತಮವೂ, ಶಾಶ್ವತವೂ ಆದ ಲೋಕಗಳನ್ನು ಹೋಗಿ ಸೇರುವೆ" ಎಂದು ಹೇಳಿದ್ದನ್ನು ರಾಮನಿಗೆ ಶಬರಿ ತಿಳಿಸಿ ರಾಮನಿಗೆ ಪಂಪಾ ಸರೋವರ ತೀರದ ಶ್ರೇಷ್ಠ ಫಲಗಳನ್ನು ನೀಡಿ ಮತಂಗಾಶ್ರಮ ತೋರಿಸಿ. ಅಗ್ನಿಗೆ ತನ್ನ ದೇಹ ಸಮರ್ಪಿಸಿ ಪುಣ್ಯಾತ್ಮರಾದ ಮಹರ್ಷಿಗಳು ವಿಹರಿಸುವ ಪುಣ್ಯಕರವಾದ ಸ್ಥಳವನ್ನು ಶಬರಿ ಸೇರುತ್ತಾಳೆ.

ಶಬರಿಯ ಪ್ರಸಂಗವನ್ನು ಅನೇಕ ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಉಲ್ಲೇಖಿಸಿದ್ದಾರೆ. ಪುರಂದರದಾಸರು ಶ್ರೀಹರಿಯ ಕುರಿತಾದ ವ್ಯಾಜ್ಯ ಸುತ್ತಿ ಮಾಡುವಾಗ"ಬಿನುಗು ಬೇಡಿತಿಯಂತೆ ಸವಿದುಂಡ ಹಣ್ಣನ್ನು ತಿನಿಸಲಿಲ್ಲ" ನಾನು ನಿನ್ನನ್ನು ಶಬರಿಯಂತೆ ಆರಾಧಿಸಲಿಲ್ಲ, ಸತ್ಕರಿಸಲಿಲ್ಲ; ಅವಳು ಭಕ್ತಿಯಿಂದ ತಾನು ರುಚಿ ನೋಡಿದ ಸಿಹಿಹಣ್ಣುಗಳನ್ನು ನೀಡಿದಂತೆ ನಾನು ನೀಡಲಿಲ್ಲ ಎನ್ನುತ್ತಾನೆ ಭಕ್ತ. ಶಬರಿ ರಾಮನಿಗಾಗಿ ಹಣ್ಣುಗಳನ್ನು ಆಯ್ದು ತರುವಾಗ ಪ್ರತಿ ಮರದ ಹಣ್ಣುಗಳಲ್ಲಿ ಒಂದನ್ನು ರುಚಿ ನೋಡಿ

ಹುಳಿಹಣ್ಣನ್ನು ಎಸೆದು ಸಿಹಿಹಣ್ಣನ್ನು ಆರಿಸಿದ್ದಳು. ಭಗವಂತನಿಗೆ ಪ್ರಿಯವಾದ ಶ್ರೇಷ್ಠವಾದ ಫಲಗಳನ್ನು ನೀಡುವುದು ಅವಳ ಅಭೀಷ್ಟೆಯಾಗಿತ್ತು. ಎಂಜಲ ಹಣ್ಣು. ಸವಿದುಂಡ ಹಣ್ಣು ಎಂದರೆ ಅವಳು ಕಚ್ಚಿ ತಿಂದ ಹಣ್ಣು ಎಂದರ್ಥವಲ್ಲ ರುಚಿ ನೋಡಿದ ಹಣ್ಣನ್ನು ಎಸೆದು ಆ ಹಣ್ಣಿನ ಮರದ ಹಣ್ಣುಗಳನ್ನು ಆರಿಸಿದ್ದಳು ಎಂದರ್ಥ. ಆದ್ದರಿಂದ ಎಂಜಲು ಮಾಡದ ಹಣ್ಣುಗಳನ್ನೇ ಅವಳು ನೀಡಿದ್ದು ಎಂದು ಅಚ್ಯುತದಾಸರು ಅರ್ಥೈಸುತ್ತಾರೆ.

ಶಬರಿ ಎಂಜಲು ನೀಡಿದ ಹಣ್ಣಿನ ಪ್ರಸಂಗ ವಾಲ್ಮೀಕಿ ರಾಮಾಯಣದಲ್ಲೂ ಇಲ್ಲ ಅಲ್ಲಿರುವುದು ಇಷ್ಟೆ.

"ಮಯಾತು ವಿವಿಧಂ ವನ್ಯಂ ಸಂಚಿತಂ ಪುರುಷರ್ಷಭ
ತವಾರ್ಥೇ ಪುರುಷವ್ಯಾಘ್ರ ಪಂಪಾಯಶ್ತೀರ ಸಂಭವಂ"[೫]

[ಹೇ ಪುರುಷೋತ್ತಮ, ಪಂಪಾತೀರದಲ್ಲಿ ದೊರೆಯುವ ಫಲಮೂಲಾದಿ ವನ್ಯಾಹಾರವನ್ನು ನಿನಗೋಸ್ಕರ ಸಂಗ್ರಹಿಸಿದ್ದೇನೆ]

ಹರಿದಾಸರಿಗೆ ಮುಂಚೆ ಜಾನಪದ ಮೂಲದಿಂದಲೇ ಅಥವಾ ಹರಿಕಥಾದಾಸರ ಪುರಾಣದ ಪ್ರಸಂಗಗಳಿಂದಲೋ ಈ ಎಂಜಲು ಹಣ್ಣು ತಿಂದ ಪ್ರಸಂಗ ಪ್ರಚಾರಕ್ಕೆ ಬಂದಿರಬೇಕು. ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಹೇಳಲು ಆ ಕಾಲದಲ್ಲಿ ಈ ಪ್ರಸಂಗವು ಪ್ರಚಲಿತದಲ್ಲಿರಬಹುದು.

ಪುರಂದರದಾಸರಷ್ಟೇ ಅಲ್ಲ ಇತರ ಎಲ್ಲಾ ಹರಿದಾಸರು ಎಂಜಲ ಹಣ್ಣಿನ ಪ್ರಸಂಗವನ್ನೇ ಉಲ್ಲೇಖಿಸಿದ್ದಾರೆ.

"ಎಂಜಲ ಫಲಗಳ ಹರಿಗರ್ಪಿಸಿದ
ಕಂಜಲೋಚನೆಯ ಕೇಳೇನು" ಎಂದಿದ್ದಾರೆ ವಿಜಯದಾಸರು. (ಕೀ ೧೫೬, ಸಂ ೯/೧)

- - - - - - - - - - - -

ನಂಬಿಕೊಟ್ಟ ಕಮಲಾಂಬಕಿಯೆಂಜಲ
ಸಂಭ್ರಮದಿಂದ ಮೆದ್ದ ಕರುಣವ ತೋರೋ ರಂಗಯ್ಯ ।೨। (ಕೀ ೨೪೭, ಸಂ ೩೨)

ರಾಮ ತಿಂದ ಹಣ್ಣು ಯಾವುದು ಎಂಬುದನ್ನು ಕಾಖಂಡಕಿ ಕೃಷ್ಣದಾಸರು ಹೇಳಿದ್ದಾರೆ.

ಶಬರಿಯ ಭಾವಕೆ ಮೆಚ್ಚಿ ಉಂಡನು ಬದರಿ ಫಲಾ
ವಿಭು ನೀಡಿದನು ಪಾದಾಚಲ (ಕೀ ೨೫೬, ಸಂ೧೧/೧)

ಶಾಂತಿಬಾಯಿಯವರು ಸಹ ಇದೇ ರೀತಿ ಹೀಗೆ ಹಾಡಿದ್ದಾರೆ.

ಶಬರಿಯ ಕಾಯ್ದೆಯೊ ಬದರಿಯ ಫಲವುಂಡು
ವಿಭು ಪರಮಾನಂದಾ ಪ್ರಭೆಯೊಳಗಿರಿಸೆನ್ನ (ಕೀ ೧೩, ಸಂ.೧೮/೪)

ಶಬರಿಗೊಲಿದ ರಾಮ ತನ್ನಲ್ಲಿಯೂ ಕರುಣಾಭಾವವನ್ನು ತೋರು ಎಂದು ಅಪೇಕ್ಷಿಸುತ್ತಾರೆ, ವರದೇಶವಿಠಲರು ಶಬರಿಯ 'ಬೇಡ' ಜಾತಿಯನ್ನು ಈ ರೀತಿ ಉಲ್ಲೇಖಿಸಿದ್ದಾರೆ.

"ಅಂಜಿಕೆಯಿಲ್ಲದೆ ಭಿಲ್ಲ ಹೆಂಗಳೆಯೆಂಜಲವ ನೀ ಮೆದ್ದೆಯಾ ।೬। ಎಂದಿದ್ದಾರೆ. ಆಸೂರಿ ರಾಮಸ್ವಾಮಿ ದಾಸರು ಶಬರಿ ಪ್ರಸಂಗವನ್ನು ಈ ರೀತಿ ಉಲ್ಲೇಖಿಸಿದ್ದಾರೆ.

"ಎಂಜಲ ತಿಂದಾ ಬಲದಿ ಮಾರೀಚನ ಕೊಂದೆ" (ಕೀ ೭೫, ಸಂ ೩೫/೨) ಎಂದೂ

"ಫಲವ ಕೊಟ್ಟವಳಿಗೊಲಿದೆ" (ಕೀ ೧೩, ಸಂ ೩೫/೨) ಎಂದು ಹೇಳುತ್ತಾರೆ.

ಇಲ್ಲಿ ದಾಸರು ಶಬರಿಯ ಪ್ರೀತಿಯ ಫಲಗಳಾದ ಎಂಜಲು ನೇರಳೆಗಳನ್ನು ತಿಂದಿದ್ದರ ಫಲವಾಗಿ ಬಂದ ಬಲದಿಂದ ಮಾರೀಚನ ಕೊಂದೆ ಎಂದು. ಹೇಳಿರುವುದು ಅಚ್ಚರಿಯ ಸಂಗತಿ ಆಗಿದೆ. ಆದರೆ ರಾಮ ಮಾರೀಚನನ್ನು ಕೊಂದದ್ದು ವಿಶ್ವಾಮಿತ್ರರು ಕರುಣಿಸಿದ ದಿವ್ಯಾಸ್ತ್ರಗಳಿಂದ.

ಹೀಗೆ ಶಬರಿಯ ಬಗೆಗಿನ ವಿವರಣೆ ಹಲವಾರು ಹರಿದಾಸರು ಹಲವಾರು ಪ್ರಕಾರದಲ್ಲಿ ಹಲವಾರು ಕೀರ್ತನೆಗಳಲ್ಲಿ ನೋಡಬಹುದಾಗಿ ಬಹಳ ಸಂಕ್ಷಿಪ್ತವಾಗಿ ಶಬರಿ ಪ್ರಸಂಗವನ್ನು ಹಾಡಿ ಮುಗಿಸಿರುವುದನ್ನು ಹಲವಾರು ಕೀರ್ತನೆಗಳಲ್ಲಿ ಕಾಣಬಹುದು.

ಕಿಷ್ಕಂದಾಕಾಂಡದಪ್ರಸಂಗಗಳು

ಹನುಮತ್ಸಮಾಗಮ:-

ಕಬಂಧನ ಉದ್ಧಾರವಾದ ನಂತರ ಆತನ ಮಾರ್ಗದರ್ಶನದಂತೆ ರಾಮ, ಲಕ್ಷ್ಮಣರು ಋಷ್ಯಮೂಕ ವನಪ್ರದೇಶಕ್ಕೆ ಆಗಮನಿಸಿದಾಗ ಅಲ್ಲಿಯೆ ಮತಂಗಾಶ್ರಮದ ಪ್ರದೇಶದಲ್ಲಿ ಆಶ್ರಿತರಾಗಿದ್ದ ಹನುಮಂತ, ಸುಗ್ರೀವಾದಿಗಳು ಇವರು ವಾಲಿಯ ಕಡೆಯ ಗೂಢಾಚಾರರಿರಬಹುದೆಂದು ಇವರುಗಳ ಬಗ್ಗೆ ಮಾಹಿತಿ ಪಡೆಯಲು ಸುಗ್ರೀವನ ಆಜ್ಞೆಯಂತೆ ಹನುಮಂತನು ಮಾನವ ರೂಪಧರಿಸಿ ಭಿಕ್ಷುಕ (ಸನ್ಯಾಸಿ)ನಾಗಿ ಅವಲ ಬಳಿ ತೆರಳಿ ರಾಮಲಕ್ಷ್ಮಣರ ಪೂರ್ವಾಪರಗಳನ್ನು ತಿಳಿಯುತ್ತಾನೆ. ರಾಮ, ಲಕ್ಷ್ಮಣರನ್ನು ಋಷಯಮೂಕ ವನಪ್ರದೇಶದಲ್ಲಿ ಮೊದಲ ಬಾರಿಗೆ ಕಂಡ ಹನುಮಂತನು ಅವರ ರೂಪವನ್ನು ಬಣ್ಣಿಸಿ ಅವರೊಂದಿಗೆ ಮೊದಲ ಬಾರಿ ಮಾತಾಡಿದ ರೀತಿಯನ್ನು ಲಕ್ಷ್ಮೀನಾರಾಯಣದಾಸರು ಹೀಗೆ ಹಾಡಿದ್ದಾರೆ.

ಎಲೆ ಮಹಾತ್ಮರೇ ನೀವು ರಾಜರ್ಷಿಗಳ ತೆರದಿ
ಬೆಳಗುವಿರಿ ನೋಡಿ ದೇವಕುವರರಂತಿಹಿರಿ
ಧೀರ ಗಂಭೀರತರ ಭಾವ ತೋರ್ಪುದು ಮುಖದಿ
ನಾರು ವಸ್ತ್ರವ ಧರಿಸಿ ತಿರುಗುವಿರಿ ವನದಿ ।೧।

ಕಂದರ್ಪನನು ಪೋಲ್ವ ಕಮನೀಯ ವಿಗ್ರಹರು
ಬಂದಿ ಹಿಂನಡೆಯಲಿ ವೈರಿ ನಿಗ್ರಹರೂ
ಪುಟಕ್ಕಿಟ್ಟ ಚಿನ್ನದಂತೆ ಕಾಂತಿರಂಜಿತರು
ಪಟುತರಂಗರು ಗಹನವಿಟದಿ ಪರಿವ್ರಾಜಕರು ।೨।

ಆಜಾನುಬಾಹುಗಳು ಆಜಾನು ಜಂಘಗಳು
ಆ ಜಟ ಮಂಡಲವು ರಾಜಿಸುತಲಿಹವು
ದೃಢವಾದ ನಿಮ್ಮಡಿಗಳಿಡುವ ಧ್ವನಿಗಳ ಕೇಳಿ
ಅಡವಿಯೊಡತನ ಪಡೆದ ಸಿಂಹಗಳು ನಡುಗುವುವು ।೩।

ಧರೆಗಿಳಿದು ಬಂದಿರ್ಪ ರವಿ ಚಂದ್ರರಂದದಲಿ
ನೆರೆ ಪ್ರಕಾಶಿಕರಾಗಿ ಕಂಗೊಳಿಸುತಿಹಿರಿ
ಗುರುತರ ಕಾರ್ಯತತ್ಪರರಾಗಿ ಬಂದಿರುವ
ನರಭಾವ ತೋರುವುದು ಕರಿಗಿರೀಶನ ದಯದಿ (ಕೀ ೩೫೩, ಸಂ ೨೭)

ಹೀಗೆ ಮುಂದುವರಿದು ಲಕ್ಷ್ಮೀನಾರಾಯಣದಾಸರು ತಮ್ಮದಿನ್ನೊಂದು ಕೀರ್ತನೆಯಲ್ಲಿ ಕೇವಲ ರಾಮನ ರೂಪಿನ ವರ್ಣನೆಯನ್ನು ಹನುಮ ರಾಮನನ್ನು ಮೊದಲ ಬಾರಿ ಕಂಡು ಆತನನ್ನು ವಂದಿಸಿರುವ ಬಗೆಯನ್ನು ಹನುಮನ ಮೂಲಕ ದಾಸರು ವರ್ಣಿಸಿರುವುದನ್ನು ಕಾಣಬಹುದು.

ರಘುವೀರ ಕಂಡನು ಕಪಿವೀರ ಕಲಿಕಲ್ಮಷದೂರ ।ಪ।

ಅಘವರ್ಜಿತ ಪನ್ನಗಶಯನನೆಂದು

ಬಗೆಯ ಮನದಿ ಕರಮುಗಿದನು ದೂರದಿ ।ಅ.ಪ।

ಶರಿಭಾಗದಿ ಮೆರೆವ ಜಟಮಕುಟ । ಚಿಕುರಾಳಿಯಿಂದ

ಪರಿಶೋಭಿಪ ಸುಂದರ ಲಲಾಟ । ಕಮಲಾಕ್ಷಗಳಲಿ

ಕರುಣಾರಸಭರಿತ ಶುಭನೋಟ ।ನಾಸಿಕ ಬಲು ಮಾಟ

ಸ್ಮರಲಾವಣ್ಯ ಧಿಕ್ಕರಿಸುವ ಸುಂದರ

ನರ ರೂಪಾನ್ವಿತ ಶರಧಿ ಗಂಭೀರನ –೧–

ಅಜಾನುಬಾಹುಗಳಂತಿ ಪ್ರಶಸ್ತ । ಸುರಚಾಪದಂತೆ

ರಾಜಿಪ ಧನುವ ಧರಿಸಿದ ಹಸ್ತ । ವಿಶಾಲ ವಕ್ಷಕೆ

ಈ ಜಗದೊಳಗುಪಮೇಯದೆತ್ತ । ದೋಷನಿರಸ್ತ

ಮೂಜಗದೊಳಗತಿ ಸೋಜಿಗನೆನಿಪ ಸು

ತೇಜದಿ ರಾಜಿಪ ರಾಜಕುಮಾರನ ।೨।

ಸುಂದರ ತ್ರಿವಣಿಗೊಪ್ಪುವ ಉದರ । ನೆರೆಗಂಭೀರ

ಚಂದದಿ ಶೋಭಿಪ ನಾಭಿಕುಹರ । ಚೀರಾಂಬರಧರ

ಬಂಧುರ ಕಟಿತಟ ಬಲು ರುಚಿರ । ನೋಳ್ಪರ ಚಿತ್ತಹರ

ಕುಂದಿಲ್ಲದ ಪದದ್ವಂದ್ವ ಸುಶೋಭಿತ

ಸುಂದರಾಂಗ ಶ್ರೀಕರಿಗಿರೀಶನ (ಕೀ ೩೬೬ ಸಂ.೨೭)

ವಾಲ್ಮೀಕಿ ರಾಮಾಯಣದಲ್ಲಿ ಬಂದಿರುವ ಮಾತುಗಳನ್ನೇ ಇಲ್ಲಿ ಅನುವಾದ ಮಾಡಿರುವ ಹಾಗೆ ರಚನೆಗೊಂಡ ಈ ಮೇಲಿನ ಕೀರ್ತನೆಗಳು ಬಹುಶಃ ಹರಿದಾಸರು ರಚಿಸಿರಬಹುದಾದ ಎರಡೇ ಕೀರ್ತನೆಗಳಿರಬಹುದು. ಹೀಗೆ ರಾಮ, ಲಕ್ಷ್ಮಣರನ್ನು ವರ್ಣಿಸಿ ಹೊಗಳಿ ತನ್ನ ಹೆಸರು ಸುಗ್ರೀವನ ವೃತ್ತಾಂತವನ್ನು ಅರುಹಿ ಸುಮ್ಮನಾಗುತ್ತಾನೆ. ಆಗ ರಾಮ, ಲಕ್ಷ್ಮಣನೆದುರಿಗೆ ಹನುಮಂತನ ವಕ್ಚಾತುರ್ಯವನ್ನು ಹೊಗಳಿದ ರೀತಿಯನ್ನು ಶ್ರೀಪಾದರಾಜರು ತಮ್ಮ 'ಮಧ್ವನಾಮ'ದಲ್ಲಿ ಹಾಡಿದ್ದಾರೆ.

ತರಣಿಗಭಿಮುಖವಾಗಿ ಶಬ್ಧ ಶಾಸ್ತ್ರವ ರಚಿಸಿ

ಉರವಣಿಸಿ ಹಿಂದುಮುಂದಾಗಿ ನಡೆದ

ಪರಮ ಪವಮಾನ ಸುತ ಉದಯಾಸ್ತ ಶೈಲಗಳ

ಭರದಿ ಮೈದಿದಗೀತಗುಪಮೆ ಉಂಟೆ ।೬। (ಕೀ ೯೩ ಸಂ.೧)

ಸೂರ್ಯಾಂತರ್ಗತ ನಾರಾಯಣನಲ್ಲಿ ಆಂಜನೇಯ ಶಬ್ದಶಾಸ್ತ್ರ ನವವ್ಯಾಕರಣವನ್ನು ಸೂರ್ಯನ ವಿರುದ್ಧ ದಿಕ್ಕಿನಲ್ಲಿ ಪಠಿಸಿದವ. ಇಂತಹ ಅದ್ಭುತ ಕಾರ್ಯ ಮಾಡಿರುವ ಹನುಮಂತನ ಅಸಾಮಾನ್ಯ ವ್ಯಕ್ತಿ.

ಭಗವಂತನ ಜ್ಞಾನ ತಿಳಿದು ಸಮಸ್ತ ಲೋಕಕ್ಕೂ ತಿಳಿಸುತ್ತಿರುವವನೀತ ಎಂದು ದಾಸರು ಹನುಮಂತನ ಜ್ಞಾನ, ಮಾತಿನ ಶೈಲಿಯನ್ನು ರಾಮ ಪ್ರಶಂಶಿಸಿದ ರೀತಿ ಬಣ್ಣಿಸಿದ್ದಾರೆ.

ಅಖಿಳ ವೇದಗಳ ಸಾರ ಪಠಿಸಿದನು ಮುನ್ನಲ್ಲಿ

ನಿಖಿಳ ವ್ಯಾಕರಣಗಳ ಇವ ಪೇಳಿದ

ಮುಖದಲ್ಲಿ ಕಿಂಚಿದಪಶಬ್ಧ ಇವನಿಗಿಲ್ಲೆಂದು

ಮುಖ್ಯಪ್ರಾಣನು ರಾಮನನುಕರಿಸಿದ ।೭। (ಕೀ ೯೩, ಸಂ.೧)

ನಾರಾಯಣನಿಂದ ಕಲಿತ ನವವ್ಯಾಕರಣವನ್ನು ಹನುಮ ನಾರಾಯಣನ ಅವತಾರವಾದ ಶ್ರೀರಾಮನಲ್ಲಿ ಭೇಟಿಯಾದಾಗ ಭಕ್ತಿಪೂರ್ವಕವಾಗಿ ಶ್ರೀರಾಮನ ಸಮ್ಮುಖದಲ್ಲಿ ಆಡಿದ ಮಾತುಗಳು ವ್ಯಾಕರಣಬದ್ಧವಾಗಿ ಸಾಧುವಾಗಿ ಸೊಗಸಾಗಿ ಇದ್ದುದನ್ನು ಕಂಡು ಶ್ರೀರಾಮ ಪ್ರಶಂಶಿಸಿದ ವಾದಿರಾಜರು, ಅಂಬಾಬಾಯಿಯವರು ಮೊದಲಾದ ಹರಿದಾಸರು ಹನುಮನನ್ನು 'ಮಂಜುಭಾಷಿಕ'ನೆಂದು ಕರೆದಿದ್ದಾರೆ. ಸೂರ್ಯಾಂತರ್ಗತ ನಾರಾಯಣನಿಂದ ವ್ಯಾಕರಣ ವಿದ್ಯೆಯನ್ನು ಕಲಿತ ಹನುಮ ತುಂಬ ಸುಂದರವಾಗಿ, ಶುದ್ಧವಾಗಿ ಮಾತನಾಡಬಲ್ಲವನು. ವಾಲ್ಮೀಕಿ ಹೇಳುವಂತೆ ಹನುಮಂತನ ಮಾತಿನಲ್ಲಿ ನಕಿಂಚಿತ ಅಪಶಬ್ಧತಹ' ಶ್ರೀಪಾದರಾಜರು ಹೇಳುವಂತೆ ಮುಖದಲ್ಲಿ ಕಿಂಚಿದಪಶಬ್ಧ ಇವಗಿಲ್ಲ. ಆದ್ದರಿಂದ ಅವನು ಮಂಜುಭಾಷಣ ಎನಿಸಿಕೊಂಡ

ಇದೇ ವಿಷಯವನ್ನು ಲಕ್ಷ್ಮೀನಾರಾಯಣದಾಸರು ತಮ್ಮದಿನ್ನೊಂದು ಕೀರ್ತನೆಯಲ್ಲಿ ರಾಮ, ಲಕ್ಷ್ಮಣೆದುರಿಗೆ ಹನುಮನ ಪ್ರಶಂಸೆ ಮಾಡಿರುವದನ್ನು ವಾಲ್ಮೀಕಿ ರಾಮಾಯಣದಂತೇ ಬಂದಿರುವುದನ್ನು ನೋಡಬಹುದು. ದಾಸರು ಹನುಮಂತನ ಮಾತಿನ ವೈಖರಿಯನ್ನು ರಾಮನ ಮೂಲಕ ಈ ರೀತಿ ಬಣ್ಣಿಸುತ್ತಾರೆ.

ಮಾತನಾಡಿಸೋ ತಮ್ಮ ಮೃದುವಚನದಿ ।ಪ।

ಈತನನು ನೀನೀಗ ಸ್ನೇಹಭಾವದಲಿ ।ಅ.ಪ।

ಕಪಿರಜ ಸುಗ್ರೀವ ಸಚಿವ ಶೇಖರದೀಶ

ವಿಪುಲಮತಿ ಸಂಯುತನು ವ್ಯವಹಾರ ಚತುರ

ಅಪಶಬ್ದ ವಿನಿತಾದರಿಲ್ಲವೀತನ ಮುಖದಿ

ಸುಪವಿತ್ರದಾಕಾರ ಶೋಭತಿ ಸುಲಕ್ಷಣನು ।೧।

ನಾಲ್ಕು ವೇದಾಧ್ಯಯ ಮಾಡಿದವನನಲ್ಲದೊಡೆ

ನಾಲಿಗೆ ಯೋಳೇರೀತಿ ನುಡಿಯಲಳವೆ

ವ್ಯಾಕರಣ ಶಾಸ್ತ್ರದಲಿ ಪಾಂಡಿತ್ಯದಿವಗಿನ್ನು

ಸಾಕಲ್ಯವಿಲ್ಲದೊಡೆ ವಾಕು ಈ ಪರಿಬಹುದೇ

ಮುಖನೇತ್ರಭ್ರೂಮುಖ್ಯ ಅಂಗಚೇಷ್ಟೆಗಳಿಲ್ಲ
ಸುಖ ಮಧ್ಯಸ್ಥಾಯಿಯಲಿ ಮತುಮಿತ್ರವು
ಅಕಳಂಕ ಶ್ರೀಕರಿಗಿರೀಶನ ಪದಕಿಂಕರನು
ಸಕಲಲಕ್ಷಣಯುಕ್ತನಿವನತುಳ ಶಕ್ತ ।೨। (ಕೀ ೩೬೬, ಸಂ.೨೭)

ಎಂದು ಹನುಮಂತನ ಗುಣಾತಿಶಯಗಳನ್ನು ಶ್ರೀರಾಮ, ಲಕ್ಷ್ಣಣಿಗೆ ಪರಿಚಯಿಸುತ್ತದೆ. ಈ ಪರಿ ಹನುಮಂತನ ಮಾತುಗಳನ್ನು ಮೆಚ್ಚಿದ ರಾಮ, ಮಾತಿನಲ್ಲಿ ಹನುಮನನ್ನು ಅನುಸರಿಸಲು ಹೇಳುತ್ತಾನೆ. ನಂತರ ಹನುಮನನ್ನನುಸರಿಸಿ ಸುಗ್ರೀವನೊಡನೆ ಸಖ್ಯ ಮಾಡಿಕೊಳ್ಳುವುದನ್ನು ಮುಂದೆ ಕಾಣಬಹುದು.

ಸುಗ್ರೀವ ಸಖ್ಯ ವಾಲಿವಧೆ ಪ್ರಸಂಗ:-

ಹನುಮಂತನ ಮೂಲಕ ಸುಗ್ರೀವ ವೃತ್ತಾಂತವನ್ನು ತಿಳಿದುಕೊಂಡ ರಾಮ, ಲಕ್ಷ್ಮಣನೊಡನೆ ಸುಗ್ರೀವನ ಬಳಿ ಬಂದು ಆತನಿಗೆರಗಿದ. ವಾಲಿಯ ವೃತ್ತಾಂತ ತಿಳಿದು ವಾಲಿಯನ್ನು ಸೋಲಿಸುವುದಾಗಿ ರಾಮ ತಿಳಿಸಿದಾಗ ಸುಗ್ರೀವನಿಗೆ ರಾಮನ ಬಲ, ಶೌರ್ಯದ ಬಗ್ಗೆ ಶಂಕೆ ಪರಿಹಾರಕ್ಕಾಗಿ ವಾಲಿ ವಧಿಸಿದ ದುಂದುಭೀ ಎಂಬ ದೈತ್ಯನ ಶರೀರವನ್ನು ದೂರ ಬಗೆಯಲು ತಿಳಿಸಿದಾಗ ರಾಮ ತನ್ನ ಹೆಬ್ಬೆರಳಿನಿಂದ ನೂರು ಯೋಜನ ದೂರದ ಸಮುದ್ರಕ್ಕೆ ಹಾರಿಸುತ್ತಾನೆ. ನಂತರ ವಾಲಿಯು ತನ್ನ ಬಲಪೂರ್ಣವಾಗಿ ಸಪ್ತಾಳವೃಕ್ಷಗಳ ಎಲೆಗಳನ್ನು ಅಲುಗಾಡಿಸಲು ಅಸಮರ್ಥನಾಗಿದ್ದ ಇವುಗಳಲ್ಲಿ ಒಂದನ್ನಾದರೂ ಛೇದಿಸಲು ಸುಗ್ರೀವ ರಾಮನಿಗೆ ತಿಳಿಸಿದಾಗ ರಾಮ ಒಂದೇ ಬಾಣದಿಂದ ೭ ತಾಳವೃಕ್ಷಗಳನ್ನು ಕೆಡಹುತ್ತಾನೆ. ನಂತರ ಸುಗ್ರೀವ ರಾಮನಲ್ಲಿ ಶರಣಾಗುತ್ತಾನೆ. ರಾಮ ವಾಲಿಯನ್ನು ಸೋಲಿಸುವುದಾಗಿಯೂ ಸುಗ್ರೀವ ರಾಮನಿಗೆ. ಸೀತಾನ್ವೇಷಣೆಗೆ ಸಹಾಯಕನಾಗುವುದಾಗಿಯೂ ಪವಿತ್ರ ಅಗ್ನಿಯ ಸಮ್ಮುಖದಲ್ಲಿ ಪರಸ್ಪರ ಸಖ್ಯ ಬೆಳೆಸಿಕೊಂಡು ನಂತರ ರಾಮ ವಾಲಿಯನ್ನು ಒಂದೇ ಬಾಣದಿಂದ ವಧಿಸುತ್ತಾನೆ.

ಹರಿದಾಸರು ವಾಲಿಯನ್ನು ಬಲಶಾಲಿ ಶೂರನೆಂತಲೂ ಹೊಗಳಿ ಆತನ ಅಹಂಕಾರವೆ ಆತನ ಪತನಕ್ಕೆ ಕಾರಣವಾಯಿತೆನ್ನುತ್ತಾ, ಮಗನ ಸಮನಾದ ತಮ್ಮನನ್ನು ಗೋಳಿಟ್ಟು ಆತನ ಹೆಂಡತಿ ರುಮೆ ವಾಲಿಗೆ ಮಗಳ ಸಮಾನಳು ಆಕೆಯೊಂದಿಗೆ ರಮಿಸಿದ ವಾಲಿಯನ್ನು ದುಷ್ಟನೆಂದು ಹರಿದಾಸರು ಆತನ ಉದಾಹರಣೆಯ ಮೂಲಕ ದುಷ್ಟ ಶಿಕ್ಷಕ ಶ್ರೀಹರಿ ಎಂದು ಪ್ರಾರ್ಥಿಸುತ್ತಾರೆ. ಶ್ರೀಹರಿಯ ಕರುಣೆ. ವತ್ಸಲಭಾವ, ಶರಣಾಗತ ರಕ್ಷಕನೆಂಬ ವಿಚಾರ ಬಂದಾಗಲೆಲ್ಲ ಸುಗ್ರೀವನ ವಿಚಾರ ಬಂದೇ ಬರುವುದನ್ನು ಹಲವಾರು ಕೀರ್ತನೆಗಳಲ್ಲಿ ಕಾಣಬಹುದು.

ಕಾಖಂಡಕಿ ಕೃಷ್ಣದಾಸರು ಶ್ರೀರಾಮ ನಾಮ ಸ್ಮರಣಾಶಕ್ತಿಯನ್ನು ಹಾಡುತ್ತಾ

ಸುಗ್ರೀವ ಬಂದು ಅಡಿಯ ಅಡಿಯಾಗಲೆಂದು

ಶೀಘ್ರದಿ ಶೀಳಿತರುವಾ ತರುವಾಯಲಿಂದು

ಅಗ್ರಜನೊತ್ತಿ ಅವನೀ ಅವನೀಯ ರಾಮಾ

ನುಗ್ರಹ ಮಾಡದರಿಯಾದರಿಯಾಗುವಾತ್ಮಾ (ಕೀ ೩೨೬, ಸಂ ೧೧/೧)

ರಾಮನಾಮ ನಂಬಿದ ಸುಗ್ರೀವನು ಜಯಶೀಲನಾದನೆಂದು ರಾಮನಾಮ ಮಹಿಮೆ ಹೊಗಳಿದ್ದಾರೆ. ಸರಗೂರು ವೆಂಕಟದಾಯವೆಂದೂ ಸಹ ರಾಮ ನಾಮ ಮಹಿಮೆಯಲ್ಲಿ ಈ ರೀತಿ ಹಾಡಿದ್ದಾರೆ

ಸೀತೆಯನರಸುತಲಿ ಕಬಂಧನ ಮಾತನು ಸರಿಸುತಲಿ

ವಾತನ ಮಗನೊಳು ಪ್ರೀತಿಯಿಟ್ಟು ಪುರುಹೂತನ

ಸುತನಂ ಘಾತಿಸಿ ದಾತನ-ರಾಮನ -೩- (ಕೀ ೬೪ ಸಂ೧೫)

ಈ ಮೇಲಿನ ನುಡಿಯಲ್ಲಿ "ವಾತನ ಮಗನೊಳು ಪ್ರೀತಿಯಿಟ್ಟು" ಎಂದರೆ ಹನುಮಂತನ ಮಾತಿನಂತೆ ವಾಲಿಯನ್ನು ವಧಿಸಿದಿ ಎಂದಿದ್ದು ಮಧ್ವ ಸಂಪ್ರದಾಯದ ಪ್ರಕಾರ ಹನುಮ-ಭೀಮರಿಗೆ ಬಹಳ ಪ್ರಾಶಸ್ತ್ಯವುಂಟು ಹನುಮನ ಕುರಿತು ಹೊಗಳಿಕೆ, ಆತನ ಶೌರ್ಯ ಸಾಹಸ ವರ್ಣನೆ ಮಾಡಬೇಕಾದ್ದಲ್ಲಿ ಹರಿದಾಸರು ಭಾವಾವೇಶವಾಗಿ ಹಾಡುತ್ತಾರೆ. ಸುಗ್ರೀವನ ವಿಚಾರ ಕೇವಲ ರಾಮನ ಮಹಿಮೆ, ಸಂಕ್ಷೇಪ ರಾಮಾಯಣದಲ್ಲಿ ಮಾತ್ರ ಬರದೆ ಹನುಮನ ಬಗ್ಗೆ ರಚಿತಗೊಂಡ ಕೀರ್ತನೆಗಳಲ್ಲೂ ಕಂಡುಬರುತ್ತದೆ

ಹೀಗೆಯೇ ಪುರಂದರದಾಸರು ಹನುಮನ ಮತವೆ ಹರಿಯ ಮತ ಎನ್ನುತ್ತ

ಹನುಮ ನಂಬಿದ ಸುಗ್ರೀವ ಗೆದ್ದ

ಹನುಮನ ನಂಬುದ ವಾಲಿಯು ಬಿದ್ದ -೧- (ಕೀ ೧೯೭ ಸಂ.೩/೧)

ಎಂದು ಹನುಮಂತನಿಗಿರುವ ಮಹತ್ವವನ್ನು ತಿಳಿಸುತ್ತಾರೆ

ತುಪಾಕಿವೆಂಕಟರಮಣಾಚಾರ್ಯರನಿಂದಾಸ್ತುತಿಯಲ್ಲಿ ಸುಗ್ರೀವನೊಂದಿಗೆ ಸಖ್ಯ ಮಾಡಿದ ರಾಮನ ಬಗ್ಗೆ ಹೀಗೆ ಹಾಡಿದ್ದಾರೆ

ಅಗ್ರಜ ಭಾರ್ಯಳನುಳುಪಿ ಕೊಲ್ಲಿಸಿದಂಥ

ಸುಗ್ರೀವನ ಕೂಡ ಸಖ್ಯವ ಬೆಳಸಿದಿ ।೪। (ಕೀ ೨೪, ಸಂ.೨೩)

ಎಂದಿದ್ದಾರೆ. ಗುರುಜಗನ್ನಾಥದಾಸರು ತಮ್ಮ ಸಂಕ್ಷೇಪ ರಾಮಾಯಣದಲ್ಲಿ ಕಿಷ್ಕಿಂದ ಕಾಂಡದ ಪ್ರಮೂಖ ಭಾಗವಾದ ಸುಗ್ರೀವ ಸಖ್ಯ, ವಾಲಿವಧೆಯನ್ನು ಕೇವಲ ೩ ನುಡಿಗಳಲ್ಲಿ ಹಾಡಿ ಮುಗಿಸಿದ್ದಾರೆ.

ದೇವಿಯ ನೆವ ಸುಗ್ರೀವನ ಸಖ್ಯವ

ತಾ ವಹಿಸಿದನು ರಾಮ ।೩೭

ಶೀಲ ಬಹುಶಾಲಿ ಎನಿಸಿಹ

ವಾಲಿಯ ಕೊಂದನು ರಾಮ ।೩೮।

ಥಟ್ಟನೆ ರವಿಜಗೆ ಪಟ್ಟವಗಟ್ಟೇ

ಧಿಟ್ಟ ಕಪಿಗಳ ನೆರಹಿದ ರಾಮ ।೫। (ಕೀ ೧೭೬, ಸಂ ೨೬)

ಇಲ್ಲಿ ದಾಸರು ರಾಮ ಸುಗ್ರೀವನೊಡನೆ ಸ್ನೇಹ ಬೆಳೆಸಿದ್ದು ಸೀತೆಯನರಸಲು ಎಂಬ ನಿಜ ಕಾರಣ ನೀಡಿದ್ದಾರೆ. ಬೇರೆ ದಾಸರೆಲ್ಲ ಶರಣಾಗತ ಸುಗ್ರೀವನಿಗೆ ಅಭಯನಿತ್ತ ರಾಮ' ಎಂದು ರಾಮನ ಕರುಣಾಭಾವ, ಶರಣಾಗತ ರಕ್ಷಣೆಯನ್ನು ಹೊಗಳುತ್ತಾರೆ. ಇಲ್ಲಿ ಗುರುಜಗನ್ನಾಥದಾಸರು ರಾಮ ತನ್ನ ಸ್ವಾರ್ಥ ಸಾಧನೆಗೆ ಕಪಿ ವೀರರೊಡನೆ ಸಖ್ಯ ಬೆಳೆಸಿದ ಎಂದಿದ್ದಾರೆ.

ಲಕ್ಷ್ಮೀನಾರಾಯಣದಾಸರು ಶ್ರೀರಾಮನು ಹೊಂದಿದ್ದ ದೀನ ದಯಾಳು, ವತ್ಸಲಭಾವವನ್ನು ಹೊಗಳುತ್ತಾ ವಾನರರೂಪಿ ಸುಗ್ರೀವನನ್ನು ಅಭಯಪ್ರದಾನವಿತ್ತುದ್ದನ್ನು ಈ ರೀತಿ ಹೊಗಳಿದ್ದಾರೆ.

ಪಶುಜಾತಿ ಸುಗ್ರೀವ ಮುಖರ ! ನೀ

ಹಸನಾಗಿ ಪೊರೆದದ್ದು ಕೇಳಿದವವರ ।೨। (ಕೀ ೨೨೩. ಸಂ.೨೭)

ಹಾಗೆಯೇ ತಮ್ಮದಿನ್ನೊಂದು ಕೀರ್ತನೆಯಲ್ಲಿ ರಾಮನ ಬಲಾಬಲವನ್ನು ಪರೀಕ್ಷಿಸಿದ ಸುಗ್ರೀವ ಹಾಗೂ ವಾಲಿ ವಧೆಯನ್ನು ಹೀಗೆ ನಿರೂಪಿಸಿದ್ದಾರೆ.

ಚರಣದಿಂದೊಗೆದು ದುಂದುಭಿಯ ಶರೀರವನ್ನು

ತರುಗಳೇಳನು ಒಂದೇ ಸರಳಿನಿಂದುರುಳಿಸಿ

ತರಣಿಸುತನ ಭಯ ಹರಿಸಿ ವಾಲಿಯ ಗರ್ವ

ಮುರಿಸಿ ವಾನರ ರಾಜ್ಯ ದೊರೆತನ ಸಖಗಿತ್ತೆ (ಕೀ ೨೪೬, ಸಂ೨೭) ಎಂದಿದ್ದಾರೆ.

ನಾರಾಯಣದಾಸರು ಸುಗ್ರೀವ ಸಖ್ಯ ವಾಲಿವಧೆ ಪ್ರಸಂಗವನ್ನು ಈ ರೀತಿ ಹಾಡಿದ್ದಾರೆ.

ವರಜಲಭ ಪಂಪಾ ಸರೋವರದ ತೀರದಲಿ

ಹರಿವರನು ಇರಲು ಕಂಡು

ತ್ವರೆಯಿಂದ ಸುಗ್ರೀವ ಸ್ನೇಹ ಮಾಡಿಯೆ ಸಪ್ತ

ತಾಳತರುಗಳ ತರಿದೆಯ್ಯ ಸ್ವಾಮಿ ।೬।

ಶರವೊಂದರಿಂ ವಾಲಿಯನು ಮಥಿಸಿ ಅಂಗದನ

ಕರುಣದಿಂ ಪರಿಪಾಲಿಸಿ

ವರಲಗ್ನದೊಳ್ ಪಟ್ಟಗಟ್ಟಿ ಸುಗ್ರೀವನಿಗೆ

ಪರಮಭಾಗ್ಯವನು ಕೊಟ್ಟು -೭- (ಕೀ೧೧, ಸಂ.೩೦)

ರಾಮ, ಸುಗ್ರೀವನೊಂದಿಗೆ ಸಖ್ಯ ಬೆಳೆಸಿ ವಾಲಿಯನ್ನು ವಧಿಸಿದ ನಂತರ ಸುಗ್ರೀವನಿಗೆ ರಾಜಪಟ್ಟಗಟ್ಟಿ ಅಂಗದನಿಗೆ ಯುವರಾಜ ಪಟ್ಟ ಕಟ್ಟಿಸಿದ ವಿಷಯ ಇಲ್ಲಿ ಪ್ರಸ್ತಾಪಿಸಿದ್ದಾರೆ.

ರಾಮನು ವಾಲಿಯನ್ನು ಮರದ ಮರೆಯಲ್ಲಿ ನಿಂತು ಧರ್ಮಿಷ್ಠನನ್ನು ಕೊಂದಿದ್ದು ಬಹಳ ದೊಡ್ಡ ವಿವಾದವಾಗಿದ್ದು. ಇದನ್ನು ವಾದಿರಾಜರು ತಮ್ಮ ಭ್ರಮಗೀತೆ ಎಂಬ ದೀರ್ಘಕೃತಿಯಲ್ಲಿ ರಾಮವಾಲಿಯನ್ನು ಕೊಂದದ್ದಕ್ಕೆ ಈ ರೀತಿ ಸಮರ್ಥನೆ ನೀಡುತ್ತಾರೆ.

ಬಲಿಯ ಬಿಲದೊಳಗಿಟ್ಟ ಕಪಿಗೆ ಬಾಣವ ತೊಟ್ಟ

------------------ ।೧।

ತನ್ನ ತಮ್ಮನ ವಧುವ ತಾನೆ ಮದದಿಂದ ಸೊಕ್ಕಿ

ಪುಣ್ಯ ಕರ್ಮವ ಬಿಟ್ಟು ಪಾಪಕಂಜದೆ ।೪। (ಕೀ ೩೪೨, ಸಂ೨)

ವಾಲ್ಮೀಕಿ ರಾಮಾಯಣದಂತೆ ರಾಮ ಇಲ್ಲಿ ವಾಲಿವಧೆಗೆ ಯಾವುದೇ ಧರ್ಮ, ಕರ್ಮ, ಯುದ್ಧ ನೀತಿ ನಿಯಮಗಳನ್ನು ಬೋಧಿಸದೆ ನೇರವಾಗಿ ಸ್ಪಷ್ಟವಾದ ಕಾರಣ ಈ ರೀತಿ ನೀಡುತ್ತಾನೆ. ತನ್ನ ತಮ್ಮ ಸುಗ್ರೀವನ ಹೆಂಡತಿ ರುಮೆ ವಾಲಿಗೆ ಮಗಳ ಸಮಾನಳು. ಇಂತಹ ಮಗಳ ಸಮಾನಳಾದ ರುಮೆಯೊಡನೆ ಸುಖಿಸಿ ರಮಿಸಿದ್ಧೆ ಪಾಪಕರ್ಮ. ಆದ್ದರಿಂದ ಧರ್ಮಪಾಲನೆಗೆ ರಾಮ ವಾಲಿಯನ್ನು ಕೊಲ್ಲುತ್ತಾನೆ.

ರಂಗೇಶ ವಿಠಲರು ರಾಮ ಬಲ ಪರಾಕ್ರಮ, ಶೌರ್ಯ ಸಾಹಸಗಳನ್ನು ಹೊಗಳುತ್ತ ರನ್ನ ರಾಮನಾವತಾರದಲ್ಲಿ ಆತ ಮಾಡಿದ ಸಾಹಸ, ಕೊಂದಂತಹ ಘಟಾನುಘಟಿಗಳ ಹೆಸರನ್ನು ಉಲ್ಲೇಖಿಸಿದ್ದಾರೆ. ಶಿವಧನುರ್ಭಂಗ, ವಾಲಿವಧೆ, ದಶಶಿರ, ಹನನ ಮೊದಲಾದ ವಿಷಯಗಳನ್ನೊಳಗೊಂಡ ಅದ್ಭುತ ಕೀರ್ತನೆಯಿದು.

ಸಾಲು ಶಿರನ ಕೀಟವೆಂದು

ಬಾಲದಲಿ ತಂದ ವೀರ

ವಾಲಿಯನೇಕ ಬಾಣದಲಿ

ಲೀಲೆಯಿಂದಲಿರಿದ ಜಾಣ ।೩। (ಕೀ೧೦೬, ಸಂ೨೭)

ವಾಲ್ಮೀಕಿ ರಾಮಾಯಣದಲ್ಲಿ ವಾಲಿಯು ರಾವಣನಿಗಿಂತ ಬಲಶಾಲಿ ಎಂದು ಹೇಳಲಾಗಿದೆ. ಆದರೆ ಆನಂದ ರಾಮಾಯಣದಲ್ಲಿ ವಾಲಿಯ ಪರಾಕ್ರಮವನ್ನು ಈ ರೀತಿ ವಿವರಿಸಲಾಗಿದೆ. ವಾಲಿಯು ರಾವಣನನ್ನು ಒಂದು ದೈತ್ಯ ಕೀಟವೆಂಬಂತೆ ತನ್ನ ಬಾಲದಲ್ಲಿ ಸುತ್ತಿ ಮಗನಾದ ಅಂಗದನಿಗೆ ಆಟಿಕೆಯನ್ನಾಗಿಸಿದ್ದ ಇದೇ ಅಂಶವನ್ನು ದಾಸರು ಇಲ್ಲಿ ಬಳಸಿಕೊಂಡು ವಾಲಿಯ ಪರಾಕ್ರಮ ವರ್ಣನೆ ಜೊತೆಗೆ ಅಂತಹ ಬಲವಂತನನ್ನು ರಾಮ ಒಂದೇ ಬಾಣದಿಂದ ಕೊಂದನೆಂದು ರಾಮನ ಅತುಲ ಬಲವನ್ನು ಪ್ರಶಂಶಿಸಿದ್ದಾರೆ.

ರಾಮನು ಮಾಡಿದ ಶಿಷ್ಟ ರಕ್ಷಕ ದುಷ್ಟಶಿಕ್ಷಣ ಕಾರ್ಯವನ್ನು ಹರಿದಾಸರು ಈ ಎರಡೂ ಪಾತ್ರಗಳ ಮುಖೇನ ಜನಸಾಮಾನ್ಯರಿಗೆ ನಿದರ್ಶನ ನೀಡುತ್ತಾರೆ.

ವಾಲಿಗೆ ನೀನಿತ್ತ ಜಾಳುಮತಿ ನೀಡದೆ

ಸುಗ್ರೀವನಿಗಿತ್ತ ಮೇಲುಮತಿ ನೀಡು ।೧। (ಕೀ ೧೬೦, ಸಂ೩೨)

ಹಾಗೆಯೇ ವಿಧಿ ವಿಲಾಸವು ಹೇಗೆ ಪರಾಕ್ರಮಿಯನ್ನು ಅಹಂಕಾರಿಯನ್ನಾಗಿ ಮಣ್ಣು ಮುಕ್ಕಿಸುತ್ತದೆಯೆಂತಲೂ

ಅಸಮ ವಾಲಿಯ ಬಲಕೆ ಮಸಿ ಮಣ್ಣು ಹಾಕಿಸಿತು

---------------------- ।೩। (ಕೀ ೫೪೩, ಸಂ೩೨)

ಎನ್ನುತ್ತ ಹರಿದಾಸರು, ವಾಲಿಯ ಪರಾಕ್ರಮ, ಸುಗ್ರೀವನ ಶರಣಾಗತಭಾವ, ಶ್ರೀರಾಮನ ಶರಣ ರಕ್ಷಕ ಗುಣ, ರಾಮನ ಪರಾಕ್ರಮವನ್ನು ಈ ಪ್ರಸಂಗದಲ್ಲಿ ಕಾಣಬಹುದಾಗಿದೆ.

ಹನುಮನ ಅವತಾರ ಹಿನ್ನೆಲೆ:-

ರಾಮ, ಸುಗ್ರೀವ ಸಖ್ಯವಾದ ನಂತರ ರಾಮ ವಾಲಿಯನ್ನು ಹತಗೊಳಿಸಿ ಸುಗ್ರೀವನನ್ನು ಕಿಷ್ಕಿಂದಾ ರಜ್ಯದ ರಾಜನನ್ನಾಗಿಸುತ್ತಾನೆ. ನಂತರ ಸುಗ್ರೀವ ತನ್ನ ವಾಗ್ದಾನದ ಪ್ರಕಾರ ಸೀತಾನ್ವೇಷಣೆಗೆ ಇಡೀ ವಾನರ ಸೈನ್ಯವನ್ನು ದಶದಿಕ್ಕುಗಳಿಗೆ ಅಟ್ಟುತ್ತಾನೆ. ಹೀಗೆ ದಕ್ಷಿಣದ ಕಡೆಗೆ ಹೊರಟ ಜಾಂಬವಂತ, ನೀಲ, ಹನುಮ, ಅಂಗದರ ನೇತೃತ್ವದ ವಾನರ ಸೇನೆಗೆ ಸಮುದ್ರ ಇದಿರಾಗುತ್ತದೆ ಅಲ್ಲಿಯೇ ಬೆಟ್ಟಗಳಲ್ಲಿ ವಾಸವಾಗಿದ್ದ ಸಂಪಾತಿಯು ಸೀತೆಯನ್ನು ದಂಕಾಧಿಪತಿ ರಾವಣ ಅಪಹರಿಸಿರುವುದಾಗಿ ಆಕೆ ಅಶೋಕವನದಲ್ಲಿರುವಂತೆ ಕಂಡೆನು ಎನ್ನುತ್ತಾನೆ. ಸಂಪಾತಿಯಿಂದ ವಿಷಯ ತಿಳಿದ ವಾನರರು ಸಮುದ್ರೋಲ್ಲಂಘನಕ್ಕೆ ಹುರಿದುಂಬಿಸುತ್ತಾನೆ. ಪುಂಜಿಕಸ್ಥಲೆ ಎಂಬ ಅಪ್ಸರಸಿ ವಾನರ ಜನ್ಮವನ್ನು ಪಡೆದು ಕೇಸರಿಯೆಂಬ ಕಪಿನಾಯಕನನ್ನು ಮದುವೆಯಾಗಿದ್ದು ಒಮ್ಮೆ ವನದಲ್ಲಿ ವಿಹರಿಸುತ್ತಿದ್ದ ಆಂಜನೇಯ ಸೌಂದರ್ಯಕ್ಕೆ ವಾಯುದೇವ ಮರುಳಾಗಿ ಇವರಿಬ್ಬರ ಔರಸ ಪುತ್ರನಾಗಿ ಹನುಮಂತ ಹುಟ್ಟಿದ. ಅಜಿಜನಾಪುತ್ರ ತನ್ನ ಬಾಲ್ಯದಲ್ಲೊಮ್ಮೆ ಉದಯಿಸುತ್ತಿದ್ದ ಬಾಲಸೂರ್ಯನನ್ನು ಹಣ್ಣೆಂದು ತಿನ್ನ ಬಯಸಿ ಅಂತರಿಕ್ಷಕ್ಕೆ ಹಾರಿದವ. ಇಂದ್ರನ ವಜ್ರಾಯುಧಕ್ಕೆ ಘಾತಿಕೊಂಡು ಎಡಕೆನ್ನೆ ಒಡದು ಹನುಮಂತನಾದ. "ವಾಯುದೇವರ ಔರಸ ಪುತ್ರನಾದ ನೀನು ವಾಯುವಿಗೆ ಸಮಾನ" ಎಂದು ಆತನನ್ನು ಪ್ರೋತ್ಸಾಹಿಸಿದಾಗ ಆಂಜನೇಯ ತನ್ನ ಮಹದ್ರೂಪವನ್ನು ತಾಳಿ ಸಮುದ್ರಲಂಘಿಸಲು ಸಿದ್ದನಾಗುತ್ತಾನೆ. ಹೀಗೆ ಕಿಷ್ಕಿಂದಾ ಕಾಂಡದ ಕೊನೆಯ ಎರಡು ಸರ್ಗಗಳು ಹನುಮನ ಅವತಾರ ವೃತ್ತಾಂತ ಮತ್ತು ಆತನ ಮಹದ್ರೂಪದ ವರ್ಣನೆಯಿಂದ ಕೂಡಿದೆ. ಹನುಮನ ಈ ಜನ್ಮವೃತ್ತಾಂತವನ್ನು ಎಲ್ಲಾ ಹರಿದಾಸರು ಹಾಡಿದ್ದಾರೆ. ಸುಂದರಕಾಂಡದಲ್ಲಿ ವರ್ಣಿತವಾಗಿರುವ ಹನುಮನ ಪರಾಕ್ರಮಗಳನ್ನು ವರ್ಣಿಸುವಾಗ ಆತಮನ ಜನ್ಮ ವೃತ್ತಾಂತವನ್ನು ಒಂದು ನುಡಿ ಒಂದು ಪಾದದಲ್ಲಿಯಾದರೂ ಹಾಡಿರುವುದನ್ನು ಕಾಣಬಹುದು.

ಶ್ರೀಪಾದರಾಜರುಹನುಮನಜನ್ಮವೃತ್ತಾಂತವನ್ನು ಈ ರೀತಿ ತಿಳಿಸಿದ್ದಾರೆ.

ತ್ರೇತೆಯಲಿ ರಘುಪತಿಯ ಸೇವೆ ಮಾಡುವೆನೆಂದು

ವಾತಸುತ ಹನುಮಂತನೆಂದೆನಿಸಿದ

ಪೋತ ಭಾವದಿ ತರಣಿ ಬಿಂಬಕ್ಕೆ ಲಂಘಿಸಿದ

ಈತಗೆಣೆಯಾರ್‍ರು ಮೂರ್ಲೋಕದೊಳಗೆ ।೫। (ಕೀ ೯೩, ಸಂ.೧)

ಇಲ್ಲಿ ಹನುಮನ ಅವತಾರವಾದದ್ದೇ ರಾಮಸೇವೆಗೆಂದು ಬಣ್ಣಿಸಿದ್ದಾರೆ. ಹೆಳವನ ಕಟ್ಟೆ ಗಿರಿಯಮ್ಮ.

ಈತ ಅಂಜನೆಸುತನು ಭೀಮರಾಯನು ।ಪ।

ಪುಟ್ಟಿದಾಗಲೆ ಗಗನಮಂಡಲವನ್ನು ಮುಟ್ಟಿ ರವಿಯನು ತುಡುಕಿ

ಇಟ್ಟ ಕೃಪ ಕುಂಡಲವನ್ನು ತೊಟ್ಟು ಮೆರೆವಂಥ ದಿಟ್ಟ ಹನುಮರಾಯನು ।೧। (ಕೀ ೨೬, ಸಂ.೮/೫_

ಅಂಜನೆಯ ಮಗನಾಗಿ ಜನಿಸಿದಾಗಲೆ ಸೂರ್ಯನನ್ನು ಹಣ್ಣೆಂದು ಭಾವಿಸಿ ಆರಿದ ವಿಷಯ ಮೇಲಿನ ಕೀರ್ತನೆಯಲ್ಲಿದೆ ಆದರೆ ಹನುಮಂತ ತನ್ನ ಬಾಲ್ಯದಲ್ಲಿ ಈ ಸಾಹಸ ಮಾಡಿದ್ದಾನೆಯೇ ಹೊರತು ಶೈಶಾವಸ್ಥೆಯಲ್ಲಲ್ಲ. ಕದರುಂಡಲಗಿ ಹನುಮಯ್ಯನವರು ಹನುಮನ ಜನ್ಮವೃತ್ತಾಂತ ಆತನ ಪರಾಕ್ರಮವನ್ನು ಈ ರೀತಿ ಹಾಡಿದ್ದಾರೆ.

ಅಂಜನಿಯ ಉದರದಿಂದ ಪುಟ್ಟಿಕಾರ್ಭಟಿಸುತಲಿ

ಕಂಜಮಿತ್ರರಿಗೆ ಹಾರ್‍ದೆ ಧೀರಾವಾಯುಕುಮಾರಾ

ರಣರಂಗಧೀರ ಕದನಕಂಠೀರಾ

ದಿನಮಣಿಯ ಪಿಡಿದು ನುಂಗುವೆನೆಂದೂ ಸಮಯದೋಳ್

ಬರಲು ದೇವತೆ ನಿಕರಗಳೆಲ್ಲ ಬೆದರಿಸಿದಿ ಎಲ್ಲಾ

ಭಾಪು ಭಲ್ಲ ಭಲ್ಲ ಭಾರತೀಯನಲ್ಲ (ಕೀ ೧೦೧, ಸಂ.೨೧/೧)

ದಾಸರುಹನುಮಂತರ ಜನ್ಮವೃತ್ತಾಂತವನ್ನು, ಆತನ ವೀರತನ, ಶೌರ್ಯವನ್ನು ಬಹಳ ಸಂಕ್ಷೇಪವಾಗಿ ಹಾಡಿದ್ದಾರೆ.

ಒಟ್ಟಿನಲ್ಲಿ ದಾಸರ ಕಲ್ಪನಾ ಭಾಷಾಕೌಶಲ್ಯವನ್ನು ಇವರು ರಚಿಸಿರುವ ಕೀರ್ತನೆಗಳ ಮೂಲಕ ಅರಿಯಬಹುದು. ಶೂರ್ಪಣಖಿಯ ವೃತ್ತಾಂವನ್ನೇ ಸಂಪೂರ್ಣವಾಗಿ ಬದಲಿಸಿ ಶ್ರೀಹರಿಯ ಕರುಣಾಭಾವ ಮೆರೆದಿದ್ದಾರೆ. ವಾಲ್ಮೀಕಿ ರಾಮಾಯಣದಲ್ಲಿಲ್ಲದ ಹಲವಾರು ಅಂಶಗಳನ್ನು ಹರಿದಾಸರು ತಮ್ಮ ಕಲ್ಪನೆಯ ಮೂಲಕ ಸೇರಿಸಿದ್ದಾರೆ. ದೇವರನ್ನು ಸಾಮಾನ್ಯ ಮನುಷ್ಯರ ಸ್ಥಿತಿಗೂ ಸರ್ವಶಕ್ತ, ಸರ್ವವ್ಯಾಪಿ ಹಂತಕ್ಕೂ ನಿಲ್ಲಿಸುವಲ್ಲಿ ಹರಿದಾಸರು ಶಕ್ತರಾಗಿದ್ದಾರೆ.

ಅಡಿಟಿಪ್ಪಣಿ

೧. ಶ್ರೀಮದ್ರಾಮಾಯಣ ಸಾರ ಮತ್ತು ಪಾತ್ರ ಚಿತ್ರಣ (ಅಧ್ಯಾಯ-೫) : ಶ್ರೀ ವಿಶ್ವೇಶತೀರ್ಥ ಶ್ರೀಪಾದರು. ಪುಟ-೪

೨. ಮಹಾಭಾರತ ತಾತ್ಪರ್ಯ ನಿರ್ಣಯ (ಅಧ್ಯಾಯ೧-೯): (ಅನು) ಪ್ರೊ.ವ್ಯಾಸನಕೆರೆ ಪ್ರಭಂಜನಾಚಾರ್ಯ ಅಧ್ಯಾಯ ೫ ಶ್ಲೋಕ ೪೪ ಮತ್ತು ೪೫. ಪುಟ-೪೨೨ರಿಂದ೪೨೩

೩. ಮಹಾಭಾರತ ತಾತ್ಪರ್ಯ ನಿರ್ಣಯ (ಅಧ್ಯಾಯ೧-೯): (ಅನು) ಪ್ರೊ.ವ್ಯಾಸನಕೆರೆ ಪ್ರಭಂಜನಾಚಾರ್ಯ, ಪುಟ-೨೮೨

೪. ಶ್ರೀಮದ್ರಾಮಾಯಣ ಸಾರ ಮತ್ತು ಪಾತ್ರ ಚಿತ್ರಣ : ಶ್ರೀ ವಿಶ್ವೇಶತೀರ್ಥ ಶ್ರೀಪಾದರು

೫. ಶ್ರೀಮದ್ವಾಲ್ಮೀಕಿ ರಾಮಾಯಣ (ಸಂಪುಟ ೧-೮) : (ಅನು) ರಂಗನಾಥಶರ್ಮ. ಎನ್. ಬಾಲಕಾಂಡ ಸರ್ಗ

ಅಧ್ಯಾಯ –೫

ಸುಂದರಕಾಂಡ, ಯುದ್ಧಕಾಂಡ ಮತ್ತು ಉತ್ತರಕಾಂಡದ ಪ್ರಸಂಗಗಳು

ಸುಂದರಕಾಂಡ :–

ಹನುಮನ ಸುಂದರ ಕತೆಯೇ ಸುಂದರಕಾಂಡ. ಲೋಕೈಕ ಸುಂದರ ಸೀತಾರಾಮರ ಸಮಾಗಮಕ್ಕೆ ಮಾಡಿದ ಸುಂದರ ಹನುಮನ ಲೀಲಾವೈಭವವೇ ಇಲ್ಲಿಯ ಸುಂದರಕಾಂಡ. ಈ ಕಾಂಡದಲ್ಲಿ ಹನುಮನ ಕೌಶಲ, ಬಲ, ಧೈರ್ಯ. ಪಾಂಡಿತ್ಯ ಮೊದಲ ಸದ್ಗುಣಗಳು ಕಾಂಡದುದ್ದಕ್ಕೂ ಎದ್ದುಕಾಣುತ್ತದೆ. ರಾವಣನದ ಮುಂದೆ ಆಡಿದ ಆದರ್ಶಪ್ರಾಯದ ಮಾತುಗಳೆಂದರೆ "ನಾನು ಶ್ರೀರಾಮನ ದಾಸ ಶೌರ್ಯವೆಂದರೆ ರಾವಣನ ಮೂರನೇ ಒಂದು ಭಾಗದ ಸೈನ್ಯವನ್ನು ನಾಶಗೊಳಿಸಿ, ರಾವಣನನ್ನು ಹಿಂಸಿಸಿ ವಿಭೀಷಣನನ್ನು ಗೌರವಿಸಿದ್ದು. ಈ ಸುಂದರಕಾಂಡದ ಪ್ರತಿಯೊಂದು ಘಟನೆಗಳನ್ನು ಹರಿದಾಸರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದು. ಹನುಮ–ಭೀಮ–ಮಧ್ವ ಈ ಮೂರು ಅವತಾರಗಳ ಮಹಿಮೆ ಸಾರುವ ಹರಿದಾಸರ ಹಾಡುಗಳಲ್ಲಿ ಅಗಾಧ ಶಬ್ದಸಂಪತ್ತನ್ನು ಕಾಣಬಹುದು. ಸೀತೆಗುಂಗುರ ಕೊಟ್ಟ ಲಂಕಾದಹಿಸಿದ ಹನುಮನ ಬಗ್ಗೆಯಾಗಲೀ ಪರಾಕ್ರಮ ಕುರಿತು ಮಾಡಿದ ಎಲ್ಲಾ ಕಥಾನಕಗಳನ್ನು ಹರಿದಾಸರು ಬಳಿಸಿದ ಪದ ಲಾಲಿತ್ಯ ಗಮನಿಸಿದರೆ ಅವರ ಕಾವ್ಯ ಪ್ರೌಢಿಮೆಗೆ ದಿಗ್ಭ್ರಮೆಯಾಗುತ್ತದೆ.

ಇಲ್ಲಿ ಮೊದಲಿಗೆ ದಾಸರು ಸಂಕ್ಷಿಪ್ತವಾಗಿ ಹಾಡಿರುವ ಕೀರ್ತನ ಭಾಗಗಳನ್ನು ಅವಲೋಕಿಸಿದ ಮೇಲೆ ಸುಂದರಕಾಂಡದಲ್ಲಿ ಹನುಮ ಮಾಡಿರುವ ಪ್ರತಿಯೊಂದು ಘಟನೆಗಳನ್ನು ಒಂದೊಂದಾಗಿ ವಿಶ್ಲೇಷಿಸಲಾಗಿದೆ.

ವಾದಿರಾಜರು ತಮ್ಮ ಕೀರ್ತನೆಯೊಂದರಲ್ಲಿ ಲಂಕಾದಹನ, ಸೀತಾದೇವಿಗೆ ಉಂಗುರ ಪ್ರದಾನ ಮತ್ತು ರಾಮನಿಗೆ ಸೀತೆಯ ಕುಶಲವಾರ್ತೆಯನ್ನು ತಿಳಿಸಿದ ವಿಷಯವನ್ನು ಸಂಕ್ಷೇಪವಾಗಿ

ರಾಮಸೇವಕನಾಗಿ ರಾವಣನ ಪುರವ ನಿ
ರ್ಧೂಮ ಮಾಡಿದ್ಯೋ ನಿಮಿಷದೊಳಗೆ
ಭೂಮಿ ಪುತ್ರಿಗೆ ಮುದ್ರೆಯುಂಗುರವನ್ನಿತ್ತು
ಪ್ರೇಮ ಕುಶಲವ ರಾಮಪಾದಕರ್ಪಿಸಿದೆ (ಕೀ೧೩೪, ಸಂ.೨)

ಇಲ್ಲಿ ದಾಸರ ಸಂಕ್ಷೇಪ ಸಾಮರ್ಥ್ಯ ಮತ್ತು ಅವರ ಭಾಷಾ ವೈಖರಿಯನ್ನು ಅರಿಯಬಹುದು. ಹೀಗೆ ಇಡೀ ಸುಂದರಕಾಂಡವನ್ನು ಕೇವಲ ಒಂದು ಪಾದ. ಒಂದೆರಡರು ನುಡಿಗಳಲ್ಲಿ ವರ್ಣಿಸುವುದನ್ನು ಕಾಣಬಹುದು. ಹಾಗೆಯೆ ಕೆಲವು ಕೀರ್ತನಕಾರರು ಬಹುದೀರ್ಘವಾಗಿ ಬಹಳ ವರ್ಣನಾತ್ಮಕವಾಗಿ ವಾಲ್ಮೀಕಿ ರಾಮಾಯಣದ ಸುಂದರಕಾಂಡದಲ್ಲಿರುವ ಪ್ರತಿಯೊಂದು ಅಂಶದ ಜೊತೆಗೆ ಇನ್ನಿತರ ರಾಮಾಯಣದ

ಅಂಶಗಳನ್ನೊಳಗೊಂಡ ವಿಷಯ ಪ್ರಸ್ತಾಪಿಸಿದರೂ ತಮ್ಮ ಸ್ವಕಲ್ಪಿತ ವಿಷಯಗಳನ್ನು ಹಾಡಿರುವುದನ್ನು ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

ಲಂಕೆಯಲ್ಲಿ ಹನುಮನಿಂದ ಸೀತಾನ್ವೇಷಣೆ

ಸಮುದ್ರವನ್ನು ಲಂಘಿಸಿ ಲಂಕಾಪಟ್ಟಣವನ್ನು ಪ್ರವೇಶಿಸಿದ ಹನುಮ ಸೀತೆಯನ್ನು ಅನ್ವೇಷಿಸಿದ ಬಗೆಯನ್ನು ಹರಿದಾಸರು ಈ ರೀತಿ ಹಾಡಿದಾರೆ. ವಾದಿರಾಜರು ತಮ್ಮ 'ಅವತಾರತ್ರಯ ಮಧ್ವಸುವ್ವಾಲಿ' ಎಂಬ ದೀರ್ಘ ಕೀರ್ತನೆಯಲ್ಲಿ ಹನುಮ ಸೀತಾನ್ವೇಷಣೆ ಹೊರಟ ಪ್ರಸಂಗವನ್ನು ಆತ ಲಂಕಪಟ್ಟಣದ ಮನೆಗಳಲ್ಲಿ ಹುಡುಕಿದ ಬಗೆ ಹೀಗಿದೆ.

ಮುದ್ರೆಯನ್ನು ಕೊಂಡು ಸಮುದ್ರವನ್ನೆ ದಾಟ ಹನುಮ
ಶೀಘ್ರದಿಂದ ಲಂಕಾಪಟ್ಟಣವ ಹೊಕ್ಕನು
ಮಾರ್ಜಾಲ ರೂಪದಿಂದ ಮನೆ ಮನೆ ಹುಡುಕುತಿರಲು
ಸೀತೆಯಿದ್ದ ಸ್ಥಳವ ಎಲ್ಲ ಹುಡುಕುತ್ತಿದ್ದನು (ಕೀ ೩೪೧, ಸಂ.೨)

ಗುರುಜಗನ್ನಾಥದಾಸರು ಈ ಪ್ರಸಂಗವನ್ನೇ ಹೀಗೆ ಹಾಡಿದ್ದಾರೆ.

ವನಗಿರಿ ದುರ್ಗದಿ ವನಜಾಕ್ಷಿಯನು
ಮನದಣಿ ಪುಡಿಕಿದ ರಾಮ
ಧಾರುಣಿ ತನಯಳ ಸಾರುವೆನೆನುತ
ಊರಲಿ ಪುಡುಕಿದ ರಾಮ
ಓಣಿಯೊಳು ತರಕ್ಷೋಣಿತನಯಳಾ
ಕಾಣದೆ ತಿರುಗಿದ ರಾಮ (ಕೀ.೧೭೬, ಸಂ.೨೬)

ಹೀಗೆ ಸೀತೆಯನ್ನು ಹುಡುಕುತ್ತ ರಾವಣನರಮನೆಯಲ್ಲಿ ಆತನ ಶಯ್ಯಾಗೃಹದಲ್ಲಿದ್ದ ರಾಕ್ಷಸ್ತ್ರೀಯರನ್ನು ಸೀತೆಯೆಂದು ಭ್ರಮಿಸಿ ಅವರಲ್ಲಿ ರಾಮನ್ಹೇಳಿದ್ದ ಆಂಗಿಕ ಕುರೂಹುಗಳನ್ನು ನೋಡಿ ಪರೀಕ್ಷಿಸಿದ ರೀತಿ ವಾದಿರಾಜರಲ್ಲಿ ಹೀಗೆ ಬಂದಿದೆ.

ಅಂತಃಪುರದ ಮನೆಯೊಳಗೆ ನಿಂತು ನೋಡಿದ ಹನುಮಂತ
ಮಂಚದಲ್ಲಿ ಮಂಡೋದರಿ ಮಲಗಿದ್ದಳು.
ಸೀತೆ ಎಂದು ಮನದಲ್ಲಿ ತಿಳಿದು ಬಹಳ ಕೋಪದಿಂದ ಹನುಮ
ಕಾಗೆರೇಖೆ ಕೋರೆದಾಡೆ ಅಸುರಿಯ ಕಂಡ
ತಾಯಿ ಜಾನಕಿಗೆ ಪಾದದಲ್ಲಿ ಪದ್ಮರೇಖೆ ತಾಯಿ
ತಾಯಿ ಎಂದು ಹನುಮ ವನಕೆ ತೆರಳಿದ (ಕೀ೩೪೧, ಸಂ.೨)

ಹೀಗೆ ವಾದಿರಾಜರು ಗುರುಜಗನ್ನಾಥದಾಸರು ಬಹಳ ಸೊಗಸಾಗಿ ಹನುಮನ ಸೀತಾನ್ವೇಷಣಕಾರ್ಯವನ್ನು ಬಣ್ಣಿಸಿದ್ದಾರೆ.

ಸೀತಾ-ರಾವಣ ಸಂವಾದ

ಅಶೋಕವನದಲ್ಲಿ ಸೀತೆಯನ್ನು ರಾಕ್ಷಸಿಯರ ಕಣ್ಗಾವಲಲ್ಲಿ ಬಂಧನದಲ್ಲಿಟ್ಟಿದ್ದ ರಾವಣ ಸೀತೆಯ ಬಳಿ ಬಂದು ತನ್ನ ವಶವಾಗುವಂತೆ ನಾನಾ ಬಗೆಯ ಆಶೆ ತೋರಿಸುತ್ತಾನೆ. ಸುಖಸುಪ್ಪತ್ತಿಗೆ ಭೋಗ ಜೀವನವನ್ನು ತನ್ನ ಜೊತೆ ಸುಖಿಸುವಂತೆ ಸೀತೆಗೆ ನಾನಾ ಪರಿಯಲ್ಲಿ ಬಿನ್ನಪಿಸುತ್ತಾನೆ. ಆಗ ಸೀತೆಯು ಹುಲ್ಲುಕಡ್ಡಿಯನ್ನು ಮುಂದಿಟ್ಟು ರಾವಣನಿಗೆ ಪ್ರತ್ಯುತ್ತರ ನೀಡುತ್ತಾಳೆ. ತನ್ನ ಏಕಪತಿವ್ರತ ನಿಯಮದ ದೃಢನಿರ್ಧಾರ ರಾವಣನ ಮುಂದಿಡುತ್ತಾಳೆ. ಈ ಪ್ರಸಂಗವನ್ನು ವಾದಿರಾಜರು ಬಹಳ ದೀರ್ಘವಾಗಿ ಈ ರೀತಿ ವಿವರಿಸಿದ್ದಾರೆ. ರಾವಣನು ಅಶೋಕವನದಲ್ಲಿ ತನ್ನ ರಾಜವೈಭವದೊಂದಿಗೆ ಸೀತೆಯ ಬಳಿ ಬಂದ ವರ್ಣನೆ ಈ ಪ್ರಕಾರವಿದೆ.

ಹತ್ತು ತಲೆ ರಾವಣ ಮುತ್ತಿನ ಮಗುಟವನೆ ಇಟ್ಟು
ರತ್ನ ಪ್ರಭೆಯಿಂದ ಅಸುರ ಇಳಿದು ಬಂದು ।೨೩।

ವಿಸ್ತಾರದ ಮುತ್ತಿನ ಛತ್ತರಿಗೆ ಹಿಡಿದುಕೊಂಡು
ಸೀತೆಯಿದ್ದ ವನಕೆ ಬಂದು ಕಾಡುತ್ತಿದ್ದನು ।೨೪। (ಕೀ ೩೪೧ ಸಂ.೨)

ಲಕ್ಷ್ಮೀ ಸ್ವರೂಪಳಾದ ಸೀತೆಗೆ ಧನಲಾಲಸೆಯನ್ನು ತೋರಿಸಿದ ಬಗೆ ಭೂಮಿ ಜಾತೆಗೆ ಭೂಮಿ ಸಾಮ್ರಾಜ್ಯ ಕೊಡುವೆನೆಂದು ಆಸೆ ತೋರಿಸಿದ ಬಗೆ ಹೀಗಿದೆ.

ಹಿಂಗ ನೋಡು ಜಾನಕಿ ಭೂಮಿ ಸಾಮ್ರಾಜ್ಯ ಕೊಡುವೆ
ಲಂಕಾಲಕ್ಷುಮಿ ನಿನಗೆ ಕೊಡುವೆನೆಂದನು ।೨೫।

ಆರು ಕಾಲಿನ ಮಂಚಕ್ಕೆ ಹವಳದ ತಲೆದಿಂಬು
ಒರಗು ಬಾರಾ ಸೀತೆ ಎಂದು ಕರೆಯುತ್ತಿದ್ದನು ।೨೭।

ಹತ್ತು ಕಾಲಿನ ಮಂಚಕ್ಕೆ ಮುತ್ತಿನ ತಲೆದಿಂಬು
ಒಪ್ಪು ಬಾರ ಸೀತೆ ಎಂದು ಕರೆಯುತ್ತಿದ್ದನು ।೨೮।

ರಾವಣನ ಈ ಲೋಭ ಲಾಲಸೆಯ ಮಾತುಗಳನ್ನು ಕೇಳಿ ದಿಟ್ಟ ಮಹಿಳೆಯಂತೆ ದಿಟ್ಟ ಉತ್ತರಗಳನ್ನು ಕೊಟ್ಟ ಸೀತೆಯನ್ನಿಲ್ಲಿ ಕಾಣಬಹುದು.

ಆರು ಕಾಲಿನ ಮಂಚಕ್ಕೆ ಉರಿಯ ಕೆಂಡವನ್ನಚ್ಚು
ಒರಗುವೆನು ರಾಮರಾ ತೋಳಿಗೆಂದಳು ।೨೯।

ಹತ್ತು ಕಾಲಿನ ಮಂಚಕ್ಕೆ ಕಿಚ್ಚು ಕೆಂಡವನ್ನಚ್ಚು

ಒಪ್ಪುವೆನು ರಾಮರಾ ತೋಳಿಗೆಂದಳು ೩೦।

ಸೀತೆಯ ಈ ದೃಢ ನಿರ್ಧಾರದ ಮಾತುಗಳನ್ನು ಕೇಳಿಯೂ ಸೋತದ ರಾವಣ ಮತ್ತೆ ಮುಂದುವರಿದು

ಮಂಡೋದರಿ ಕೈಯಿಂದ ಮಂಡೆಯನ್ನಿಕ್ಕಿಸುವೆ
ದುಂಡುಮಲ್ಲಿಗೆ ಮುಡಿಸಿ ಮಡಿಚೆಲೆಯ ಕೊಡಿಸುವೆ ೩೧।
ಪಾವುಡವನ್ಹಾಸೋರು ಚಾಮರವ ಬೀಸೋರು
ನಾರೇರ ಪನ್ನೀರು ಓಡುದು ಕಾವರು ೩೨।
ಸುತ್ತಲಿದ್ದ ತ್ರಿಜಟೇರು ಮಿತ್ರರೆಲ್ಲ ಒಂದಾಗಿ
ಸೀತೆಯು ಒಂದು ಮಾಡಿಕೊಡಿರಿ ಎಂದನು ೩೩। (ಕೀ ೩೪೧, ಸಂ೨)

ಇಲ್ಲಿ ಸೀತಾ ರಾವಣನ ಸಂವಾದ ಬಹಳ ಸೊಗಸಾಗಿ ಮೂಡಿಬಂದಿದೆ.

ಸೀತಾ ಹನುಮ ಸಂವಾದ

ಸೀತೆಯನ್ನು ಅಶೋಕವನದಲ್ಲಿ ಕಂಡ ಹನುಮ ಆಕೆಯೊಡನೆ ಮಾತನಾಡಿಸುವುದರ ಯುಕ್ತಾಯುಕ್ತತೆಗಳನ್ನು ಆಲೋಚಿಸಿ ತೀರ್ಮಾನಕ್ಕೆ ಬಂದು ರಾಮನ ಅವಯವಲಕ್ಷಣಗಳನ್ನು ವರ್ಣಿಸಿ ಪೂರ್ವವೃತ್ತಾಂತವನ್ನು ಹಾಡುತ್ತಾನೆ. ಸೀತೆ ರಾಮನ ಬಗೆಗಿನ ಪ್ರಶಂಸನೀಯ ಮಾತನ್ನು ಕೇಳಿ ಆಶ್ಚರ್ಯಗೊಂಡು ವಾನರರೂಪಿ ಹನುಮನನ್ನು ನೋಡಿ ಮೊದಲು ಭಯಗೊಂಡು ಆತನ ರಾಮನೊಡನೆ ಆದ ಸಖ್ಯವನ್ನರಿತು ರಾಮನ ಮುದ್ರಿಕೆಯುಂಗುರವನ್ನು ಹನುಮ ಸೀತೆಗಿತ್ತನು. ಆಗ ಸೀತೆ ಹನುಮನ ಪ್ರತಿ ನಿಸ್ಸಂಶಯಳಾಗಿ ತನ್ನ ಅಳಲನ್ನು ತೋಡಿಕೊಂಡು ರಾಮ-ಲಕ್ಷ್ಮಣರ ಕುಶಲವಾರ್ತೆ ತಿಳಿಯುತ್ತಾಳೆ. ಹನುಮನಿಗೆ ರಾಮ ತನ್ನನ್ನು ಗುರುತಿಸಲೆಂದು ಕಾಕಾಸುರ ವಧೆ ವೃತ್ತಾಂತ ಮತ್ತು ಚೂಡಾಮಣಿ ಪ್ರದಾನ ಮಾಡುತ್ತಾಳೆ. ಹನುಮನು ಮಾಡಿದ ಸೀತಾದರ್ಶನ ಮತ್ತು ಆಕೆಯೊಂದಿಗಿನ ಸಂವಾದವನ್ನು ಹರಿದಾಸರು ಈ ಕೆಳಗಿನ ರೀತಿ ಹಾಡಿದ್ದಾರೆ.

ಸೀತೆಗೆ ರಾಮನ ಕುರುಹಾಗಿ ಉಂಗುರವನ್ನು ನೀಡಿದ ಹನುಮನನ್ನು ಶ್ರೀರಾಮನ ಕುಶಲವಾರ್ತೆಯನ್ನು ಕೇಳಿದ್ದ ವಿಚಾರವನ್ನು ವಾದಿರಾಜರು ಹೀಗೆ ನಿರೂಪಿಸಿದ್ದಾರೆ.

ಏನಯ್ಯ ಹನುಮಂತ ಶ್ರೀರಾಮರು ಕ್ಷೇಮವೇ
ಪ್ರೇಮದಿಂದ ಎನ್ನ ಬಹಳ ನೆನೆಯುತಿಪ್ಪರೇ

ಸೀತೆಯ ಈ ಪ್ರಶ್ನೆಗೆ ಮಂಜುಳ ಭಾಷಿಕನಾದ ಹನುಮಂತನ ಉತ್ತರ

ಹವಳದ ಕುಡಿಯಂತೆ ಹೊಳೆಯುತಿಪ್ಪೊ ರಾಮರು ತಾಯಿ
ನಿಮ್ಮನ್ಹೊರತಾಗಿ ಅಯೋಧ್ಯೆ ಬಲ್ಲರು
ತಾಯಿ ನಿಮ್ಮನ್ಹೊರತಾಗಿ ಕಂಗಳಿಗೆ ನಿದ್ರೆಯಿಲ್ಲ
ಅಯೋಧ್ಯಾ ಪಟ್ಟಣ ನಮಗೆ ಅಡವಿ ಎಂಜೋರು (ಕೀ ೩೪೧ ಸಂ೨)

ಅಶೋಕವನದಲ್ಲಿ ಸೀತೆಯ ದುರ್ವ್ಯವಸ್ಥೆಯನ್ನು ಕಂಡು ತನ್ನ ಹೆಗಲಮೇಲೆ ಹೊತ್ತಿಕೊಟ್ಟು ಹೋಗಲು ಆಹ್ವಾನಿಸಿದಾಗ ಹನುಮನಿಗೆ ಸೀತೆ ನೀಡಿದ ಉತ್ತರ.

ತಾಯಿ ನಿಮ್ಮನ್ನು ಹೆಗಲಲಿಟ್ಟು ಶ್ರೀರಾಮರನ್ನೇ ಕೂಡಿಸುವೆ
ತಾಯಿ ಚಿತ್ತೈಸು ಎಂದು ನುಡಿ ಹನುಮನು
ಸುತ್ತಲಿದ್ದ ಕಾವಲು ಬೆನ್ಹತ್ತಿ ಬಾಹೊ ಭಟರು ಎಲ್ಲ
ಮರ್ತ್ಯ ಎನ್ನಕೊಂಡು ಹ್ಯಾಂಗ ಶರಧಿ ದಾಟುವಿ
ಸಾಲದು ಧೈರ್ಯವು ನೀ ಹೋಗಿ ಹನುಮಂತ ಶ್ರೀ
ರಾಮರೊಡಗೂಡಿ ಬ್ಯಾಗಬಾರೊ ಎಂದಳು (ಕೀ ೩೪೧, ಸಂ.೨)

ಇದೇ ರೀತಿ ಗುರುಜಗನ್ನಾಥದಾಸರು ಹನುಮ ಸೀತಾ ಸಂವಾದವನ್ನು ಹಾಡಿದ್ದಾರೆ

ಕಾಮಿನಿ ಮಣಿಗೆ ರಾಮನ ವಾರ್ತೆಯ
ಪ್ರೇಮದಿ ಪೇಳಿದ ರಾಮ

ರಾಮನ ಕುಶಲವಾರ್ತೆ ತಿಳಿದ ಸೀತೆ ಹನುಮನ ಬಗೆಗೆ ಚಿಂತಿತಳಾಗಿ ಆತನು ರಾಕ್ಷಸ ನಗರಿ ಲಂಕೆಗೆ ಬಂದದ್ದೇಕೆ ಎಂದು ಹನುಮನ ಬಗ್ಗೆ ಆತಂಕಗೊಳ್ಳುವ ಸೀತೆಯ ಮನಃಸ್ಥಿತಿ

ಕೋತಿಯೆ ಇಲ್ಲಿಗೆ ಯಾಕೆ ಬಂದೆಯೋ
ಘಾತಿಪರಸುರರು ರಾಮ
ಬಲಹೀನನು ನೀ ಬಲವಂತರಸುರರು
ಛಲಮಾಡದೆ ನಡಿ ರಾಮ
ಘನತರ ಲಂಕದೆಗೆ ವನಚರ ಬಂದೆಯಾ
ದನುಜರು ಕೊಲ್ವರು ರಾಮ
ರಾಕ್ಷಸಗಣತಾ ವೀಕ್ಷಿಸಿ ನಿನ್ನನು
ಶಿಕ್ಷೆಯಗೈಪುದು ರಾಮ

ಸೀತೆಯ ಈ ಮಾತುಗಳನ್ನು ಕೇಳಿ ಹನುಮನ ಉತ್ತರ

ಮಾತೆಯೆ ತಿಳಿ ಎನಗ್ಯಾತರ ಭಯ ರಘು
ನಾಥನು ಕಾಯುವ ರಾಮ (ಕೀ೧೭೬, ಸಂ.೨೬)

ಸೀತೆ ಹನುಮಂತನ ಮಧ್ಯೆ ಜರುಗಿದ ಸಂವಾದ ರೂಪದ ಕೀರ್ತನೆಗಳಲ್ಲಿ ಕನಕದಾಸರ ರಚನೆಯೊಂದು ಕೆಳಗಿನಂತಿದೆ.

ಎನ್ನ ಕಂದ ಹಳ್ಳಿಯ ಹನುಮ
ಚೆನ್ನಗೈದಾರ ಲಕ್ಷ್ಮಣ ದೇವರು ।ಪ। (ಕೀ ೪೧, ಸಂ.೫/೧)

ಎಂದು ಪರದೇಶಿಯಾಗಿ ಅಶೋಕವನದಲ್ಲಿದ್ದ ಸೀತಾದೇವಿ ಹನುಮಂತನನ್ನು ಕಂಡೊಡನೆ ನೇರವಾಗಿ ಗಂಡನ ಯೋಗಕ್ಷೇಮವನ್ನು ವಿಚಾರಿಸಲು ನಾಚಿಕೆಯಾಗಿ ಅದು ಸುಸಂಸ್ಕೃತ ಲಕ್ಷಣವೆಂಬುದನ್ನು

ಅನುಕ್ತವಾಗಿ ಸೂಚಿಸಿ ಲಕ್ಷ್ಮಣದೇವರು ಚೆನ್ನಾಗಿದ್ದಾರೆಯೇ? ಎಂದು ಪ್ರಶ್ನಿಸುತ್ತಾಳೆ. ಸೂಕ್ಷ್ಮಮತಿಯಾದ ಹನುಮ ಲಕ್ಷ್ಮಣನ ಬಗ್ಗೆ ಚಕಾರವೆತ್ತದೆ ರಾಮನ ವನವಾಸ ಚಿತ್ರಣ ನೀಡುತ್ತಾ ಆತನ ಯೋಗಕ್ಷೇಮ ತಿಳಿಸುತ್ತಾನೆ. ಹನುಮ ಅಶೋಕವನದಲ್ಲಿ ಸೀತೆಯನ್ನು ಕಂಡು ಮಾತಾಡಲು ಮುಂದಾದಾಗ ಸೀತೆ ಹನುಮನ ವಾನರರೂಪವನ್ನು ಕಂಡು ಈತ ಅಸುರನ ಮಾಯಾವಿ ಶಕ್ತಿಯಿರುಬಹುದೆಂದು ಭ್ರಮಿಸಿ ಆತನೊಂದಿಗೆ ನಡೆದ ಸಂವಾದವು ಶ್ರೀನರಸಿಂಹ ವಿಠಲರ ಕೀರ್ತನೆಯಲ್ಲಿ ಚಿತ್ತಾಕರ್ಷಕವಾಗಿ ಮೂಡಿಬಂದಿದೆ.

ಧೀರನೋ ಚೋರನೋ ಹೇರನೋ

ದಾರಿರುವಿ ದೂರ ನಿಲ್ಲೋ ।ಪ।

ಚಾರು ಮರಕಟ ರೂಪವ ತೋರಿ ಮಾಯಾದರನುಚಾರಿ

ಚಾಕರನೆಂದು ಸಾರುತಿರುವೀ ಬಾರಿಬಾರಿಗೆ ಶ್ರೀರಾಮ

ಆರೈಸಿಸುವಿ ಎಂದೂ ತೋರದಿರು ದಿಟವೆನಗೆ ।೧।

ರಕ್ಕಸರ ಮಾಯೆಯನು ಲೆಕ್ಕಿಸುವವಳಲ್ಲ ನಾ

ಅಕ್ಕರವ ತೋರದಿರಲು ಮಿಕ್ಕ ಮಾತುಗಳೇಕೆ

ಇಕ್ಕುವೆನು ಶಾಪವನೆನೆ ತಕ್ಷಣದಿ ಮುದ್ರಿಕೆಯನಿತ್ತು ।೨।

ಸೀತೆಯು ಶಾಪನೀಡುವುದಾಗಿ ಕೇಳಿದಾಕ್ಷಣ ಹನುಮ ಮುದ್ರಿಕೆ ನೀಡುತ್ತಾನೆ.

ಶ್ರೀರಾಮ ಮುದ್ರಿಕೆಯ ನೋಡಿ

ಪರಮ ನೀ ಭಕ್ತನಹುದು

ಪಿರಿದಾಗಿ ನಿನ್ನ ಕೀರ್ತಿ ನರಸಿಂಹ ವಿಠಲನು

ಭರದಿಂದ ಮಾಳ್ಪನು ಕರವಿಡುವ ಶಿರದೀ (ಕೀ ೧೭೫, ಸಂ೨೧/೧)

ತಕ್ಷಣ ಕಂಡ ವಾನರರೂಪಿ ಹನುಮಂತನನ್ನು ಕಂಡು ಹೆದರಿದ ಸೀತೆಯು ನಂತರ ಹನುಮ ನೀಡಿದ ರಾಮನ ಮುದ್ರಿಕೆಯುಂಗುರವನ್ನು ಕಂಡಾಕ್ಷಣ ಸೀತೆ ಹನುಮನನ್ನು ನಂಬಿ ಆತನಲ್ಲಿ ವಿಶ್ವಾಸವಿಟ್ಟು ತನ್ನ ಗುರುತಿಗಾಗಿ ಚೂಡಾಮಣಿ ಆಭರಣವನ್ನು ನೀಡುತ್ತಾಳೆ.

ಹೀಗೆ ಹನುಮ ಸೀತೆಯ ಸರಳ ಸುಂದರ ಮಾತುಕತೆ ಸುಂದರಕಾಂಡದಲ್ಲಿ ಬಂದಿದ್ದು ಇದನ್ನು ಹರಿದಾಸರು ಪ್ರಭಾವಯುತವಾಗಿ ಹೊಸಕಲ್ಪನೆಗಳೊಂದಿಗೆ ಹೊಸತನವನ್ನ ನೀಡಲು ಪ್ರಯತ್ನಿಸಿ ಸಫಲರಾಗಿದ್ದಾರೆ.

ಅಶೋಕ ವನಭಂಗ

ಸೀತೆಯನ್ನು ಹುಡುಕಲು ಲಂಕೆ ಪ್ರವೇಶಿಸಿದ ಹನುಮ ಸೀತೆಯನ್ನು ಅಶೋಕವನದಲ್ಲಿ ಕಂಡು ಆಕೆಯಿಂದ ಅಭಿಜ್ಞಾನಗಳನ್ನು ಪಡೆದು ಹೊರಡಲು ಸಿದ್ಧನಾದಾಗ ರಾವಣನ ಬಲಾಬಲಗಳನ್ನು ತಿಳಿಯಲು

ಯೋಚಿಸಿ ಅಶೋವನಭಂಗಕ್ಕೆ ಸಿದ್ಧನಾಗಿ ಹಾಗೆಯೇ ಮಾಡುತ್ತಾನೆ. ಹೀಗೆ ಧ್ವಂಸವಾಗುತ್ತಿರುವ ವನವನ್ನು ಕಂಡು ರಾಕ್ಷಸರೆಲ್ಲ ಹನುಮಂತನೊಡನೆ ಯುದ್ಧಕ್ಕೆ ಹೋಗಿ ಸಾವನ್ನಪ್ಪುತ್ತಾರೆ. ಹೀಗೆ ಸತ್ತ ರಾಕ್ಷಸರಲ್ಲಿ ಏಳ್ವರು ಮಂತ್ರಿ ಕುಮಾರರು, ಐವರು ಸೇನಾನಾಯಕರುಗಳನ್ನು ಕೊಂದಾಗ ಕುಪಿತಗೊಂಡ ರಾವಣ ತನ್ನ ಕಿರಿಯ ಮಗ ಅಕ್ಷಕುಮಾರನನನ್ನು ಕಳುಹಿಸುತ್ತಾನೆ. ಆತನನ್ನು ಹನುಮಂತ ಕೊಲ್ಲುತ್ತಾನೆ. ಇದರಿಂದ ಕೋಪಾಗ್ರನಾದ ರಾವಣ ತನ್ನ ಹಿರಿಯಮಗ ಇಂದ್ರಜಿತನನ್ನು ಆಂಜನೇಯನನ್ನು ಹಿಡಿಯಲು ಕಳುಹಿಸುತ್ತಾನೆ. ಆಗ ಹನುಮಂತ ಇಂದ್ರಜಿತು ಹೂಡಿದ ಬ್ರಹ್ಮಾಸ್ತ್ರಕ್ಕೆ ಗೌರವ ನೀಡಿ ಆ ಪಾಶಕ್ಕೆ ಒಳಗಾಗಿ ಆತನ ಬಂಧನಕ್ಕೊಳಗಾಗುತ್ತಾನೆ.

ಹನುಮಂತ ಮಾಡಿದ ಅಶೋಕವನಭಂಗ, ಅಕ್ಷಕುಮಾರನನ್ನು ಕೊಂದ ಪ್ರಸಂಗವನ್ನು ಎಲ್ಲಾ ಹರಿದಾಸರು ತಮ್ಮತಮ್ಮ ಶೈಲಿಯಲ್ಲಿ ಈ ರೀತಿ ಹಾಡಿದ್ದಾರೆ. ವಾದಿರಾಜರು ಹನುಮ ಅಶೋಕವನವನ್ನು ಭಂಗ ಮಾಡಿದ ಪರಿ ಮತ್ತು ಅಲ್ಲಿನ ಸಸ್ಯಸಂಪತ್ತನ್ನು ಹೀಗೆ ವರ್ಣಿಸಿದ್ದಾರೆ.

'ಅಮ್ಮಾ ಹಸಿವೆ ಎಂದೆನಲು ಬಿದ್ದ ಹಣ ಮೆಲ್ಲೆನಲು
ಹೆಮ್ಮರವ ಕಿತ್ತು ಬಿಸುಟು ಹಣ್ಣ ಮೆದ್ದನು
ಸೀತೆಯಿದ್ದ ವನವ ಬಿಟ್ಟು ಮಿಕ್ಕವನಗಳೆಲ್ಲ ಕಿತ್ತು
ಬಾಳೆಯ ವವನ ಕಿತ್ತು ಧೂಳಿ ಮಾಡಿದ
ನಿಂಬೆಯ ವನವ ಕಿತ್ತು ಡಂಬು ಮಾಡಿದ ಹನುಮಂತ (ಕೀ ೩೪೧ ಸಂ.೨)

ರಂಗೇಶವಿಠಲರು ಇದೇ ಪ್ರಸಂಗವನ್ನು ಹೀಗೆ ನಿರೂಪಿಸಿದ್ದಾರೆ.

ಫಲವ ಸವಿದ ನೆವದಿ ನೀನು
ನಲಿದು ವನದ ಮುರಿದು ತುಳಿದು (ಕೀ ೧೬೪ ಸಂ.೨೭)

ಇಲ್ಲಿ ಎಲ್ಲಾ ಹರಿದಾಸರು ಹನುಮ ಅಶೋಕವನ ಭಂಗ ಮಾಡಿದ್ದು ಫಲಸವಿಯುವ ನೆವದಲ್ಲಿ ಎಂದು ಹಾಡಿದ್ದಾರೆ. ಇಂದಿರೇಶರು ತಮ್ಮ ಕೀರ್ತನೆಯಲ್ಲಿ ಪ್ರಸಂಗದ ಮೂಲ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ.

ಇಂಥ ಕಾರ್ಯವ ಮಾಡಿ ತನ್ನಯಾ
ನಂಥ ಪೌರುಷ ಪ್ರಕಟ ಮಾಡುವ
ದಿಂತು ಮನವನುಮಾಡಿದನು ಮತಿ
ವಂತ ವಾನರನು ॥೧॥
ಚಾರು ಶಿಂಶುಪ ಬಿಟ್ಟು ರಾಕ್ಷಸ
ವಾರ ವಳಿಸುವ ಮನದಿ ಹನುಮನು
ಭೂರಿವನವನು ಮುರಿದು ಲಂಕೆಯ
ತೋರಣೇರಿದನು ॥೨॥ (ಕೀ. ೨೦ ಸಂ. ೨೭)

ಹನುಮಂತ ಅಶೋಕವನ ಧ್ವಂಸ ಮಾಡಿದ್ದು ತನ್ನ ಪೌರುಷ ಪ್ರದರ್ಶನ ಮತ್ತು ವೈರಿಯ ಸೈನ್ಯ ಬಲ ತಿಳಿಯುವುದಕ್ಕಾಗಿಯೆಂದು ತಿಳಿಸಲಾಗಿದೆ. ಹೀಗೆ ವನಭಂಗ ಮಾಡುತ್ತಿರುವ ಹನುಮನ ವಿಷಯ ತಿಳಿದು ರಾವಣನ ಸೇನೆಯು ಇದಿರಾಗಿ ಆಂಜನೇಯನಿಂದ ಹತವಾದ ಬಗೆಯನ್ನು ವಾದಿರಾಜರು ಈ ರೀತಿ ತಿಳಿಸಿದ್ದಾರೆ.

ಗರಗರನೆ ಪಲ್ಗಡಿಘು ಕಲುಷದೈತ್ಯರನೆಲ್ಲ
ಚರಚರನೆ ಸೀಳಿ ಸಂಭ್ರಮದಿಂದ ।೨।
ಫಳಫಳನೆ ಅರ್ಭಟದಿಂದ ರಾವಣ
ನಳನಳನೆ ಬೆಳೆದ ನಂದನವ ಕಿತ್ತು ೩। (ಕೀ ೧೧೧ ಸಂ.೨)

ಹನುಮನು ದುಷ್ಟ ರಾಕ್ಷಸರನ್ನು ಕೊಂದ ರೀತಿಯನ್ನು ಬಹಳ ಪರಿಣಾಮಕಾರಿಯಾಗಿ ಚಿತ್ರಿಸಿದ್ದರೆ ಇಂದಿರೇಶರು ಹನುಮನ ವಿರುದ್ಧ ಯುದ್ಧ ಮಾಡಿ ಸಾವನ್ನಪ್ಪಿದ ರಾಕ್ಷಸರ ಸಂಖ್ಯೆ ಅವರ ಸಮಗ್ರ ವಿವರಣೆ ಸಂಕ್ಷಿಪ್ತವಾಗಿ ಹೀಗೆ ರಚಿಸಿದ್ದಾರೆ. ಹನುಮನನ್ನು ಹಿಡಿಯಲು ಬಂದಿದ್ದಂತಹ ಸೈನ್ಯ ವಿವರ ಹೀಗಿದೆ:

ಹತ್ತು ಒಂದು ಕೋಟಿ ಯಾಥವ
ತತ್ಸಮಾನ ಪುರಃ ಸರಾಸ್ಥಿತ
ಎತ್ತಿ ಆಯುಧ ಸೈನ್ಯ ಹನುಮನ
ಸುತ್ತಿಕೊಂಡಿಹುದು ।೨೫।
ಹಿಡಿದು ಕರದಲಿ ಆಯುಧಂಗಳ
ಹೊಡೆವ ಸೈನ್ಯವ ನೋಡಿ ಹನುಮನು
ಹೊಡೆದು ಕರತಳದಿಂದಲೆಲ್ಲರ
ಪುಡಿಯ ಮಾಡಿದನು ।೨೬। (ಕೀ ೨೦ ಸಂ. ೨೭)

ಹನುಮಂತ ಈ ಯುದ್ಧದಲ್ಲಿ ನಾಶಪಡಿಸಿದ ಸೇನಾಸಂಖ್ಯೆಯನ್ನು ಈ ರೀತಿ ತಿಳಿಸಿದ್ದಾರೆ.

ನೀಲಕಂಠನ ವರಗಿರಿ ಪ್ರಭ
ಏಳುಮಂದಿಯ ಮಂದಿ ಪುತ್ರರ
ಕಾಲಿನಿಂದಲಿ ಒದ್ದು ಕೆಡಹಿದ
ನಾಳು ಮಾಧವನಾ ।೨೭
ಧುರದಿ ಮುಂಭಾಗದಲಿ ಪೋಗುವ
ಗರುವ ಮಾಡುವ ರಾಕ್ಷಸಂಗಳ
ಮುರಿದು ಸೈನ್ಯದ ತೃತೀಯ ಭಾಗವ
ಹರಿಯು ಕೊಂದಿಹನು ।೨೮।
ಉತ್ತಮಾಸ್ತ್ರಗಳಿಂದ ಮಂತ್ರಿತ
ವೆತ್ತಿ ಬಾಣಗಳ್ತೊಡೆದು ಹನುಮನ

ಕಿತ್ತಿ ಹಾಕಲು ಅಕ್ಷ ಸಾಲದೆ

ಶಕ್ತಿ ನಿಂತಿಹನು ೩೦। (ಕೀ ೨೦. ಸಂ.೨೭)

"ಮಂಡೋದರಿಯ ಸುತನ ತುಂಡುಚೂರ್ಣವ ಮಾಡಿ" (ಕೀ.೧೦೪ ಸಂ.೨) ಎಂದು ಅಕ್ಷಕುಮಾರನನ್ನು ಕೊಂದ ರೀತಿಯನ್ನಿಲ್ಲಿ ವಾದಿರಾಜರು ವರ್ಣನಾತ್ಮಕವಾಗಿ ಹಾಡಿದ್ದಾರೆ. ರಾವಣನನ್ನು ಕೊಲ್ಲುವ ಸಾಮರ್ಥ್ಯವುಳ್ಳ ಹನುಮ ಕೊಲ್ಲಲಿಲ್ಲ ಎಂಬುದಕ್ಕೆ ಇಲ್ಲಿ ಇಂದಿರೇಶರು ಈ ರೀತಿ ಹೇಳಿದ್ದಾರೆ.

ಹತ್ತು ತಲೆಯವನನ್ನೇ ಕೊಲ್ಲುವ

ದುತ್ತಮಾತ್ಮವು ಆದರೀತನೂ

ತುತ್ತು ರಾಮಗೆ ಕಾರಣೆಂಥಾ

ಕೃತ್ಯ ಧರವಲ್ಲಾ ॥೨೨॥ (ಕೀ ೨೦ ಸಂ.೨೭)

ರಾಮನು ಮಾಡಬೇಕಾದ ಕಾರ್ಯವನ್ನು ತಾನು ಮಾಡಿದರೆ ರಾಮನಿಗೆ ಲೋಕದಲ್ಲಿ ದುಷ್ಟನಿಗ್ರಹ ಎಂಬ ಬಿರುದು ಮತ್ತು ರಾಮಾವತಾರದ ಉದ್ದೇಶ ಪೂರ್ಣಗೊಳ್ಳುವುದಿಲ್ಲದ್ದರಿಂದ ಆತನ ರಾವಣನನ್ನು ಕೊಲ್ಲುವುದಿಲ್ಲ.

ಹನುಮ–ರಾವಣ ಸಂಭಾಷಣೆ

ಅಶೋಕವನಭಂಗ ಮಾಡಿ ಹಲವಾರು ರಾಕ್ಷಸ ಸೈನ್ಯವನ್ನು ಯಮಲೋಕಕ್ಕೆ ಕಳುಹಿಸಿದ ಹನುಮನನ್ನು ಸದೆಬಡಿಯಲು ಬಂದ ರಾವಣನ ಹಿರಿಯಮಗ ಇಂದ್ರಜಿತು ಬ್ರಹ್ಮಾಸ್ತ್ರದಿಂದ ಬಂಧಿಸಿ ಆಸ್ಥಾನಕ್ಕೆ ಕರೆತರುತ್ತಾನೆ. ರಾವಣನ ಆಸ್ಥಾನಕ್ಕೆ ಬಂಧಿತನಾಗಿ ಬಂದ ಹನುಮ ಆತನ ವೈಭೋಗದ ಜೀವನವನ್ನು ಕಂಡು ಅಚ್ಚರಿಪಡುತ್ತಾನೆ. ಆಗ ರಾವಣನು ತನ್ನ ಮಂತ್ರಿ ಪ್ರಹಸ್ತನ ಮುಖಾಂತರ ಆಂಜನೇಯನಿಗೆ ಪ್ರಶ್ನೆ ಕೇಳುತ್ತಾನೆ. ಆದರೆ ಹನುಮಂತ ರಾವಣನ ಮಂತ್ರಿಯ ಪ್ರಶ್ನೆಗಳಿಗೆ ನೇರವಾಗಿ ರಾವಣನಿಗೇ ಉತ್ತರ ನೀಡುತ್ತಿರುತ್ತಾನೆ. ವಾಲ್ಮೀಕಿ ರಾಮಾಯಣದ ರಾವಣ ಹನುಮನನ್ನು ನೇರವಾಗಿ ಈ ಸಂದರ್ಭದಲ್ಲಿ ಮಾತನಾಡುವುದೇ ಇಲ್ಲ. ಆದರೆ ಹರಿದಾಸರು ಇವರಿಬ್ಬರ ಸಂವಾದವನು ನೇರವಾಗಿಯೇ ಪರಸ್ಪರ ಮುಖಾಮುಖಿ ಮಾತನಾಡಿದ ಹಾಗೆ ಈ ಕೆಳಗಿನಂತೆ ಚಿತ್ರಿಸಿದ್ದಾರೆ.

ಕಂಡನು ರಾವಣನುದ್ದಂಡ ಕಪಿಯನು

ಮಂಡಿಯ ತೂಗುತ್ತ ಮಾತಾಡಿಸಿದನು

ಭಂಡುಮಾಡದೆ ಬಿಡೆ ನೋಡು ಕಪಿಯನೆ

ಗಂಡುಗಲಿಯು ದುರುದುರಿಸಿ ನೋಡಿದನು

ಇದು ಈ ಪ್ರಸಂಗಕ್ಕೆ ತಕ್ಕ ಪೀಠಿಕೆ

ಛಲವ್ಯಾಕೊ ನಿನಗಿಷ್ಟು ಎಲೋ ಕೋಡಗನೆ

ನೆಲೆ ಯಾವುದ್ಹೇಳೋ ನಿನ್ನೊಡೆಯನ್ಹೆಸರನ್ನ

ಎಂದು ರಾವಣೇಶ್ವರ ಪ್ರಶ್ನಿಸುವುದೇ ತಡ

ಬಲವಂತ ರಾಮರ ಬಂಟ ಬಂದಿಹೆನೊ

ಹಲವು ಮಾತ್ಯಾಕೊ ಹನುಮನು ನಾನೆ

ಬಡರಾವಣನೆ ನಿನ್ನ ಬಡಿದು ಹಾಕುವೆನೊ

ಒಡನಯನಪ್ಪಣೆಯಿಲ್ಲ ಎಂದು ತಾಳಿದೆನೊ

ಪುಡಿಯೇಳಿಸುವೆನು ಖುಲ್ಲ ರಕ್ಕಸನೆ

ತೊಡೆವೆನೊ ನಿನ್ನ ಪಣೆಯ ಅಕ್ಷರವ

ಹನುಮನ ಈ ಉದ್ದಂಡತನದ ಉತ್ತರವನ್ನು ಕೇಳಿ ತುಂಬಿದ ಸಭೆಯಲ್ಲಿ ಕೋಪಾಗ್ರನಾದರೂ ಆವೇಶ ಮಾತ್ರದಿಂದ

ನಿನ್ನಂಥ ದೂತರು ರಾಮನ ಬಳಿಯೊಳು

ಇನ್ನೆಷ್ಟು ಮಂದಿ ಉಂಟು ಹೇಳೊ ನೀ ತ್ವರಿಯಾ?

ಎಂದು ರಾವಣ ಪುನಃ ಪ್ರಶ್ನಿಸಿದಾಗ ಹನುಮನು ಅದೇ ಧಾಟಿಯಲ್ಲಿ

ನನ್ನಂಥ ದೂತರು ನಿನ್ನಂಥ ಪ್ರೇತರು ಇನ್ನೂರು

ಮುನ್ನೂರು ಕೋಟಿ ಕೇಳರಿಯಾ ? (ಸಂ.೨)

ಎಂದು ಪ್ರಶ್ನೆಗೆ ವ್ಯಂಗ್ಯವಾಗಿ ಉತ್ತರಿಸುವನು.

ಇನ್ನೊಂದು ಕೀರ್ತನೆಯಲ್ಲಿ ವಾದಿರಾಜರು ಹನುಮ ಮತ್ತು ರಾವಣರ ಸಂಭಾಷಣೆಯನ್ನು

ಮಾತ್ರ ಬಹಳ ಮನೋಜ್ಞವಾಗಿ ಬಣ್ಣಿಸಿದ್ದಾರೆ. ರಾವಣನ ಆಸ್ಥಾನಕ್ಕೆ ಪ್ರವೇಶಿಸಿದ ಹನುಮ ಮೊದಲಿಗೆ

ಅಸುರನು ಅಳಿಯ ಬಂದೆನು ನಾನು ನಿನ್ನ ವೈರಿ

ದಶರಥರಾಮನಾಳೆಂದ (ಕೀ ೧೦೩, ಸಂ.೨)

ಇದನ್ನು ಕೇಳಿದೊಡನೆ ರಾವಣನ ಕೋಪ ಕೆರಳಿ 'ಹೊಸ ಕಪಿಯೆ ನೀನು ಬಂದುದೇನು ಕಾರಣವೆನಲು' ಎಂದು ಕೇಳಿದಾಗ ಹನುಮಂತನ ಬಾಯಿಗೆ ಬೀಗವೇ ಇಲ್ಲ. ರಾವಣನ ಅಬ್ಬರವನ್ನು ಮೀರಿಸುವಂತೆ ತಾನೂ ಆರ್ಭಟಿಸುವನು

ದಿಶೆಗೆ ಬಲ್ಲಿದ ಹನುಮ ನಾ ಕೇಳೋ ನಿ

ನ್ನಸುರ ಪಡೆಯ ಮಡುಹಬಂದೆ ನಿನ್ನ

ಎಸೆವ ಪಾದದಲೊದೆಯ ಬಂದೆ ವನದ

ಕಿತ್ತೀಡ್ಯಾಡಿ ನಿಂದೆ, ನಿನ್ನ

ದಶಶಿರವ ಕತ್ತರಿಸಿ ಎಸೆವ ರಾಮರ ಮಡದಿ

ಹಸುಳೆ ಸೀತೆಯ ಅರಸಲು ಬಂದೆ (ಕೀ ೧೦೩ ಸಂ.೨)

ಎಂದು ತಾನು ಲಂಕೆಗೆ ಬಂದ ಉದ್ದೇಶವನ್ನು ಸ್ಪಷ್ಟವಾಗಿ ಹೇಳುವನು. ಹೀಗೆ ರಾವಣ-ಹನುಮನ ಸಂವಾದದಲ್ಲಿ ರಾವಣನಿಗಾದ ಮುಖಭಂಗದಿಂದಾಗಿ ರಾವಣ ಹನುಮನನ್ನು ಶಿಕ್ಷಿಸುವುದಾಗಿ ಹೇಳುತ್ತಾನೆ ಆಗ ಹನುಮ ರಾವಣನಿಗೆ ಈ ರೀತಿ ಸಲಹೆ ನೀಡುತ್ತಾನೆ.

ಕಚ್ಚಿ ಕೀಳಲೊ ಕಣ್ಣು ಹತ್ತು ತಲೆಯನು ಹಿಡಿದು
ನುಚ್ಚು ನುರಿ ಮಾಡಿ ಕೊ(ಲ್ಲಲೊ) ನಿನ್ನ ಇಷ್ಟು
ಹೆಚ್ಚಿನ ಮಾತ್ಯಾಕೊ ನಿನಗೆ ಬಹಳ
ಕಿಚ್ಚು ತುಂಬಿತು ಕೇಳೋ ಎನಗೆ ಒಂದು
ಮೆಚ್ಚು ಹೇಳುವೆನೊ ರಾಮರಿಗೆ
ಅಚ್ಚುತನ ಬಣಕೆ ಮೀಸಲಾಗಿರು ನೀನು (ಕೀ ೧೦೩ ಸಂ.೨)

ಹೀಗೆ ಹನುಮ-ರಾವಣನ ಸಂವಾದವು ಮಾತಿಗೆ ಮಾತು ಬೆಳೆಯುತ್ತಾ ಸಾಗುತ್ತದೆ. ಇಲ್ಲಿ ವಾದಿರಾಜರು ರಚಿಸಿರುವ ಒಂದು ನುಡಿಯಂತೂ ಅತ್ಯಂತ ಭಾವ ಪೂರ್ಣವಾಗಿದೆ. ಹನುಮನು ಆಡುವ ಮಾತಿನ ಒಕ್ಕಣೆ ಹೀಗಿದೆ.

ಮತ್ತ ರಾವಣ ನೀನು ಹೊತ್ತಿಹ ಭೂಮಿ ಹಣತೆ
ಸುತ್ತಣ ಸಮುದ್ರವೆ ತೈಲ
ಎತ್ತಿ ಹಿಡಿವಳು ಸೀತೆ ದೀಪ, ನಮ್ಮ
ಚಿತ್ತದೊಲ್ಲಭನ ಪ್ರತಾಪ, ನಿನ್ನ
ಲಂಕಪಟ್ಟಣವು ಸುಡುವಂತೆ ಶಾಪ
ಹತ್ತು ತಲೆ ಹುಳ ಹಾರಿಬಂದು ಬ್ಯಾಗ
ಸುತ್ತಿ ಬೀಳುವುದು ದೀಪದೊಳಗೆ (ಕೀ ೧೦೩ ಸಂ.೨)

ಈ ನುಡಿಯಲ್ಲಿ ಕಂಡುಬರುವ ವಾದಿರಾಜರ ಕಲ್ಪನಾ ಕೌಶಲ ನಮ್ಮ ಪಾಲಿಗೆ ಅಪ್ಯಾಯಮಾನವೆನ್ನಿಸಿದರೆ. ರಾವಣನ ಕಿವಿಗೆ ಕಾದ ಸೀಸವನ್ನು ಹೊಯ್ದಂತೆ ಆಗುವುದು. ರಾವಣನಿಗೆ ತುಂಬು ಸಭೆಯಲ್ಲಿ ಹನುಮನ ಮಾತಿನಿಂದಾದ ಪರಿಣಾಮವನ್ನು ವಿಜಯದಾಸರು "ಸಭೆಯೊಳಗೆ ರಾವಣನ ರಕ್ತವನೆ ಕಾರಿಸಿದೆ' (ಕೀ.೧೧೫, ಸಂ.೬/೧) ಎಂದು ಅರ್ಥಪೂರ್ಣವಾಗಿ ಹಾಡಿದ್ದಾರೆ.

ಇದೇ ಪ್ರಕಾರ ಪುರಂದರದಾಸರೂ ಈ ಸನ್ನಿವೇಶದಿಂದ ಸ್ಫೂರ್ತಿಗೊಂಡು ತಮ್ಮದೇ ಆದ ರೀತಿಯಲ್ಲಿ ಚಿತ್ರಿಸಿದ್ದಾರೆ.

ಏಳೇಳು ಶರಧಿಯು ಏಕವಾಗಿದೆ ಕಂಡ್ಯ
ಹ್ಯಾಗೆ ಬಂದೆ ಹೇಳೋ ಕೋತಿ. (ಪದ ೫೬ ಸಂ.೨)[೧]

ಎಂದು ಹನುಮನ ಪರಾಕ್ರಮವನ್ನು ಕಂಡು ಆಶ್ಚರ್ಯದಿಂದ ರಾವಣ ಪ್ರಶ್ನಿಸಿದರೆ ಅದಕ್ಕೆ ಹನುಮನ ಉತ್ತರ

ಏಳು ಶರಧಿಯು ಎನಗೆ ಏಳು ಕಾಲುವೆಯು

ತೂಳಿ ಲಂಘಿಸಿ ಬಂದೆ ಭೂತ

ರಾವಣನನ್ನು 'ಭೂತ' ಎಂದು ಸಂಬೋಧಿಸಿ ವ್ಯಂಗ್ಯವಾಗಿ ಉತ್ತರಿಸಿದ ಅಭೇದ್ಯವಾದ ಲಂಕಾಪುರಿಯನ್ನು ಹೇಗೆ ಹೊಕ್ಕಿ ಬಂದನೆಂದು ಕೇಳಲು, ಹನುಮಂತನು ಅದು ತನ್ನ ಪಾಲಿಗೆ ಅತ್ಯಂತ ನಿರಾಯಾಸವಾಗಿತ್ತೆಂದು ತಿಳಿಸಿ, ತಾನು ಮಾಡಿದ ಹಾವಳಿಯನ್ನೆಲ್ಲ ವಿವರಿಸುವನು.

ದೂತನಾಗಿಹೆ ಎನ್ನ ಕೈಯೊಳು ಸಿಕ್ಕಿಹೆ

ಕೋಪವಿನ್ಯಾತರಕೋ ಕೋತಿ

ಎಂದು ರಾವಣನು ಹನುಮಂತನನ್ನು ಎಚ್ಚರಿಸಲು ಆ ವಾಯುಕುಮಾರ

ನಾ ತಾಳಿಕೊಂಡಿಹೆನೊ ಆ ಕ್ಷಣದಿ

ಲಂಕೆ ನಿರ್ಧೂಮವನು ಮಾಳ್ಪೆ ಭೂತ

ಎಂದು ತನ್ನ ಪ್ರತಾಪವನ್ನು ಹೇಳಿದನು. ರಾವಣನು ರೇಗಿ

ನಿಮ್ಮಂಥಾ ದಾಸರು ನಿಮ್ಮರಸನ ಬಳಿ

ಎಷ್ಟು ಮೀದಿದ್ದಾರೋ ಕೋತಿ

ಎಂದು ಕೇಳಿದಾಕ್ಷಣ ಕೋಪಗೊಂಡು ಹನುಮ

ನನ್ನಂಥಾ ದಾಸರು ನಿನ್ನಂಥಾ ಹೇಡಿಗಳು

ಕೋಟ್ಯಾನುಕೋಟಿಯೆ ಭೂತ ೧ (ಪದ ೫೬)

ಎಂದು ಗುಡುಗುವನು. ರಾವಣನು ಹನುಮಂತನು ಬಂದ ಸ್ಥಳ ಮತ್ತು ಅವನ ಒಡೆಯನಾರೆಂದು ಕೇಳಲು ಹನುಮಂತ 'ಚೆಲ್ವಯೋಧ್ಯಾ ಪುರದರಸು ಜಾನಕಿ ಪತಿ, ರಾಮಚಂದ್ರನ ಭಂಟ ಭೂತ ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ.

ವಾದಿರಾಜರ ಇನ್ನೊಂದು ಕೀರ್ತನೆಯಲ್ಲಿ ರಾವಣನು ಹನುಮನನ್ನು ಬಹಳ ಆದರ ಗೌರವದಿಂದ ಮಾತನಾಡಿ ಆತನ ಪರಾಕ್ರಮಗಳನ್ನರಿತು ತನ್ನಾಳುವಾಗುವಂತೆ ಕೇಳುವ ಪರಿ

ಯಾವ ದೇಶದಿಂದ ಬಂದಿ ಯಾರ ಕಂದಯ್ಯ ನೀನು

ರಾವಣೇಶನು ಕೇಳಿದನು ವಾನರೇಶನು

ವಿನಯಭರಿತ ರಾವಣನ ಮಾತುಗಳಿಗೆ ಪ್ರತ್ಯುತ್ತರವಾಗಿ ಹನುಮಂತ

ಎನ್ನ ಒಡೆಯ ರಾಮಚಂದ್ರ ಅವನ ಬಂಟನೆಂಬುವರು

ಹೆಮ್ಮೆಯಾನ ಬೇಡ ಶರಣೆನ್ನು ರಾವಣ.

ಹನುಮಂತನ ಈ ಕೌಶಲ್ಯಭರತಿ ಮಾತುಗಳನ್ನಾಲಿಸಿ ರಾವಣನು

ತನ್ನ ಬಂಟನಾದರೆ ಭೂಮಿ ಸಾಮ್ರಾಜ್ಯ ಕೊಡುವೆ

ತಳಿಗೆ ತಾಂಬೂಲವನ್ನು ತರಿಸಿಕೊಟ್ಟನು

ಹನುಮನಿಗೆ ತನ್ನ ಸೇವಕನಾಗಲು ಆಹ್ವಾನಿಸಿ ಆತಿಥಿಸತ್ಕಾರ ಮಾಡಿಸಿದಾಗ

ಕೊಟ್ಟ ತಾಂಬೂಲವನ್ನು ತಟ್ಟೆಗ್ಹಾಕಿದ ಹನುಮ ನಿನ್ನ

ಕುಟ್ಟಿ ಕೆಡಹುವೆ ನಾನೀಗ ಅರಿಯ ಬಲ್ಲೆಯಾ

ಹನುಮನು ರಾವಣನು ನೀಡಿದ ಆಹ್ವಾನವನ್ನು ತಿರಸ್ಕರಿಸಿ ಶ್ರೀರಾಮನನ್ನು ಕೊಂಡಾಡುತ್ತಾನೆ. ಹನುಮನ ಈ ಮಾತುಗಳನ್ನು ಕೇಳಿ ರಾವಣ ಹನುಮನನ್ನು ವಿಕಾರರೂಪಗೊಳಿಸಿ ಆತನ ಬಾಲ ಸುಡಲು ಆಜ್ಞಾಪಿಸುತ್ತಾನೆ.

ಲಂಕಾದಹನ

ಇಂದ್ರಜಿತನ ಬ್ರಹ್ಮಾಸ್ತ್ರಕ್ಕೆ ವಶವಾಗಿ ರಾವಣನ ಆಸ್ಥಾನಕ್ಕೆ ಬಂದ ಹನುಮನ ಉದ್ದಂಡದ ಮಾತುಗಳನ್ನಾಲಿಸಿ ಕೋಪೋದ್ವಿಗ್ನಗೊಂಡ ರಾವಣೇಶ್ವರ ಆತನನ್ನು ವಧಿಸಲು ಮುಂದಾದಾಗ ವಿಭೀಷಣನ ಮಾತನ್ನಾಲಿಸಿ ಹನುಮನನ್ನು ವಿರೂಪಗೊಳಿಸಲೆಂದು ಆತನ ಬಾಲವನ್ನು ಸುಡಲು ಆಜ್ಞಾಪಿಸುತ್ತಾನೆ. ಹೀಗೆ ತನ್ನ ಬಾಲಕ್ಕೆ ಬೆಂಕಿ ಹಚ್ಚಿಕೊಂಡ ಹನುಮಂತ ಲಂಕಾದಹನ ಕಾರ್ಯಕ್ಕೆ ಪ್ರವೃತ್ತನಾಗುತ್ತಾನೆ. ಈ ಪ್ರಸಂಗವನ್ನು ಹಲವಾರು ರೀತಿಯಲ್ಲಿ ಹಲವು ಹರಿದಾಸರು ಈ ರೀತಿಯಲ್ಲಿ ಹಾಡಿದ್ದಾರೆ.

ವಾದಿರಾಜರ ಕೀರ್ತನೆಯೊಂದರಲ್ಲಿ ಹನುಮನ ಬಾಲಕ್ಕೆ ಬೆಂಕಿ ಹಚ್ಚಲು ಪ್ರಯತ್ನಿಸಿದ ದೈತ್ಯರ ಪರಿಪಾಟಲುಗಳನ್ನು ಈ ರೀತಿ ವಿವರಿಸಿದ್ದಾರೆ. ಹನುಮನ ಉದ್ದಂಡದ ಮಾತುಗಳನನು ಕೇಳಿ ಕುಪಿತಗೊಂಡ ರಾವಣ;

ಏನಯ್ಯ ಹನುಮಂತ ಬಹಳಮಾತನಾಡುತಿದಿ

ರಾವಣೇಶ ಕೇಳಿದನು ರಾಮ ಹನುಮನ ೫೬

ನಾನಲ್ಲ ಹಿಂದಿನ ಬಾಲವೆ ಮಾತಾಡುತಲಿದೆ

ಲೀಲೆಯಿಂದ ಹನುಮಂತ ಬಾಲವ ತೋರಿದ ೫೭

ಬಾಲಕ್ಕೆ ತಕ್ಕ ಶಿಕ್ಷೆ ನಾನು ಮಾಡಿಸುವೆನೆಂದೆನುತ

ರಾವಣೇಶ ಹೇಳಿದನು ವಾನರೇಶಗೆ ೫೮ (ಕೀ ೩೪೧ ಸಂ.೨)

ಎಂದು ರಾವಣ ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಲು ಆಜ್ಞಾಪಿಸಿದಾಗ ಆತ ಬಾಲ ಬೆಳೆಯುತ್ತಲೇ ಇತ್ತು. ಎಷ್ಟು ಬಟ್ಟೆ ಸುತ್ತಿದರೂ ಸಾಲದಾಯಿತು ಎಂಬುದಕ್ಕೆ ಈ ಮುಂದಿನ ನುಡಿಗಳೇ ಸಾಕ್ಷಿ .

ಪಟ್ಟೆ ಶಾಲುಗಳ ಕೊಕ್ಕು ಬಟ್ಟೆಗಳ ಸೆಳೆದು ತಂದು

ಸುತ್ತಿರ್ಹನುಮಂತನ್ನ ಬಾಲಕೆಂದನು ೫೬

ಮಾಳಿಗೆ ಮನೆಯ ಹೊಕ್ಕು ಸೀರೆಗಳ ಸೆಳೆದು ತಂದು

ಸುತ್ತಿರ್ಹನುಮಂತನ ಬಾಲಕೆಂದನು ೬೦

ಚಂದ್ರಶಾಲೆಗಳ ಹೊಕ್ಕು ದಿಂಡುಗಲ ಸೆಳೆದು ತಂದು

ಸುತ್ತಿರ್ಹನುಮಂತನ ಬಾಲಕೆಂದನು ೬೧

ಹೀಗೆ ಬೆಳೆಯುತ್ತಿದ್ದ ಹನುಮಂತನ ಬಾಲವು ರಾವಣನ ಈ ಮಾತನ್ನು ಕೇಳಿ ಮುದುಡಿಕೊಳ್ಳುತ್ತದೆ

ಎಷ್ಟು ಬಟ್ಟೆ ಸುತ್ತಿದರು ಸುಟ್ಟ ಬಾಲ ಬೆಳೆಯುತಲಿದೆ

ವನವಾಸದ ಸೀತೆ ಸೀರೆ ತನ್ನಿರೆಂದನು ೬೨

ನುಡಿಗಳಲ್ಲಿ ಏಕೋದಾನ ಮನದ ಕೋಪವನೆ ತಾಳಿ

ಶೀಘ್ರದಿಂದ ಹನುಮಂತ ಬಾಲವ ಮುದುಡಿದ ೬೩

ಇಂದಿರೇಶರು ವಿಭೀಷಣನು ರಾವಣನಿಗೆ ಹನುಮಂತನನ್ನು ಕೊಲ್ಲದಿರಲು ಹೇಳಿದ ಸಾವಧಾನಿಸಿದ ಪ್ರಸಂಗವನ್ನು ಈ ರೀತಿ ಹೇಳಿದ್ದಾರೆ.

ಇಂಥಾ ಮಾತನು ಕೇಳುತಾತನ

ಅಂತ ಮಾಡಿರಿಯನ್ನೆ ವಿಭೀಷಣ

ಶಾಂತ ಮಾಡಲು ಪುಚ್ಛ ದಹಿಸಿರಿ

ಯಂತ ನುಡಿದನು ।೪೮। (ಕೀ ೨೦ ಸಂ.೨೧/೨)

ಹಾಗೆಯೆ ಗುರುಜಗನ್ನಾಥದಾಸರು 'ವಿಭೀಷಣ'ನ ಮಾತುಗಳು ಹೀಗೆ ಬಂದಿವೆ.

ಕೋತಿಯ ಕೊಂದರೆ ಪಾತಕ ಒಪ್ಪೊದು

ಘಾತವು ಸಲ್ಲದು ರಾಮ ।೮೦।

ಹೀಗೆ ತನ್ನ ಬಾಲದಲ್ಲಿ ಬೆಂಕಿ ಹಚ್ಚಿಕೊಂಡ ಹನುಮ ಲಂಕೆಯನ್ನು ಸುಟ್ಟ ರೀತಿ ವಾದಿರಾಜರು ಹೀಗೆ ವರ್ಣಿಸಿದ್ದಾರೆ.

ವಾತಸುತನು ವೈರಿಪುರವ ಸುಡಲು ತೊಡಗಿದ ।೨।

ನಲಿದು ಲಂಘಿಸಿ ನಳನಳಿಸುವ ಬಾಲವನೆತ್ತಿ

ಖಳರೆದೆ ಶೂಲ ಹುಬ್ಬುಗಳ ಗಂಟಿಕ್ಕಿ ನೋಡುವ ಅರ್ಥಿ

ಅಳುತಲಿಹ ಅಬಲೆಯರ ಭಯಂಕರ ಮೂರ್ತಿ

ಸುಳಿದನು ಕೇರಿಕೇರಿಯಲಸುರರ ನುಗ್ಗೊತ್ತಿ ।೩।

ತಮ್ಮದಿನ್ನೊಂದು ಕೀರ್ತನೆಯಲ್ಲಿ

ಕಿಚ್ಚು ಹಚ್ಚಲು ರಕ್ಕಸರ ಗಡ್ಡಮೀಸೆ ಸಹ

ಎಚ್ಚರಿಸಿ ಸುಟ್ಟ ಲಂಕಾಪುರವ ।೮।

ಇಲ್ಲಿ ರಾಕ್ಷಸರ ಗಡ್ಡಮೀಸೆ ಸುಡುವ ಮೂಲಕ ಲಂಕಾಪುರವನ್ನು ಸುಡಲು ಪ್ರಸ್ತಾವನೆ ಇಟ್ಟಂತಿದೆ.

ಹನುಮನ ವ್ಯಂಗ್ಯದ ಮಾತುಗಳನ್ನು ಕೇಳಿ ರೊಚ್ಚಿಗೆದ್ದ ರಾವಣನು ಕೋಪ ತಡೆಯಲಾರದೆ **'ಸುಡಿರೆಂದ ಬಾಲವ ಸುತ್ತಿ ವಸವನು'** ಎಂದಾಕ್ಷಣ ರಾವಣನ ಸೇವಕರು ಬಂದು ಹನುಮನ ಬಾಲಕ್ಕೆ ಬೆಂಕಿ ಹಚ್ಚಲು ಪ್ರಯತ್ನಿಸಿದ ಪ್ರಯತ್ನ

ತಂದರು ವಸನವ ತಂಡತಂಡದಲಿ

ಒಂದೊಂದು ಮೂಟೆ ಎಂಬತ್ತು ಕೋಟಿಯಲಿ

ಚಂದದಿ ಹರಳಿನ ತೈಲದೊಳದ್ದಿಸಿ

ನಿಂದ ಹನುಮನು ಬಾಲವ ಬೆಳಸುತ

ಶಾಲು ಸಕಲಾತಿಯು ಸಾಲದೆಯಿರಲು

ಬಾಲರೆ ವಸ್ತ್ರವ ಸೆಳೆದು ತಾರೆನಲು

ಬಾಲವ ನಿಲ್ಲಿಸೆ ಬೆಂಕಿಯನಿಡುತಲಿ

ಕಾಲ ಮೃತ್ಯುವ ಕೆಣಕಿದರಲ್ಲಿ

ಸುಟ್ಟ ಬಾಲವನ್ನು ಕಂಡ ಹನುಮ ಇಂಗುತಿಂದ ಮಂಗನಂತೆ

ಕುಣಿಕುಣಿದಾಡುತ ಕೂಗಿ ಬೊಬ್ಬಿಡುತ

ಇಣಿಕಿ ನೋಡುತ ಅಸುರರಣಕಿಸುತ

ಝಣ-ಝಣ ಝಣರೆನೆ ಬಾಲದ ಗಂಟೆಯು

ಮನದಿ ಶ್ರೀರಾಮನ ಪಾದವ ನೆನೆಯುತ

ಲಂಕೆಯನ್ನು ಸುಟ್ಟ ಪರಿ ಹೀಗಿದೆ

ಹತ್ತಿತು ಅಸುರನ ಗಡ್ಡಮೀಸೆಗಳು

ಸುತ್ತಿತು ಹೊಗೆ ಬ್ರಹ್ಮಾಂಡ ಕೋಟಿಯೊಳು

ವಾದಿರಾಜರು ತಮ್ಮ ಇನ್ನೊಂದು ಕೀರ್ತನೆಯಲ್ಲಿ ಲಂಕಾದಹನ ಕ್ರಿಯೆಯನ್ನು ಹೀಗೆ ಚಿತ್ರಿಸಿದ್ದಾರೆ.

ಲಂಕಾನಗರಿಯ ಪುಚ್ಛದ ಕಿಚ್ಚಿಂದ ಸುಟ್ಟ

ಹುಂಕರಿಸುತ ಅಹಿತಕರ ಬೇಗ ತೆಗೆದೊಗದಿಟ್ಟ

ಕಂಕಣ ಮಕುಟ ಹಾರಂಗಳಿದೊಪ್ಪುವ ಬಲುದಿಟ್ಟ

ಶಂಕೆಯಿಲ್ಲದನಿಲಜ ಶತ್ರುಗಳಿಂತಾರ್ಥಿಯ ಕೊಟ್ಟ ।೪। (ಸಂ. ೨)

ಆಂಜನೇಯ ಲಂಕಾನಗರಿಯನ್ನು ದಹಿಸಿದ ಬಗೆಯನ್ನು ಇತರ ಹರಿದಾಸರು ಈ ರೀತಿ ರಚಿಸಿದ್ದಾರೆ.

ಇಂದಿರೇಶರು ತಮ್ಮ 'ಸುಂದರಕಾಂಡ' ಎಂಬ ದೀರ್ಘಕೀರ್ತನೆಯಲ್ಲಿ ಹನುಮನ ಲಂಕಾದಹನ ಪರಾಕ್ರಮ ಈ ರೀತಿ ಹಾಡಿದ್ದಾರೆ.

ಹೇಮರತ್ನಗಳಿಂದ ನಿರ್ಮಿಸಿ

ದಾಮಹಾಪುರಿಯನ್ನು ರಾಕ್ಷಸ

ಸ್ತೋಮದಿಂದಲಿ ಸಹಿತ ಸುಟ್ಟು

ಸುಧಾಮಗರ್ಜಿಸಿದಾ ೫೨ (ಸಂ.೨೧/೨)

ಮೇಲಿನ ಅಂಶವು ವಾದಿರಾಜರಲ್ಲಿ ಹೀಗೆ ಬಂದಿದೆ

ಮುಟ್ಟಿಸಿದ ಬಾಲ ಉರಿದು ಸುಟ್ಟು ಪಟ್ಟಣವು ಉರಿದು

ಲಂಕಪಟ್ಟಣವು ಉರಿದು ಕುಪ್ಪೆಬಿದ್ದಿತು ೬೫

ಮಾಳಿಗೆ ಮನೆಯು ಉರಿದು ಚಂದ್ರಶಾಲೆಗಳು ಉರಿದು

ವಿಶ್ವಕರ್ಮರು ಕೇಳಿದರು ಯಾರ ಬಂಟನು ೬೬

ಗೋಕುಲದೊಳಗೆ ಪುಟ್ಟಿ ಗೋವುಗಳ ಪಾಲಿಸಿದ

ತಾಟಕಿಯ ಮೂಗು ಕೊಯ್ದ ರಾಮರ ಬಂಟನು ೬೭ (ಕೀ ೩೪೧ ಸಂ.೨)

ಲಂಕಾನಗರವನ್ನು ಅತಿ ಉತ್ಸಾಹದಿಂದ ದಹಿಸುತ್ತಿದ್ದ ಹನುಮ ವಿಭೀಷಣನ ಮನೆಯನ್ನು ಸುಡದಿದ್ದ ಘಟನೆಯನ್ನು ಗುರುರಾಮವಿಠಲರು ಕೆಳಗಿನಂತೆ ತಿಳಿಸಿದ್ದಾರೆ.

ಧರ್ಮ ವಿಭೀಷಣನಾ ಮನೆಯನು

ಮರ್ಮವರಿತು ವುಳುಹಿ

ನಿರ್ಮಲನೆಂದಾನಂದವ ಪಡುತ

ಧರ್ಮೇತರ ನಿಲಯಗಳ ದಹಿಸಿದ್ಯೆ ।೨। (ಸಂ-೩೪)

ಈ ಪ್ರಕಾರದಲ್ಲಿ ಲಂಕಾದಹನ ಕಾರ್ಯ ಮಾಡಿದ ಹಿಂತಿರುಗಲು ಅನುವಾದ ಹನುಮನ ಪರಾಕ್ರಮವನ್ನು ವಾದಿರಾಜರು

ಹೋಗೆಲೊ ಕಪಿಯೆನಿ ಹೊಕ್ಕು ರಕ್ಕಸರನು ಬಿಗಿದ

ಕಾಗೆಯ ಬಳಗಕೆ ಕಲ್ಲನಿಟ್ಟಂದದಿ ಮಾಡಿದ

ಆಗಲೆ ಕಂಡ ದಶಮುಖನೆಂಬ ಕಳ್ಳನ ನೋಡಿದ

ಬೇಗ ಜಾನಕಿಯನು ಬಿಡು ಬಿಡುಯೆನಲು ತೊಡಗಿದ ।೫।

ಮೂರದೊಂದು ಪಾಲು ಖಳರ ಜನಂಗಳ ಕೊಂದ

ಮೀರಿದ ಸೇನೆ ನಮ್ಮ ರಘುಪತಿಗಿರಲೆಂದು ನಿಮದ

ನೂರು ಯೋಜನ ವಾರಾಶಿಯ ತೀರಕೆ ಬಂದ

ಹಾರಿದನು ಗಗನಕೆ ಹನುಮನು ಭರವಸೆದಿಂದ ನಿಂದ ।೬। (ಸಂ.೨)

ಹೀಗೆ ಹರಿದಾಸರು ಹನುಮನ ಮಹಿಮೆ ಸಾರುವ ಹಾಡುಗಳಲ್ಲಿ ಅಗಾಧ ಶಬ್ಧ ಸಂಪತ್ತನ್ನು ಕಾಣಬಹುದು. ಹಲವು ಹರಿದಾಸರು ಹನುಮ-ಭೀಮ-ಮಧ್ವ ಈ ಮೂರವತಾರಗಳ ಬಗ್ಗೆ ಸಾಕಷ್ಟು ಕೀರ್ತನೆ ರಚಿಸಿದ್ದಾರೆ. ಆದರೆ ಹೆಳವನಕಟ್ಟೆ ಗಿರಿಯಮ್ಮನವರು ಮಾತ್ರ ಹನುಮನಿಗೆ ಸಂಬಂಧಪಟ್ಟ ಕೀರ್ತನೆ ರಚಿಸಿದ್ದಾರೆಯೇ ಹೊರತು ಉಳಿದೆರಡು ಅವತಾರಗಳ ಬಗ್ಗೆ ಯಾವುದೇ ಕೀರ್ತನೆ ರಚಿಸದಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ಹನುಮ ಸುಂದರಕಾಂಡದಲ್ಲಿ ಸೀತೆಗೆ ಉಂಗುರ ಕೊಟ್ಟಿದ್ದು ರಾವಣ-ಹನುಮ

ವಾಗ್ವಾದ. ಲಂಕಾದಹಿಸಿದ ಹನುಮನ ಬಗ್ಗೆಯಾಗಲೀ ಪರಾಕ್ರಮ ಕುರಿತು ಮಾಡಿದ ಎಲ್ಲಾ ಕಥಾನಕಗಳಲ್ಲಿ ಹರಿದಾಸರು ಬಳಸಿದ ಪದಲಾಲಿತ್ಯ ಗಮನಿಸಿದರೆ ಅವರ ಕಾವ್ಯಪ್ರೌಢಿಮೆಯನ್ನು ಮೆಚ್ಚುವಂತದ್ದಾಗಿದೆ.

ಹನುಮನಿಂದ ಸೀತೆಯ ಕುಶಲವಾರ್ತೆಯ ಕೇಳಿದ ಬಗೆ ಮತ್ತು ವಾನರರೆದುರು ಹನುಮನ ಪರಾಕ್ರಮವನ್ನು ಪ್ರಶಂಸಿಸಿದ್ದು:-

ಹನುಮಂತನು ಲಂಕೆಯ ಅಶೋಕವನದಲ್ಲಿ ಸೀತಾದರ್ಶನ ಮಾಡಿದ ನಂತರ ಕಿಷ್ಕಿಂದೆಗೆ ಮರಳಿ ರಾಮನಿಗೆ, ಸೀತಾ ಕುಶಲವಾರ್ತೆಯನ್ನು ತಿಳಿಸುತ್ತಾನೆ. ಆಗ ರಾಮನು ಅತ್ಯಂತ ದುಃಖಿತನಾಗಿ ಮತ್ತೆಮತ್ತೆ ಸೀತೆಯ ವಿಚಾರ ಕೇಳಿ ಪ್ರಲಾಪಿಸುತ್ತಾನೆ. ಈ ಪ್ರಲಾಪವನ್ನು ಪುರಂದರದಾಸರು ತಮ್ಮದೊಂದು ಕೀರ್ತನೆಯಲ್ಲಿ ಹೀಗೆ ಹಾಡಿದ್ದಾರೆ.

ಏನೆಂದಳಯ್ಯ ಸೀತೆ
ನಿನಗೇನ ಮಾಡಿದಳೊ ಪ್ರೀತೆ ।ಪ।
ದಾನವನ ಪುರದೊಳಗೆ ದಾರಿಯನು ನೋಡುತಲೆ
ಧ್ಯಾನವನು ಮಾಡುತಿಹಳೊ ಹನುಮಾ ।ಅ.ಪ।
ಎಲ್ಲಿಂದ ಬಂದೆ ಹನುಮಾ ನೀಯೆನ್ನ
ಕೇಳುಸೊಲ್ಲೆನ್ನ ಪ್ರೇಮ
ವಲ್ಲಭನ ನೆನೆದರೆ ನಿಮಿಷ ಯುಗವಾಗುತಿದೆ
ನಿಲ್ಲಲಾರೆನು ಎಂದಳೊ ಹನುಮಾ ।೧।
ರಾವಣನ ಶಿರವರಿದು ಲಂಕಪಟ್ಟಣವನ್ನೆಲ್ಲ
ಹವನವ ಮಾಡಿಸೊ ಎಂದಳೊ ಹನುಮಾ (ಕೀ ೧೬೪, ಸಂ೩/೧)

ಈ ಕೀರ್ತನೆಯಲ್ಲಿ ರಾಮ ಸೀತೆಯ ಮನಃಸ್ಥಿತಿಯನ್ನರಿತು ಸೀತೆ ಹನುಮನಿಗೆ ಬಹುಶಃ ಕೇಳಿರಬಹುದಾದ ಪ್ರಶ್ನೆಗಳನ್ನು ತಾನೇ ಉತ್ಸುಕನಾಗಿ ಲಂಕೆಯಿಂದ ಹಿಂತಿರುಗಿದ ಹನುಮನಲ್ಲಿ ಕೇಳುತ್ತಾನೆ. ರಾಮನ ಇದೇ ಪ್ರಕಾರದ ಭಾವಾತಿರೇಕದ ಭಾವನೆಗಳನ್ನು ಕನಕದಾಸರ ಈ ಕೀರ್ತನೆಯಲ್ಲಿ ಕಾಣಬಹುದು.

ಏನೆಂದಳೇನೆಂದಳೋ ।ಪ।
ನಿನ್ನೊಳು ಸೀತೆ ಹನುಮಯ್ಯ ।ಅ.ಪ।
ಜನಕನರಮನೆಯಲ್ಲಿ ಜನಿಸಿ ಸುಖದಲ್ಲಿರಲು
ಧನು ಮುರಿದು ಕೈಹಿಡಿದು ತನ್ನ
ಘನ ಪದವಿಯನು ಬಿಟ್ಟು ವನವ ಸೇರಿದನೆಂದು
ವನಿತೆ ತಪಿಸುತೆ ಮನದಿ ನೊಂದು ।೧।

ಕುರುಹಿಸನುಂಗುರವನು ತರಳಾಕ್ಷಿಗಿತ್ತಾ
ತಿರುಳಿಗಿಂತಧಿಕವೇ ಕರಟವೆಂದು
ಬೆರಳಿದ ಚಿಮ್ಮಿದಳೆ ಅಶೋಕವನದಾಚೆಗೆ
ನಿರುತ ಸಂತಾಪದಲಿ ಮನದಿ ನೊಂದು ।೨।

ಸೇತುವೆಯ ಕಟ್ಟಿ ಸಿಂಧುಗೆ ವಿಭೀಷಣಾಗ್ರ
ಜಾತ ಲಂಕಾಧಿಪನ ವಧಿಸಿ
ಸೀತೆಯನು ಸೆರೆಯಿಂದ ಬಿಡಿಸಿದ್ದೆ ಆದರೆ
ನಾಥಾದಿಕೇಶವಗೆ ಬಲು ಬಿರುದು ಎಂದು ।೩। (ಕೀ೪೩, ಸಂ೫/೧)

ಸೀತೆಯ ಮೇಲೆ ರಾಮನಿಗಿರುವ ಪ್ರೇಮ ತುಡಿತ ಈ ಕೀರ್ತನೆಯಲ್ಲಿ ಚಿತ್ರಿತವಾಗಿದೆ. ಸೀತಾನ್ವೇಷಣೆಯ ಘನಕಾರ್ಯದಿಂದ ಹಿಂದಿರುಗಿದ ಹನುಮಂತನನ್ನು ಪ್ರಶ್ನಿಸಿ ಸೀತೆಯ ಆತಂಕ ಮನಃಸ್ಥಿತಿಯನ್ನು ತಾನೇ ಊಹಿಸಿ ಹೇಳುವ ಈ ತಂತ್ರ ರಾಮನ ಪ್ರೇಮಾಧಿಕ್ಯವನ್ನು ಪರೋಕ್ಷವಾಗಿ ಪ್ರತಿಬಿಂಬಿಸುತ್ತದೆ. ಮೇಲಾಗಿ ಕನಕದಾಸರು ಉನ್ನತವೆಂಬುದನ್ನು ಸಹ ಜನಸಾಮಾನ್ಯ ನೆಲೆಗಳೆತಂದು ಸಂವಾದಿಸುವ ರೀತಿಯಂತೂ ಅವರ ಜನಸಮ್ಮುಖ ದೃಷ್ಟಿಯನ್ನು ಸಾಬೀತುಪಡಿಸುತ್ತದೆ. ಹನುಮಂತನನ್ನು ಸಾಮಾನ್ಯರಿಗೆ ನಿಲುಕುವಂತೆ ದೈನಂದಿನ ಒಡನಾಡಿಯಂತೆ 'ಹನುಮಯ್ಯ' ಎಂದು ಸಂಬೋಧಿಸುವ ನಿಲುವು ಈ ಮೇಲಿನ ಅಭಿಪ್ರಾಯಕ್ಕೆ ಸಾಕ್ಷಿ.

ಹಲವಾರು ಹರಿದಾಸರು ಹನುಮ ಸೀತೆಯ ಕುಶಲವಾರ್ತೆಯನ್ನರುಹಿ ಸೀತೆ ನೀಡಿದ ಕುರುಹುಗಳನ್ನು ರಾಮನಿಗೆ ತೋರಿಸಿದ್ದು ರಾಮ ಸಂತುಷ್ಟನಾಗಿ ಹನುಮನಿಗೆ ಕಾಣಿಕೆಯಾಗಿ ಪ್ರೇಮಾಲಿಂಗನ ನೀಡಿದ ವಿಷಯವನ್ನು ತಿಳಿಸಿರುವ ಹಲವಾರು ಕೀರ್ತನೆಗಳಿವೆ. ಆದರೆ ಮೇಲಿನೆರಡು ಹರಿದಾಸರು ರಾಮಸೀತೆಯ ವಿಚಾರವನ್ನು ಕೇಳಬಯಸಿದ ರೀತಿ, ಆಕೆ ಹನುಮನಿಗೆ ಏನೆಂದು ಹೇಳಿರಬಹುದೆಂದು ಕೇಳುವ ಕಾತರ ಈ ಎರಡು ಕೀರ್ತನೆಗಳಲ್ಲಿ ಕಾಣಬಹುದು.

ಹನುಮ ರಾಮನಿಗೆ ಸೀತಾಕುಶಲ ವಾರ್ತೆ ತಿಳಿಸಿ ಆಕೆ ನೀಡಿದ್ದ ಅಭಿಜ್ಞಾನಗಳನ್ನು ಕೊಡುತ್ತಾನೆ. ರಾಮ ಸೀತೆಯ ಚೂಡಾಮಣಿಯನ್ನು ನೋಡಿ ಪ್ರಲಾಪಿಸುತ್ತ ಅದರ ಹಿನ್ನೆಲೆಯನ್ನು ಈ ರೀತಿ ಹೇಳುತ್ತಾನೆ. ಸಮುದ್ರ ಮಂಥನದ ವೇಳೆ ಉದಯಿಸಿದ ಈ ಚೂಡಾಮಣಿ ಆಭರಣವನ್ನು ಇಂದ್ರ ಜನಕನಿಗೆ ಯಜ್ಞದ ವೇಳೆ ನೀಡಿದ್ದು ಇದನ್ನು ಸೀತೆ ಯಾವಾಗಲೂ ಧರಿಸಿರುತ್ತಿದ್ದಳೆಂದು ಹೇಳುತ್ತಾನೆ. ಈ ಚೂಡಾಮಣಿ ವೃತ್ತಾಂತವನ್ನು ಯಾವ ಹರಿದಾಸರು ಹಾಡಿಲ್ಲ ಇದಕ್ಕೆ ಅಪವಾದವೆಂಬಂತೆ ವರಾಹ ತಿಮ್ಮಪ್ಪದಾಸರು ತಮ್ಮ ಕೀರ್ತನೆಯಲ್ಲಿ ಈ ರೀತಿ ಹಾಡಿದ್ದಾರೆ.

ಇಂದಿರೆಯರಸನು ಮನ್ನಿಸಿ ಮುದದಿ
ತಂದ ಚೂಡಕವನ್ನು ಕಾಣುತ್ತ ಉದಧಿ

ಯಿಂದಲೆ ಪುಟ್ಟಿತು ಮಥನದೊಳಿಂದು

ಇಂದ್ರನು ಇತ್ತನು ಜನಕನಿಗಂದು ।೨೧। (ಕೀ ೧೧೫, ಸಂ.೨೪)

ಹೀಗೆ ಬಹಳ ಸಂಕ್ಷೇಪವಾಗಿ ಚೂಡಾಮಣಿ ವೃತ್ತಾಂತವನ್ನು ಹಾಡಿದ್ದಾರೆ.

ಹನುಮ ಮಾಡಿದ ಸಮುದ್ರೋಲ್ಲಂಘನ, ಸೀತಾದರ್ಶನ. ಲಂಕಾದಹನ ಮುಂತಾದ ಮಹತ್ಕಾರ್ಯವನ್ನು ಹೊಗಳಿದ ರಾಮ ಹನುಮನಿಗೆ ಪ್ರತಿ ಉಪಕಾರವಾಗಿ ಆತನಿಗೆ ಆಲಂಗಿಸುತ್ತಾನೆ. ಹೀಗೆ ಹನುಮನಿಗೆ ವಾನರರೆದುರಿಗೆ ಹೊಗಳಿದ ಪ್ರಸಂಗವನ್ನು ಲಕ್ಷ್ಮೀನಾರಾಯಣದಾಸರು ಈ ರೀತಿ ಚಿತ್ರಿಸಿದ್ದಾರೆ.

ಏನು ಸಾಹಸವಂತ ಈ ನಮ್ಮ ಹನುಮಂತ ।ಪ।

ವಾನರರೇ ನೀವ್ ಕೇಳಿ ಇವನೆಂಥ ಧೀಮಂತ ।ಅ.ಪ.। (ಕೀ ೩೫೫, ಸಂ೨೭)

ಸಾಗರವನ್ನು ದಾಟಿದ್ದು ಸಾಮಾನ್ಯರಿಗೆ ಸಾಧ್ಯವಿಲ್ಲ. ಹೀಗೆ ದಾಟಿದವ ರಾವಣನ ಗರ್ವಭಂಗ ಮಾಡಿದ್ದನ್ನು

ಸಾಗರವ ದಾಟುವೊಡೆ ಸಾಧ್ಯವೇ ಪರರಿಗೆ

ಹೇಗೆ ಪೊಕ್ಕನೋ ಕಾಣೆ ದೈತ್ಯಪುರವ

ಹೋಗಿ ಪುನರಪಿ ಬಂದನೆಂತು ತಾ ಜೀವದಲಿ

ಬೀಗುತಿಹ ರಾವಣನ ಗರ್ವ ಮುರಿದಿಹನು ।೧।

ಭೂಮಿಸುತೆ ಸೀತೆಯ ಕ್ಷೇಮವಾರ್ತೆಯನೆನಗೆ

ನೇಮದಲಿ ತಂದಿತ್ತ ಕುಶಲಮತಿಯು

ಸ್ವಾಮಿ ಕಾರ್ಯವನಿಂತು ಸಾಧಿಸಿದ

ಈ ಮಹಾವೀರನಿಗೆ ಸಮರಾರು ಧರೆಯೊಳಗೆ (ಕೀ.೩೫೫, ಸಂ೨೭)

ಹನುಮ ಮಾಡಿದ ಎಲ್ಲಾ ಸಾಹಸಗಳನ್ನು ವಾನರೆದುರಿಗೆ ವಿವರಿಸಿ ಈತನ ಸ್ವಾಮಿ ಕಾರ್ಯ ಮೆಚ್ಚಿ ಆತನಿಗೆ ಪ್ರತಿಫಲವಾಗಿ ಕೊಡಲು ತನ್ನ ಬಳಿ ಏನಿಲ್ಲವೆಂದು ಅತಿ ಉತ್ತಮವಾದ ಆಲಿಂಗವನ್ನು ಹನುಮನಿಗೆ ಕೊಡುತ್ತಾನೆ. ಈ ಪ್ರಸಂಗ ಈ ರೀತಿ ಬಂದಿದೆ.

ಮಿತಿಯಿಲ್ಲದುಪಕಾರ ಮಾಡಿಪೆನಿವಗಿನ್ನು

ಪ್ರತಿಫಲವ ನಾನೇನು ಕೊಡಬಲ್ಲೆನು।

ಪ್ರತಿಯಿಲ್ಲದೆನ್ನ ಆಲಿಂಗನವನೀವೆ ಶ್ರೀ

ಪತಿ ಕರಿಗಿರೀಶನ ಪರಮಭಕ್ತನು ಈತ ।೩। (ಕೀ ೩೫೫, ಸಂ೨೭)

ಇಲ್ಲಿ ರಾಮನು ಸೀತೆಯ ಪ್ರತಿ ಹೊಂದಿದ್ದ ಪ್ರೀತಿ, ಆಕೆಯ ಕ್ಷೇಮದ ವಾರ್ತೆ ಕೇಳುವ ಕಾತುರ ವ್ಯಕ್ತವಾದರೆ ಕೊನೆಯ ಕೀರ್ತನೆಯಲ್ಲಿ ಹನುಮನ ಸಾಹಸವನ್ನು ರಾಮನ ಹೊಗಳಿಕೆಯ ಮಾತುಗಳಿಂದ ತಿಳಿಯಬಹುದು. ಮೇಲಿನೆರಡು ಪ್ರಸಂಗಗಳನ್ನು ಸುಂದರಕಾಂಡ ಮತ್ತ ಯುದ್ಧಕಾಂಡದಲ್ಲಿ ಬಂದಿದ್ದು ಆದರೆ ಇಲ್ಲಿ ಈ ಪ್ರಸಂಗಗಳು ಒಟ್ಟಿಗೆ ವಿವೇಚಿಸಲಾಗಿದೆ.

ಯುದ್ಧಕಾಂಡದ ಪ್ರಸಂಗಗಳು

ವಿಭೀಷಣ ಶರಣಾಗತಿ:–

ರಾವಣನ ತಮ್ಮ ವಿಭೀಷಣನು ಸೀತೆಯನ್ನು ರಾಮನಿಗೆ ಒಪ್ಪಿಸುವಂತೆ ರಾವಣನಿಗೆ ಬುದ್ಧಿವಾದ ಹೇಳಲು ರಾವಣ ಅವನನ್ನು "ನೀನು ಜ್ಞಾನಿ. ನನ್ನ ವಿನಾಶಕ್ಕಾಗಿಯೇ ಕಾದಿರುವೆ. ನೀನು ಕುಲಗೇಡಿ" ಎಂದು ದೊಡ್ಡ ಸಭೆಯಲ್ಲಿ ಎಲ್ಲರ ಎದುರಿಗೆ ಬೈದು ಛೀಮಾರಿ ಹಾಕುತ್ತಾನೆ. ಇಷ್ಟು ಅವಮಾನವಾದ ಮೇಲೆ ಇನ್ನು ಇಲ್ಲಿರುವುದು ಅಗೌರವ ಎಂದು ವಿಭೀಷಣ ರಾವಣನನ್ನು ತೊರೆದು ರಾಮನಲ್ಲಿ ಹೊಕ್ಕುತ್ತಾನೆ. ರಾಮನು ಆತನಿಗೆ, ಸಲಭಯ ಪ್ರದಾನ ಮಾಡಿ ಲಂಕಾರಾಜ್ಯದ ವಾಗ್ದಾನವಿತ್ತು ಅಲ್ಲೇ ಪೂರ್ವಾಭಾವಿ ಪಟ್ಟಾಭಿಷೇಕ ಮಾಡುತ್ತಾನೆ.

ದೈತ್ಯನಾದ ವಿಭೀಷಣನಿಗೊಲಿದ ರಾಮನನ್ನು ಶರಣಾಗತ ರಕ್ಷಕ ಎಂದು ಹೊಗಳುತ್ತ ಹರಿದಾಸರು ಈ ರೀತಿ ಹಾಡಿದ್ದಾರೆ. ಶ್ರೀಪಾದರಾಜರು

ಹಿಂದ್ವೈರಿ ದೆಸೆಯಿಂದ ಬಂದ ವಿಭೀಷಣನು
ತಂದೆಯ ಕಡೆಯವನೇನೋ
ಕುಂದು ಕುಂದೆಣಿಸದೆ ಕಾಯಿದಿ ಘಂಟಾಕರ್ಣ
ಎಂದಾ ಮಾತಿನ ಬಗೆಯೇನೂ (ಕೀ.೨೦, ಸಂ.೧)

ಎನ್ನುತ್ತ ರಾಮ "ಅವರು ನಿನ್ನ ಕಡೆಯವರೆಂದೇನೂ ನೀನು ಉದ್ಧರಿಸಲಿಲ್ಲ ನಿಜವಾದ ಕಾರಣ ನೀನು ಆಪದ್ಬಾಂಧವನೆಂಬುದನ್ನು ಹೇಳಿದ್ದಾರೆ.

ಸೋದರಗೆ ಬುದ್ಧಿಯನು ಪೇಳೆ
ಕೇಳದೆಯಿರಲು ಪಾಥಾರಿ ದಾಟಿ ನಿಮ್ಮ ಸೇವಿಸಿ
ಕಾದಿ ರಾವಣನ ಛೇದಿಸಿ ಲಂಕಾಪುರ ಪದವಿ
ಆ ದಿನಪ ಶಶಿವುಳ್ಳ ಪರಿಯಂತ ಕೊಡಲಿಲ್ಲವೆ (ಕೀ.೨೨, ಸ೯.೯/೧)

ಎಂದು ವಿಜಯದಾಸರು ವಿಭೀಷಣನ ಸದ್ಗುಣ, ಹರಿಯ ಶರಣಾಗತ ಗುಣವನ್ನು ಹಾಡಿದ್ದಾರೆ. ವರದೇಶ ವಿಠಲರು ಹರಿಗೆ ನಂಬಿದವರು ಉದ್ಧಾರವಾಗುವರು ಎನ್ನುವುದಕ್ಕೆ ವಿಭೀಷಣನ ಉದಾಹರಣೆ ನೀಡಿದ್ದಾರೆ.

ನಿನ್ನದ್ವೇಷದಿ ರಾವಣಾದಿಗಳು ಮಡಿದರು
ನಿನ್ನ ಪೊಂದಿದ ವಿಭೀಷಣ ರಾಜ್ಯ ಪಡೆದ ।೩। (ಕೀ ೧೦, ಸಂ.೨೬)

ವಿಭೀಷಣ ತನ್ನ ಅಣ್ಣನಿಗೆ ಅವನ ಪಾಪಕರ್ಮದ ಬಗ್ಗೆ ತಿಳಿಸಿ ಸೀತೆಯನ್ನು ರಾಮನಿಗೆ ಹಿಂದಿರುಗಿಸಲು ಹೇಳಿದ ರೀತಿಯನ್ನು ಪುರಂದರದಾಸರು ಹೀಗೆ ಹೇಳಿದ್ದಾರೆ.

ಛಲಬೇಡ ರಾಮನ ಲಲನೆಯ ಬಿಡು ಎಂದು

ತಲೆದತ್ತರವಗೆ ಪೇಳಲು ತಮ್ಮನ್ನು

ಬಳಲಿಸಿ ಹೊರಡಿಸಿ ಅವ ನಿನ್ನ ಮೊರೆ ಹೋಗಲು

ಸಲೆ ವಿಭೀಷಣಗೆ ಲಂಕೆಯನಿತ್ತುದನ್ನು ಕೇಳಿ ।೬। (ಸಂ.೩/೨)

ಇಲ್ಲಿ ವಿಭೀಷಣ ರಾವಣ ವಾಗ್ವಾದವಿದ್ದು ಧರ್ಮಾನುಧರ್ಮದ ಸಂಘರ್ಷವಿದ್ದು, ಧರ್ಮಕ್ಕೆ ಸಂಕಟಬಂದರೂ ಜಯ ಅಧರ್ಮಕ್ಕಲ್ಲ ಧರ್ಮಕ್ಕೆ ಎಂಬುದನ್ನು ಈ ಘಟನೆಯ ಮೂಲಕ ತಿಳಿಸಿದ್ದಾರೆ.

ನಂಬಿದ ವಿಭೀಷಣನಿಗೆ ರಾಮನಾದ

ನಂಬದಿದ್ದ ರಾವಣಗೆಯಮನೇ ಆದ ।೧। (ಕೀ ೩೬, ಸಂ>೩/೨)

ರಾಮನಿಗೆ ನಂಬಿದ್ದ ವಿಭೀಷಣ ರಾವಣನಿಗೂ ರಾಮನ ಶಕ್ತಿ ಪರಾಕ್ರಮ ತಿಳಿಸಿ ಸೀತೆಗೆ ಅವನನ್ನು ನೀಡಿ ತನ್ನ ಜೀವ ಉಳಿಸಿಕೊಳ್ಳಲು ಹೇಳಿದಾಗ ಅದನ್ನು ತಿರಸ್ಕರಿಸಿದ ರಾವಣನಿಗೆ ರಾಮ ಯಮನಂತಾದ ಎಂಬುದನ್ನು ಬಹಳ ಅರ್ಥಪೂರ್ಣವಾಗಿ ಹಾಡಿದ್ದಾರೆ.

ವಿಭೀಷಣ ಲಂಕೆಯನ್ನು ತೊರೆದು ಸಮುದ್ರದಾಟಿ ರಾಮನ ಸೇನಾ ಬಿಡಾರಕ್ಕೆ ಬಂದು ಶರಣಾಗತನಾಗಲು ನಿಂತಿದ್ದಾಗ, ಸುಗ್ರೀವ, ಮೈಂದ, ಜಾಂಬವಂತ ಅಂಗದ ಎಲ್ಲರೂ ಈತನ ಪ್ರತಿ ಶಂಕೆಗೊಂಡು ಆತನನ್ನು ಪರೀಕ್ಷಿಸಲು ರಾಮನಿಗೆ. ಸಲಹೆ ನೀಡಿದಾಗ ಹನುಮಂತ ನೋಡಲು ಸೌಮ್ಯನಾಗಿದ್ದಾನೆ. ದುಷ್ಟತನ ಕಾಣಿಸುವುದಿಲ್ಲ. ಈತನನ್ನು ಅನುಗ್ರಹಿಸಬೇಕೆಂದು ತನ್ನ ವಿಚಾರ ಮುಂದಿಡುತ್ತಾನೆ ಇದನ್ನು ಅಂಗೀಕರಿಸಿ ರಾಮ ವಿಭೀಷಣನಿಗೆ ಅಭಯ ಪ್ರಧಾನವಿತ್ತು ಲಂಕಾ ರಾಜ್ಯಾಭಿಷೇಕ ಮಾಡಿಸುತ್ತಾನೆ.

ಹನುಮಂತನ ವಿಚಾರ ಅಂಗೀಕರಿಸಿದ ಅಂಶವು ಮಧ್ವಪರಂಪರೆಯಲ್ಲಿ ಮಹತ್ವ ಪಡೆದಿದೆ. "ಹನುಮಂತನ ವಿಚಾರ ಶ್ರೀರಾಮನಿಗೆ ಸಮ್ಮತವಾಗಿದ್ದರೆ ಶ್ರೀರಾಮನ ವಿಚಾರ ಹನುಮಂತನಿಗೆ ಸಮ್ಮತ" ಇದನ್ನೇ ಪುರಂದರದಾಸರು ಹೀಗೆ ಹಾಡಿದ್ದಾರೆ.

ಹನುಮನ ಮತವೇ ಹರಿಯ ಮತವು

ಹರಿಯ ಮತವೇ ಹನುಮನ ಮತವು ।ಪ।

ಹನುಮನು ಒಲಿದರೆ ಹರಿತಾನೊಲಿವನು ।

ಹನುಮನು ಮುನಿದರೆ ಹರಿ ಮುನಿವ ।ಅ.ಪ।

ಹನುಮನ ಒಲಿದ ವಿಭೀಷಣ ಗೆದ್ದ

ಹನುಮನು ಮುನಿಯಲು ರಾವಣ ಬಿದ್ದ ।೨। (ಕೀ.೧೬೬, ಸಂ.೩/೧)

ಇದೇ ವಿಷಯವನ್ನು ಮೋಹನದಾಸರು ಈ ರೀತಿ ವಿವರಿಸಿದ್ದಾರೆ

ಹನುಮಗ್ಗುರಿ ಒಲಿಯಲು ರಾವಣನ ಒಂದು

ಕ್ಷಣದೊಳಗೆ ಹರಿ ಖಂಡಿಸಿದನು

ಅನುಮಾನವಿಲ್ಲದೆ ಅವನನುಜ ವಿಭೀಷಣಗೆ

ಘನ ಪದವಿಯನಿತ್ತ ಹನುಮ ಬೋಧಿತ ಹರಿ ।೨। (ಕೀ.೧೫, ಸಂ.೧೩)

ಮುಖ್ಯಪ್ರಾಣನಾದ ಹನುಮಂತನು ಗುರುಮುಖ್ಯ ಈತನನ್ನನುಸರಿಸಿಯೇ ಶ್ರೀಹರಿಯ ಸಾನಿಧ್ಯ ಪಡೆಯಲು ಸಾಧ್ಯ ಎಂಬ ತಾತ್ಪರ್ಯ ಇಲ್ಲಡಗಿದೆ.

ಹರಿದಾಸರಿಗೆ ರಾಮಾಯಣದಲ್ಲಿ ಮನಸ್ಸೆಳೆದ ಪ್ರಸಿದ್ಧ ಸನ್ನಿವೇಶವೆಂದರೆ ದುಷ್ಟರಾವಣ ವಧೆ ಶಿಷ್ಟನಾದ ವಿಭೀಷಣನಿಗೆ ಪಟ್ಟಾಭಿಷೇಕ ಈ ಎರಡು ಘಟನೆಗಳು ಬೇರೆ ಬೇರೆಯಾದರೂ ಇದನ್ನು ಹರಿದಾಸರು ಜೊತೆಜೊತೆಯಾಗಿ ಹಲವಾರು ಕೃತಿಗಳಲ್ಲಿ ಹಾಡಿದ್ದಾರೆ. ಶ್ರೀರಾಮನನ್ನು ಸ್ತುತಿಸಿದಾಗ ಶರಣಾಗತನ, ಗುಣಾವಗುಣಗಳನ್ನು ನೋಡದೆ ಅವನಲ್ಲಿ ಕಾರುಣ್ಯ ತೋರಿಸಿ ಶರಣಾಗತ ರಕ್ಷಕನಾದ ಎಂಬ ವಿಚಾರ ಬಂದ ಸಂದರ್ಭದಲ್ಲೆಲ್ಲ ವಿಭೀಷಣ ಶರಣಾಗತಿ ಪ್ರಸಂಗವನ್ನು ಹರಿದಾಸರು ಹಾಡಿಹೊಗಳಿದ್ದಾರೆ.

ಸಂಜೀವಿನಿ ಪರ್ವತ ತಂದದ್ದು:-

ಹನುಮಂತ ಸೀತೆಯನ್ನು ಲಂಕೆಯಲ್ಲಿ ಕಂಡು ಬಂದ ನಂತರ ರಾಮ ಕಪಿಸೇನಾಸಮೇತನಾಗಿ ಹೊರಟು ಸಮುದ್ರದ ದಡವನ್ನು ಸೇರುತ್ತಾನೆ. ಲಂಕೆಗೆ ಹೋಗಲು ಸೇತುವೆ ನಿರ್ಮಾಣ ಕಾರ್ಯಕ್ಕಾಗಿ ಸಮುದ್ರರಾಜನನ್ನು ಮನವೊಲಿಸಲು ಸಮುದ್ರದ ದಡದಲ್ಲಿ ದರ್ಭೆಗಳನ್ನು ಹಾಸಿ ಸಮುದ್ರಕ್ಕೆ ಕೈಜೋಡಿಸಿ ಮೂರು ದಿನಗಳವರೆಗೆ ಪವಡಿಸುತ್ತಾನೆ. ಈ ಸಂದರ್ಭವನ್ನು ಪ್ರಸನ್ನ ವೆಂಕಟದಾಸರು **"ಪಾಲಿಸು ವಾರಿಧಿ ಕೂಲದಿ ದರ್ಭಶಾಯಿ "(ಕೀ೧೧೦೨, ಸಂ. ೮)** ಎಂದು ಒಂದು ವಾಕ್ಯದ ಮೂಲಕ ತಿಳಿಸಿದ್ದಾರೆ. ವಿಶ್ವಕರ್ಮನ ಮಗನಾದ ನಳನು ರಾಮನಾಜ್ಞೆಯಿಂದ ಸಾವಿರಾರು ಕಪಿಗಳೊಡನೆ ಕೂಡಿ ಸೇತುಬಂಧನಕ್ಕೆ ಕಲ್ಲು ಹಾಕಿದಷ್ಟು ಮುಳುಗುತ್ತಿದ್ದವು. ಆಗ ಕಪಿಗಳು ರಾಮನ ಹೆಸರಿನಿಂದ ಒಗೆದ ಕಲ್ಲುಗಳು ತೇಲಿ ಸೇತುಬಂಧನ ಪೂರ್ಣಗೊಂಡಿತು. ಈ ಪ್ರಸಂಗವು ವಾಲ್ಮೀಕಿ ರಾಮಾಯಣ ಮತ್ತು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲೂ ಇಲ್ಲ. ಬಹುಶಃ ಇನ್ನಿತರ ಪುರಾಣಗಳಲ್ಲಿ ಉಕ್ತವಾಗಿರಬಹುದಾದ ಈ ವಿಷಯವನ್ನು ಹರಿದಾಸರು ಶ್ರೀರಾಮನ ಮಹಿಮೆ ಹಾಡಬೇಕಾದ್ದಲ್ಲಿ ಬಳಸಿಕೊಂಡಿದ್ದಾರೆ. **"ರಾಮನಾಮವೆ ತಾ ಪಾಪಕೆ ತಾ ನಾಮ ತೇಲಿಸಿತು ನೀರೊಳು ಪರ್ವತ" (ಕೀ ೧೨೫, ಸಂ೬/೧)** ಎಂದು ಕಾಖಂಡಕಿ ಶ್ರೀಮಹಿಪತಿದಾಸರು ಈ ಪ್ರಸಂಗವನ್ನು ಮೇಲಿನಂತೆ ಉಲ್ಲೇಖಿಸಿದ್ದಾರೆ.

ಸೇತುಬಂಧನದ ನಂತರ ಲಂಕೆಯಲ್ಲಿ ರಾಮಾಯಣ ಭೀಕರ ಯುದ್ಧ ನಡೆಯುತ್ತದೆ. ಈ ಯುದ್ಧಕ್ಕೆ ಮೊದಲು ಪ್ರವೇಶಿಸಿದ ರಾವಣನ ಹಿರಿಯ ಮಗ ಇಂದ್ರಜಿತು ರಾಮಲಕ್ಷ್ಮಣರನ್ನು ನಾಗಪಾಶಧಿಂದ ಬಂಧಿಸಿದಾಗ ಗರುಡದೇವನು ಬಂದು ಅವರನ್ನು ಅಸ್ತ್ರ ಬಂಧನದಿಂದ ಮುಕ್ತಗೊಳಿಸುತ್ತಾನೆ. ಗರುಡದೇವನು ಮಾಡಿದ ಈ ಕಾರ್ಯವನ್ನು ಹರಿದಾಸರು ಹನುಮಂತ ಮಾಡಿದನೆಂದು ವರ್ಣಿಸಿದ್ದಾರೆ.

ಉರಗ ಬಂಧಕೆ ಸಿಲುಕಿ ಕಪಿವರರು ಮೈಮರೆಯ

ತರಣಿ ಕುಲತಿಲಕನಾಜ್ಞೆಯ ತಾಳಿದ

ಗಿರಿ ಸಹಿತ ಸಂಜೀವನ ಕಿತ್ತಿ ತಂದಿತ್ತು (ಕೀ.೯೩, ಸಂ.೧)

ಎಂದು ಶ್ರೀಪಾದರಾಜ ತಮ್ಮ 'ಮಧ್ವನಾಮ'ದಲ್ಲಿ ಹಾಡಿದ್ದರೆ ಇದೇ ವಿಷಯವನ್ನು ಗುರುಜಗನ್ನಾಥದಾಸರು

ಪಾವಿನ ಬಾಣದಿ ರಾವಣಿ ಲಕ್ಷ್ಮಣ

ಜೀವನ ಕಳೆಯಲು ರಾಮ

ಸೇವಕ ಹನುಮನು ದೇವನ ತಮ್ಮಗೆ (ಸಂ.೩೪)

ಜೀವವಿತ್ತನು ರಾಮ

ಇಲ್ಲಿ ಗಮನಿಸಬೇಕಾದ ಅಂಶಗಳೇನೆಂದರೆ ಇಂದ್ರಜಿತು ಬಿಟ್ಟ ನಾಗಪಾಶದಿಂದ ಪ್ರಾಣಾಪಾಯದಲ್ಲಿದ್ದ ರಾಮಲಕ್ಷ್ಮಣ ಕಪಿಗಳನ್ನು ಬದುಕಿಸಲು ಹನುಮ ಸಂಜೀವನ ಪರ್ವತವನ್ನು ತಂದನೆಂದು ಹೇಳಿದ್ದಾರೆ. ಆದರೆ ಮೂಲ ವಾಲ್ಮೀಕಿ ರಾಮಾಯಣದಲ್ಲಿ ರಾಮಲಕ್ಷ್ಮಣರಿಗೆ ನಾಗಪಾಶ ಬಿಡಿಸಲು ಗರುಡದೇವ ಬಂದಿರುತ್ತಾನೆ ಮತ್ತು ಹನುಮ ಸಂಜೀವಿನಿ ಪರ್ವತವನ್ನು ತರುವುದು. ಇಂದ್ರಜಿತು ಬಿಟ್ಟ ಬ್ರಹ್ಮಾಸ್ತ್ರದಿಂದ ಮೂರ್ಛಿತರಾದ ರಾಮ-ಲಕ್ಷ್ಮಣರನ್ನು ಎಚ್ಚರಿಸಲು ಜಾಂಬವಂತನ ಮಾತಿನಂತೆ. ಮೇಲಿನ ಎರಡೂ ಪ್ರಸಂಗಗಳನ್ನು ಮೇಳೈಸಿ ಹರಿದಾಸರು ಗರುಡದೇವನ ಹೆಸರನ್ನು ಹೇಳದೆ ಕೇವಲ ಹನುಮನನ್ನು ಗುರುತಿಸುತ್ತಾರೆ. ಕಾರಣ ದ್ವೈತ ತತ್ತ್ವದ ಅನುಯಾಯಿಗಳಾದ ಹರಿದಾಸರು ಗರುಡದೇವನಿಗೆ ಪ್ರಾಶಸ್ತ್ಯ ನೀಡದೆ ವಾಯುದೇವರ ಪ್ರಥಮಾವತಾರದ ಹನುಮಂತನಿಗೆ ಮನ್ನಣೆ ನೀಡಿರುವುದರಿಂದ.

ಹನುಮ ಮಾಡಿದ ಪರಾಕ್ರಮಗಳನ್ನು ಎಲ್ಲಾ ಹರಿದಾಸರು ಒಂದೊಂದು ವಾಕ್ಯದಲ್ಲಾದರೂ ಹಾಡಿದ್ದಾರೆ. ಇದರಲ್ಲಿ ಹನುಮ ಸಂಜೀವಿನೀ ಪರ್ವತವನ್ನು ತಂದ ಸನ್ನಿವೇಶವಂತೂ ಸರ್ವೇಸಾಮಾನ್ಯವಾಗಿದೆ. ವಾದಿರಾಜರು ಈ ಪ್ರಸಂಗವನ್ನು ಹೀಗೆ ಬಣ್ಣಿಸಿದ್ದಾರೆ.

ಒಂದು ನಿಮಿಷಕೆ ಪೋಗಿ ಸಂಜೀವನವ ತಂದೆ (ಕೀ ೧೩೨. ಸಂ೨)

ಹಾಗೂ ವಿಜಯ ರಾಮಚಂದ್ರ ವಿಠಲದಾಸರು

ದೇವೇಶನಾಜ್ಞೆಯಲ್ಲಿ ಜೀವೇಶ ಸಂಜೀವ

ಪರ್ವತ ತಂದು ಕಪಿಸೈನ್ಯ ಎಬ್ಬಿಸಿ

ಮೊದಲೆಡೆಗೆ ಬಗೆದ ಕುಶಲಾತ್ಮ ।೬। (ಕೀ ೮೩, ಸಂ.೨೭)

ಇಲ್ಲಿ ದೇವೇಶನಾಜ್ಞೆ (ರಾಮ)ಯಿಂದಾಗಿ ಸಂಜೀವಿನಿ ಪರ್ವತವನ್ನು ತಂದನೆಂದು ಹೇಳಿದ್ದಾರೆ. ಆದರೆ ಹನುಮ ಸಂಜೀವಿನಿ ಪರ್ವತ ತಂದದ್ದು ಬ್ರಹ್ಮಾಸ್ತ್ರದಿಂದ ಮೂರ್ಛಿತರಾದಾಗ ಜಾಂಬವಂತನ ಸಲಹೆ ಮೇರೆಗೆ ಹಿಮಾಲಯಕ್ಕೆ ಹೋಗಿ ಸಂಜೀವಿನಿ ಪರ್ವತ ತರುವುದು. ಇದೇ ಸಂದರ್ಭವನ್ನು ಹರಪನಹಳ್ಳಿ ಭೀಮವ್ವನವರು ಹನುಮ ಸಂಜೀವಿನಿ ಪರ್ವತ ತಂದದ್ದು ಕಪಿ ಸೈನ್ಯವನ್ನು ಬದುಕಿಸಲೆಂದು ತಿಳಿಸಿದ್ದಾರೆ.

ಅಂಜನಾತ್ಮಜ ದೊಡ್ಡ ಸಂಜೀವನವ ತಂದು

ಕೊಂದ ಕಪಿಗಳ ಪ್ರಾಣ ಪಡೆವನೀತ (ಕೀ.೩೬, ಸಂ.೧೯)

ಕಾಖಂಡಕಿ ಕೃಷ್ಣದಾಸರು

ಕ್ಷಣದಲಿ ಸಂಜೀವನ ಗಿರಿ ತಂದಿಹ

ಪದವೋ ಸಾಧುರ ಮುದವೋ

ವನಜ ಭವನ ಪದವಿಯ ಪಡಕೊಂಡಾ

ತಪವೋ ತಾ ಅಪರೂಪವೋ (ಕೀ.೫೮, ಸಂ೧೧/೧)

ಇಲ್ಲಿ ಸಂಜೀವಿನಿ ಗಿರಿ ತಂದ ಹನುಮನ ಪರಾಕ್ರಮ ಕಂಡು ಸಂತೋಷಿತನಾದ ಶ್ರೀರಾಮನು ಬ್ರಹ್ಮಪದವಿ ನೀಡಿದ ಎಂದು ಉಲ್ಲೇಖಿಸಿದ್ದಾರೆ.

ಸಂಜೀವಿನೀ ಗಿರಿಯ ಔಷದೋಪಚಾರದಿಂದ ಮೇಲೆದ್ದ ಶ್ರೀರಾಮ ಲಕ್ಷ್ಮಣರು ಮತ್ತೆ ಯುದ್ಧಕ್ಕೆ ಬಂದ ಇಂದ್ರಜಿತನನ್ನು ಲಕ್ಷ್ಮಣ ಐಂದ್ರಾಸ್ತ್ರದ ಮೂಲಕ ಕೊಲ್ಲುತ್ತಾನೆ. ಇಂದ್ರಜಿತನ ಮರಣದಿಂದ ಆತನ ಪತ್ನಿಯಾದ ಸುಲೋಚನಾಳ ಪ್ರಲಾಪ ಮತ್ತು ಆಕೆಯ ಅಗ್ನಿಪ್ರವೇಶವನ್ನು ಜಕ್ಕಪ್ಪಯ್ಯನವರು ತಮ್ಮ ಕೃತಿಯಲ್ಲಿ ಹೀಗೆ ವಿವರಿಸಿದ್ದಾರೆ.

ಸುಲೋಚನ ವಿಲಾಪ

ಜಕ್ಕಪ್ಪಯ್ಯನವರು "ಸುಲೋಚನ ಪ್ರಲಾಪ" ಎಂಬ ದೀರ್ಘ ಕೀರ್ತನೆ ರಚಿಸಿದ್ದು. ಇದರ ಮೂಲ ಕೃಷ್ಣದಾಸ ಮುದಗಲ್ಲರವರ 'ಯುದ್ಧಕಾಂಡ'ವೆಂಬ ಮರಾಠಿ ಕಾವ್ಯವಾಗಿದೆ. ಈ ಸುಲೋಚನಾ ಆಖ್ಯಾನವು ವಾಲ್ಮೀಕಿಯ ಮೂಲ ರಾಮಾಯಣದಲ್ಲಿಲ್ಲ. ಆದರೆ ವೇದವ್ಯಾಸರ ಅಗ್ನಿಪುರಾಣದಲ್ಲಿ ಈ ಸುಲೋಚನ ಪ್ರಲಾಪ ಆಖ್ಯಾನವನ್ನು ಕಾಣಬಹುದು.

ಸುಲೋಚನೆಯು ಇಂದ್ರಜಿತನ ಮಡದಿ. ಇಂದ್ರಜಿತನು ರಣರಂಗದಲ್ಲಿ ಮಡಿದಾಗ ಆತನ ಶಿರವನ್ನು ರಾಮನಿಂದ ಪಡೆದು ಸತಿಸಹಗಮನ ಮಾಡುವ ವಸ್ತು ಈ ಕಾವ್ಯದ್ದಾಗಿದೆ. ಈ ಪ್ರಸಂಗವನ್ನು ಜಕ್ಕಪ್ಪಯ್ಯನವರು ಬಹಳ ದೀರ್ಘವಾಗಿ ವರ್ಣನಾತ್ಮಕವಾಗಿ ಈ ರೀತಿ ರಚಿಸಿದ್ದಾರೆ. ಇಂದ್ರಜಿತನು ವಿಜಯ ಪ್ರಾಪ್ತಿಗಾಗಿ ಒಂದು ಯಾಗವನ್ನು ಪ್ರಾರಂಭಿಸಿದಾಗ ಅದನ್ನು ತಿಳಿದ ಕಪಿವೀರರು ಅದನ್ನು ಧ್ವಂಸಗೊಳಿಸಿ ಇಂದ್ರಜಿತು ಲಕ್ಷ್ಮಣರ, ಘೋರ ಯುದ್ಧದಲ್ಲಿ ಇಂದ್ರಜಿತನು ಮಡಿಯುತ್ತಾನೆ. ಈ ಯುದ್ಧದ ವೇಳೆ ಅರಮನೆಯಲ್ಲಿದ್ದ ಇಂದ್ರಜಿತನ ಪತ್ನಿ ಸುಲೋಚನೆಯ ರೂಪಿನ ವರ್ಣನೆ ಅತ್ಯಂತ ಸುಂದರವಾಗಿ ಬಂದಿದೆ.

ಮಂಗಲ ಮೃಗನಯನಿ ಸುಲೋಚನಿ

ನೀರೆ ಗುಣಾಗ್ರಣಿ । ಚಾರು ಯೌವನ ಖಣಿ ।

ಕೀರವಾಣಿ ತರುಣಿ । ಶಿರೋಮಣಿ ।೧।

ಮೂಗು ಸಂಪಿಗೆಯೆನೀ । ಮೂಗುತಿ ಸುಪಾಣಿ

ಯೋಗಿ ಸುಜನ ಮೋದಿನಿ (ಮೋಹಿನಿ) ನಗಾಂಗನಿ ।೪।

ರದ ಮೌಕ್ತಿಕ ಮಣಿ । ಮದನ ದಿವ್ಯಾಂಗಿನಿ।

ಮದ ಮುಖರಿದಿ ತಲ್ಲಣಿ । ಅಧಿಕ ಗುಣಿ ।೫।

ಕಂಬು ಕಂದ ಮಣಿ । ಬಿಂಬ ಸುಧಾಮಣಿ ।

ಕುಂಭ ಸಮಾನ ಸ್ತನಿ । ನಿತಂಬಿನಿ ।೬।

ಉದರ ತ್ರಿವಳಿಸುರ। ನದಿ ಕಿರುತೆರೆ ಕರ ।

– – – – – – – – – – – – –

ಪದುಮ ಮಣಿ ವಜ್ರದುಂಗುರ । ಪದರ ಹಾರಿ ।೭।

ಹೀಗೆ ಸುಲೋಚನೆಯ ರೂಪಿನ ವರ್ಣನೆ ಬಂದಿದ್ದು. ಇವಳ ಮನೆಯಂಗಳದಲ್ಲಿ ಇಂದ್ರಜಿತನ ಹಸ್ತವು ಬಂದು ಬೀಳುತ್ತದೆ. ಆ ಹಸ್ತವನ್ನು ನೋಡಿ ತನ್ನ ಪತಿಯ ಹಸ್ತವೇ ಎಂದರಿತಾಗ ಆ ಹಸ್ತವು ಭೂರ್ಜ ಪತ್ರದಲ್ಲಿ ಬರೆದ ಪತ್ರವನ್ನು ಈ ರೀತಿ ನಿರೂಪಿಸಿದ್ದಾರೆ.

ನಾಗೇಂದ್ರಾತ್ಮಜೆ ನಾಗಗಮನೆ ಮದನಾಗಮ

ದೇವತೆ ನ ಗರ್ವದಲಿ । ರಾಘವ ಸಹ

ಶತ್ರೌಘವ ಕೊಲ್ಲಲುದ್ಯೋಗವ ಮಾಡಿದೆ।

ಯಾಗ ಮುಖದಲಿ । ಮುಂಗಾಳವ ಹವಿಭಾಗ

ವಿತ್ತು ರುಧಿರಾಂಗ ವಿಧಾನದೊಳು ಗೌರವದಲಿ

ಸೋಗು ಮುಡಿದು ಜಯರಾದ ಸುಖಸೊಗ

ಸದಲಿ ರಾವಣಾದಿಗಳೆನುತಲಿ

ಇಂದ್ರಜಿತನ ಹಸ್ತವು ಮೇಲಿನ ಭಾಗದಲಿ ಇಂದ್ರಜಿತನು ವಿಜಯಿಯಾಗಲು ಮಾಡಿದ ಯಾಗದ ವಿಷಯ ತಿಳಿಸುತ್ತದೆ. ನಂತರ ಮುಂದುವರೆದು

ಸುಮಿತ್ರೆ ಕುಮಾರನು ಯಾಚಕ ಭೂರಿಯ ತಿಲಕ
ತರಣಿ ಕುಲೋದ್ಭವ ಪರಮ ಸುಪಾತ್ರನು
(ದೋರ_.ಚ_. ಯೂಯತಿ_ದೋಳ್)
ಎರೆಸಿದನೆಂದು ಕರೆದಿತ್ತೆನು ಕೇಳ್ ಶಿರಸವ
ಫಲಿಸುದು ವರ ಸಾಯೋಜ್ಯದ ಶಿರಿತನಿಗಿಂದು!
ಗಿರಿಮಂದಾರ (ದನ ತದಿ) ರಣಭೂಮಿಯೊಳು
ಉರಿವ್ರತ ಕಾಯವು ಮೋಹಕದು ನಿಂತು
ಶಿರ ರಘುರಾಮನ ದರುಶನ ಕೈದಿಹಲು ಕರೆಯಲು
ಕಳುಹಿದೆ ಕರ ನಿನಗೆಂದು.

ಹೀಗೆ ಆ ಹಸ್ತವು ಇಂದ್ರಜಿತ ಮನಾಭಿಲಾಷೆಯನ್ನು ತಿಳಿಸುತ್ತದೆ. ತನಗೆ ವೀರಮರಣ ದೊರೆತಿದೆ. ಸದ್ಗತಿ ಪಡೆಯಬೇಕಾದರೆ ರಣರಂಗದಲ್ಲಿ ನಿಂತಿರುವ ತನ್ನ ರುಂಡ ಮತ್ತು ರಾಮನ ಬಳಿ ಇರುವ ಮುಂಡವೆರಡನ್ನು ಕ್ರಿಯಾವಧಿ ಮಾಡಿದರೆ ಮಾತ್ರ ಸಾಧ್ಯ. ಆದ್ದರಿಂದ ಪತಿಶಿರೋಮಣಿ ಸುಲೋಚನೆ ನೀನು ರಾಮನ ಬಳಿ ಹೋಗಿ ತನ್ನ ಶಿರ ತಂದು ತನಗೆ ಸದ್ಗತಿ ನೀಡೆಂದು ಈ ಪತ್ರದ ಮುಖೇನ ತಿಳಿಸುತ್ತದೆ.

ಆ ಹಸ್ತ ಬರೆದ ಪತ್ರವನ್ನು ಓದುತ್ತಲೇ ಮೂರ್ಛಿತಳಾದ ಸುಲೋಚನೆ ಎಚ್ಚೆತ್ತು ರಾವಣನ ಬಳಿ ಹೋಗುತ್ತಾಳೆ. ಇಲ್ಲಿಂದ ರಾವಣ ಸುಲೋಚನೆಯರ ಹೃದಯ ವಿದ್ರಾವಕ ಪ್ರಲಾಪ ಆರಂಭವಾಗುತ್ತದೆ. "ನೀನು ಎಂಥ ಪರಾಕ್ರಮ, ದೇವತೆಗಳಿಗೂ ಕೂಡ ಅಜೇಯನಾಗಿದ್ದ ನೀನು. ಕ್ಷುದ್ರ ಮಾನವನ ಕೈಯಿಂದ ನಿನಗೆ ಹೇಗೆ ಮೃತ್ಯು ಬಂತು ಎಂದು ವಿಲಾಪಿಸುತ್ತಾಳೆ. ತನ್ನ ಎಲ್ಲಾ ರಾಜವೈಭವವನ್ನು ತ್ಯಜಿಸುತ್ತಾಳೆ.

ಪತ್ರದಲಿ ಕೇಳಿ ತಾನು ಪುತ್ರ ಮರಣವಾರ್ತೆಯನು
ಶತ್ರುರಿಂದಾನುದೇನು ಧಾತ್ರಿಗುರುಳಿ ಬಿದ್ದನು
ಎಚ್ಚತ್ತು ಸಾವಧನಾಗಿ ಹೆಚ್ಚಿತು ಶೋಕೋದ್ಭವವಾಗಿ
ಉತ್ಸಾಹವೆಲ್ಲ ತ್ಯಜಿಸಿತೆನಗೆ ಹುಚ್ಚು ಹೆಚ್ಚಿ ಹೋದಿ ಎನಗೆ
ನಾ ನಿನ್ನ ಭರವಸದಿಂದ ಜಾನಕಿಯನು ಇಲ್ಲಿಗೆ ತಂದೆ
ಭಾನು ಕುಲಜನ ಸಂಗಡ ದ್ವೇಷ ಅವಮಾನೆಂದು ಕಟ್ಟಿದೆ
ಶಚಿಪತಿ ದೇವರು ನಿನ್ಹೆಸರು ವಚನದಿ ಕೇಳುತ ನಡುವುರು
ಅಚಲ ಜಾವರ ಶಂಕರ ಕೋಪಿಸಿದನೆ ಶುಚಿಸುತ ಬಿಟ್ಟೋದ್ಯಾದೂರು

ಹೀಗೆ ರಾಕ್ಷಸರಾಜ ರಾವಣ ಸಾಮಾನ್ಯ ಮಾನವನಂತೆ ಪುತ್ರ ಮೃತ್ಯು ಶೋಕ ವ್ಯಕ್ತಪಡಿಸುತ್ತಿದ್ದಾಗ ಸುಲೋಚನೆ ವ್ಯರ್ಥ ಶೋಕದಿಂದೇನು ಪ್ರಯೋಜನ ನನ್ನ ಪತಿಯ ಶಿರವ ತಂದುಕೊಟ್ಟರೆ ಪತಿ ದೇಹದೊಡನೆ ಸಹಗಮನ ಮಾಡುವುದಾಗಿ ತಿಳಿಸುತ್ತಾಳೆ.

ಸತಿ ಎಂದಳು. ಮಾವ ನೀವೆನ್ನ ಕೈಯ

ಪತಿಶಿರವ ತಂದು ಈಯುದು ರಾಯ

ಸಹಗಮನಕುದ್ಯೋಗ ಮಾಡುಸುವದೈಯ್ಯಾ

ವೃಥ ಶೋಕದಿಂದಾಗುವುದು ಏನು ಕಾರ್ಯ

ಸುಲೋಚನೆಯ ಈ ಮಾತನ್ನು ಕೇಳಿ ಕೋಪಾಗ್ರನಾದ ರಾವಣ ರಾಮ, ಹನುಮರ ತಲೆ ಕಡಿದು ತರುವುದಾಗಿ ಹೇಳುತ್ತಾನೆ. ಮಂಡೋದರಿಯು ರಾವಣನ ಈ ಹೆಮ್ಮೆಯ ಮಾತುಗಳನ್ನು ಕೇಳಿ.

ಆ ಮಯಜಾ ಎಂದಳು ಶೇಷಕನ್ಯಾ

ರಾಮನರನಲ್ಲ ಮಹಾವಿಷ್ಣು ಅವತಾರ ಪೂರ್ಣ

ಈ ಮೌಳರಾಯಗೆ ಬರುವುದು ಎಂದೂ ಶೂನ್ಯ

ಸ್ವಾಮಿಗೆ ಪೋಗಿ ಶರಣೊಕ್ಕರೆ ಅಧಿಮಾನ್ಯ

ಶಂಕರ ಸಖಗೆ ಸ್ವತಃ ನೀನು ಹೋಗು ಶಿರ

ಪಂಕಜ ಬೇಡುದರಿಂ ಸ್ವಧರ್ಮವಾಗುದು ದ್ವಾರ.

ಮಂಡೋದರಿಯ ಮಾತಿನಂತೆ ಸುಲೋಚನೆ ರಾಮನ ಬಳಿ ಹೋಗಿ ಇಂದ್ರಜಿತನ ಶಿರ ತರಲು ಹೋಗುವುದಕ್ಕೆ ಸಿದ್ಧಳಾಗುತ್ತಾಳೆ. ಇಂದ್ರಜಿತನ ತಲೆಯನ್ನು ವೃಷಭನೆಂಬ ಕಪಿ ರಾಮನ ಬಳಿ ತೆಗೆದುಕೊಂಡು ಹೋಗಿರುತ್ತಾನೆ. ಹೀಗೆ ರಾಮನ ಬಳಿ ಹೊರಡಲು ಸಿದ್ಧಳಾದ ಸುಲೋಚನೆಯನ್ನು ತಡೆದು “ನೀನು ಹೋಗಬೇಡ ನಾನು ರಾಮನ ಪತ್ನಿ ಸೀತೆಯನ್ನು ಅಪಹರಿಸಿದ್ದೇನೆ ನೀನು ಹೋದರೆ ನಿನ್ನ ಹರಣವಾದೀತು ಎಂದೆಚ್ಚರಿಸುತ್ತಾನೆ. ಆಗ ರಾವಣೇಶ್ವರನ ಎದುರಿಗೆ ಸುಲೋಚನೆಯ ದಿಟ್ಟ ಉತ್ತರ ಇದಾಗಿತ್ತು.

ಅರಸಿಯ ಏಕವ್ರತನು ಪರನಾರಿ ಸೋದರನು

ಭಕ್ತಿನೋಡಿ ತಲೆಯನು ಮುಕ್ತಿಸಹ ಕೊಡುವನು

ಎಂದು ರಾಮನ ಕರುಣಾಭಾವವನ್ನು ರಾವಣೆದುರಿಗೆ ಹೊಗಳುತ್ತಾಳೆ. ಹೀಗೆ ರಾಮನ ಬಿಡಾರದತ್ತ ಹೊರಟ ಸುಲೋಚನೆಯನ್ನು ಕಂಡ ಕಪಿವೀರರು ‘ಸೀತೆ’ ಯೆಂದೇ ಭ್ರಮಿಸಿ ರಾಮನಿಗೆ ವಿಷಯವನ್ನು ತಿಳಿಸುವ ರೀತಿ ಇದಾಗಿತ್ತು.

ಸೀತೆ ಬಂದಳು ನಿಮ್ಮ

ಮಾತೆ ಎಮ್ಮ ಹರಿ ಸೀತೆ ಬಂದಳು

ಜ್ಯೇಷ್ಠ ಪುತ್ರನು ಯುದ್ಧದಿ ಭ್ರಷ್ಟಾಗಿ ಹೋದ ಎಂಬ ಭಯದಿ!

ಶ್ರೇಷ್ಠ ಸೀತೆಯ ಬೇಗದಿ ದಲುಪ್ಪನಟ್ಟ ಹರಿ.

ಇಂದ್ರಜಿತ ಹೋದ ಕೆಟ್ಟು ಇಂದ್ರಿಯಲ್ಲಿ ಭಯ ತೊಟ್ಟು

ಚಂದ್ರಮುಖಿಗೆ ರಟ್ಟು ಇಂದ್ರವಧ್ಯ ಕೊಟ್ಟು

ಎಂದಾಗ ರಾಮನು ರಾವಣನ ವಧವಾಗದ ಹೊರತು ಸೀತೆ ನಿಮಗೆ ಕಾಣಳು ಎಂದು ಕಪಿ ವೃಂದಕ್ಕೆ ಹೇಳುತ್ತಾನೆ. ಸುಲೋಚನೆಯು ಇಂದ್ರಜಿತನ ಕುಲವಧು: ಈಕೆ ತನ್ನ ಪತಿಯ ಶಿರ ಪಡೆಯಲು ಬಂದಿರುವುದಾಗಿ ವಿಭೀಷಣ ಸುಗ್ರೀವಾದಿಗಳ ಮೂಲಕ ತಿಳಿದು ರಾಮನು ನಾವು ಇಂದ್ರಜಿತನ ರುಂಡವನ್ನು ತಂದಿದ್ದೇವೆ ಇದು ನಿನಗೆ ಹೇಗೆ ತಿಳಿಯಿತು ಎಂದು ಕೇಳಿದಾಗ "ನನ್ನ ಪತಿಯ ಹಸ್ತವು ಒಂದು ಎಲ್ಲ ವೃತ್ತಾಂತವನ್ನು ಬರೆದು ತೋರಿಸಿತು" ಎಂದಾಗ ರಾಮನಿಗಾಶ್ಚರ್ಯವಾಗುತ್ತದೆ. ಸುಲೋಚನೆಯ ಮಾತಿನ ಮೇಲೆ ಉಳಿದವರಿಗೆಲ್ಲ ವಿಶ್ವಾಸವಾಗದೆ, ಈ ಚಮತ್ಕಾರ ನಿಜವಿದ್ದರೆ, ನಿನ್ನ ಪತಿಯ ಶಿರಕ್ಕೆ ಹಾಸ್ಯ ತಂದು ತೋರಿಸಿದರೆ ನೀನಾಡಿದ್ದನ್ನು ನಂಬುವುದಾಗಿ ಪತಿವ್ರತಾ ಪರೀಕ್ಷೆಯನ್ನು ಸುಲೋಚನೆಗೆದುರಿಗೆ ಇಡುತ್ತಾರೆ.

ಸುಲೋಚನೆಯು ತನ್ನ ಪಾವಿತ್ರ್ಯದ ಬಲದಿಂದ ಶಿರಕ್ಕೆ ನಿಶ್ಚಿತವಾಗಿ ಹಾಸ್ಯ ತರಿಸುವಳು ಎಂದು ರಾಮ ಉತ್ತರಿಸುತ್ತಾನೆ. ಶಿರವನ್ನೆತ್ತಿಕೊಂಡು ಆಕೆ ಪರಿಪರಿಯಾಗಿ ಬೇಡಿದರೂ ನಗದ ಇಂದ್ರಜಿತನ ತಲೆಯು

ನೂಕುವದು ಲಕ್ಷ್ಮಣ ಸಮರವೆಂದು

ಯಾಕೆ ಸೂಚಿಸಲಿಲ್ಲವೂ ಎನಗೆ ನೀನು

ಕಾಕೋದರಾಳಿಪತಿಯ ಕರೆಸಲು ಬಂದು

ಕಾಕುತ್ತನನು ಗೆಲುವಾ

ಕೇಳಿ ನಕ್ಕಿತು ಶಿರಸ ಬಲದ ಕಣ್ಣು

ಥಾಳಾಗಿ ತೆರೆಯು ಕಂಡು

ಮೇಲಿನ ಮಾತನ್ನು ಕೇಳಿದಾಕ್ಷಣ ನಕ್ಕ ಶಿರಸ್ಸಿನ ಹಿನ್ನೆಲೆ ವಾನರರು ಕೇಳಿದಾಗ ರಾಮ ಈ ರೀತಿ ಹೇಳುತ್ತಾನೆ. "ಸುಲೋಚನೆಯ ತಂದೆ ಆದಿಶೇಷ. ಲಕ್ಷ್ಮಣನು ಆದಿಶೇಷನ ಅವತಾರ ಅಂದರೆ ಲಕ್ಷ್ಮಣ ತನ್ನ ಅಳಿಯನಿಗೆ ಮೃತ್ಯು ತಂದನು. ಮೊದಲೇ ಲಕ್ಷ್ಮಣನನ್ನು ನೋಡಿದ್ದರಿಂದ ಇಂದ್ರಜಿತನ ಎಡಗಣ್ಣು ತೆರೆದದ್ದೇ ಇತ್ತು. ಅವನ ಬಲಗಣ್ಣು ನನ್ನನ್ನು ನೋಡಲು ಪೂರ್ಣ ತೆರೆಯಿತು" ಎನ್ನುತ್ತಾನೆ.

ಸಾಯೋಜ್ಯ ಪ್ರಾಪ್ತಿ ಶ್ರೀರಾಮನಿಂದ

ಆಯಿತು ಎಂಬೀ ಆನಂದದಿಂದ

ಲಕ್ಷ್ಮಣನಿಂದ ಮೃತ್ಯುಬಂದು ಶ್ರೀರಾಮನ ದರ್ಶನದಿಂದ ಸಾಯೋಜ್ಯ ಸುಖಪ್ರಾಪ್ತಿಯಾಯಿತೆಂದು ಇಂದ್ರಜಿತನ ಶಿರವು ನಗಲಾರಂಭಿಸಿತು. ಇದನ್ನು ಕೇಳಿ ಲಕ್ಷ್ಮಣನು ನಾನೇ ನನ್ನ ಅಳಿಯನನ್ನು ಕೊಂದೆನಲ್ಲಾ ನಾನೆಂಥ ಪಾಪಿ ಎಂದು ಶೋಕಾವಿಷ್ಟನಾದಾಗ ರಾಮ ಇಂದ್ರಜಿತನನ್ನು ಪುನರ್ಜೀವಿತಗೊಳಿಸಲು

ಸಿದ್ಧನಾದಾಗ ಕಪಿವೃಂದವೆಲ್ಲ ಈ ಕಾರ್ಯ ಮಾಡಿದರೆ ಮಹಾ ಅನರ್ಥ ಸಂಭವಿಸುವುದು ಎಂದು ರಾಮನಲ್ಲಿ ಬಿನ್ನೈಪಿಸಿದರು. ಆ ಲಕ್ಷ್ಮಣನೂ ಸಹ ಈ ಕಾರ್ಯ ಮಾಡದಂತೆ ಸೂಚಿಸಿದ ನಂತರ ಸುಲೋಚನೆ ಪತಿಯ ತಲೆಯನ್ನು ಪಡೆದು ಅಗ್ನಿಪ್ರವೇಶಕ್ಕೆ ಸಿದ್ಧಳಾಗುತ್ತಾಳೆ. ಅವಳ ಅಗ್ನಿಪ್ರವೇಶದ ವರ್ಣನೆ ಅದ್ಭುತವಾಗಿದೆ.

ಆ ಸುಸ್ಥಲಂದಲಿ ಸುಲೋಚನೆ ತಾಂ
ಸುಖರೂಪದಲಿ ತಾಸಿನೊಳಗೆ ಕುಂಡವು
ಸಿದ್ಧಾಗಲು ಕಾಶದೊಳು ಎದ್ದಿಮಿಂದು
ಬ್ರಹ್ಮವೇ ತಾನೆಂದು ಭಾವಿಸಿ ಬ್ರಹ್ಮವೇ ಯಜ್ಞ
ಇದು ಭಾವಿಸಿ ಬ್ರಹ್ಮಾರ್ಪಣ ಮಾಡಿದಳು
ಪತಿವಪು! ಬ್ರಹ್ಮಶಿಖಿಯೊಳಂದು ತಂದು
ಕುಂಡದೊಳಗೆ ತಾ ನೋಡಿ ಕಡಲಾಗ್ನಿ ರೂಪ ತ್ರಿಪದ
ಮಂಡೆಯೊಳು ಶೃಂಗಾರ ನಲ್ಕು ಸಪ್ತ ಹಸ್ತು!
ಕಂಡಳಯ್ಯ ದಿವ್ಯದೇಹ ಗಂಡನ ಮೇಲೆ ಸತಿಯು
ಕೊಂಡು ಬೆರೆದಳಾಗ ಶಂಕರನ ಸ್ಮರಣೆಯಲಿ

ಹೀಗೆ ಸುಲೋಚನೆ ಬ್ರಹ್ಮಾಗ್ನಿಯಲ್ಲಿ ಪತಿದೇಹದೊಡನೆ ತನ್ನ ದೇಹವನ್ನು ಬ್ರಹ್ಮಾರ್ಪಣ ಮಾಡಿದಳು.

ಧನ್ಯೆ ಈ ಸುಲೋಚನಾ ದೇವಿ ರಾಮ
ಚಂದ್ರಗೆ ಅನನ್ಯ ಭಕ್ತಳೆನಿಸಿಕೊಂಡಳು
ಮಾನ್ಯಳು ಮಾಡಿ ಎಲ್ಲರಿಗೆ ಸಾಯೋಜ್ಯ
ನಿಜ ಪುಣ್ಯ! ಸ್ಥಾನವಿತ್ತನೀಕಿಗೆ

ಎಂದು ಇಲ್ಲಿ ಶ್ರೀರಾಮನ ಕರುಣಾಭಾವ ಮತ್ತು ಸುಲೋಚನೆಯ ಪತಿಭಕ್ತಿಭಾವವನ್ನು ಹಾಡಿಹೊಗಳಿದ್ದಾರೆ.

ಕೊನೆಗೆ ಬರುತ್ತದೆ. ಈ ಕಾವ್ಯದ ಚರಮ ಶ್ಲೋಕ.

ಗಂಟಿಕ್ಕಿ ಕಟ್ಟಿರೋ ಕಂಠದಲ್ಲಿ
ಉಂಟು ಸಾಮ್ರಾಜ್ಯ ವೈಕುಂಠ ಪದ ಕುಳಿತಲ್ಲಿ

"ರಾಮ ನಾಮವೆಂಬ ರಮಣೀಯ ರತ್ನ. ಅದು ಕಾಮ-ಕಾಮಿತ-ಫಲಪ್ರದ ರೂಪವು. ಪ್ರೇಮವೆಂಬ ಹೇಮ ಸೂತ್ರದಿ ಪೋಣಿಕೆಯ ಮಾಡಿ ಶ್ರೀ ಮಹಾಗುರು ಮುಖದೋಳಿ ಮಣಿ ಕೈಕೊಂಡು ಆ ದಿವ್ಯ ರತ್ನಹಾರವನನು ಸದೈವ ಕಂಠದಲ್ಲಿಟ್ಟುಕೋ ಪರಮಾತ್ಮನ ನಾಮ ಹಾಗು ಅವನ ರೂಪ"[5]

ಶ್ರೀರಾಮಚಂದ್ರ ಚರಿತ್ರಾನುಸಂಧಾನ. ಅ. ಸುಲೋಚನ ಪ್ರಲಾಪ. ಆ. ಸುಲೋಚನಾ ಅಗ್ನಿಪ್ರವೇಶದ ಕರ್ತೃ ಜಕ್ಕಪ್ಪಯ್ಯ ಇವುಗಳ ವಿಲಕ್ಷಣ ನಿರೂಪಣೆಯನ್ನು ಜಕ್ಕಪ್ಪಯ್ಯನವರಲ್ಲಿ ನಾವು ಕಾಣಬಹುದು.

ಕರುಣಾರಸವೇ ಈ ಕಾವ್ಯದ ಪ್ರಧಾನ ರಸ. ಭಕ್ತಿ, ವಿರಹ, ಅದ್ಭುತ ಹಾಸ್ಯರಸಗಳು ಈ ಕೃತಿಗೆ ಪೋಷಕವಾಗಿ ಬಂಧಿದ್ದು. ಸಂಭಾಷಣೆಯ ಕೌಶಲ, ಶೈಲಿಯ ಸೊಗಸು ಮತ್ತು ರಾಮ, ರಾವಣ, ಇಂದ್ರಜಿತು, ಸುಲೋಚನೆ ಲಕ್ಷ್ಮಣ ಇವರ ಪಾತ್ರ ನಿರ್ಮಿತಿ ಅಪ್ರತಿಮವಾಗಿದೆ. ಹೀಗೆ ಜಕ್ಕಪ್ಪಯ್ಯನವರು ರಾಮಾಯಣದ ಭಾಗವಿಲ್ಲದ ಈ ಪ್ರಸಂಗವನನು ರಾಮನ ಕರುಣಾಭಾವ, ಶರಣಾಗತರಕ್ಷಕ ಮೊದಲಾದ ವಿಷಯಗಳ ಪ್ರಸ್ತಾಪ ಮಾಡಲು ಈ ಕಾವ್ಯವನ್ನು ತಮ್ಮ ಕಾವ್ಯದ ವಸ್ತುವನ್ನಾಗಿಸಿಕೊಂಡಿದ್ದಾರೆ. ಶ್ರೀರಾಮಚಂದ್ರ ಚರಿತ್ರಾನುಸಂಧಾನ ಎಂಬ ಈ ಕಾವ್ಯದಲ್ಲಿ ದಾಸರು. ತಮ್ಮ ಭಾಷಾ ವಿಲಾಸ ಮೆರೆದಿದ್ದಾರೆ. ಬೇರೆ ಕೃತಿಯ ಅನುವಾದವಾದರೂ ತಮ್ಮ ಸ್ವಂತಿಕೆಯನ್ನು ಮೆರೆದಿರುವುದನ್ನು ಈ ಕೃತಿಯುದ್ದಕ್ಕೂ ಎದ್ದು ಕಾಣುತ್ತದೆ.

ರಾಮಾಯಣ ಯುದ್ಧ ಪ್ರಸಂಗ

ಇಂದ್ರಜಿತನು ರಣರಂಗದಲ್ಲಿ ಹತವಾದ ವಿಷಯವನ್ನರಿತು ದುಃಖಿತನೂ ಕೋಪಿತನೂ ಆದರ ರಾವಣ ತನ್ನ ಮೂಲ ಬಲವನ್ನು ರಾಮನನ್ನು ಕೊಲ್ಲಲು ಕಳಿಸುತ್ತಾನೆ. ರಾವಣನ ಮೂಲಬದಲ್ಲಿ ೧೦,೦೦೦ರಥಗಳು, ೧೮,೦೦೦ಆನೆಗಳು, ೧೪,೦೦೦ಕುದುರೆಗಳು, ೨೦೦,೦೦೦ಕಾಲಾಳುಗಳು ಇದ್ದವು ಇಂತಹ ಬೃಹತ್ ಸೈನ್ಯವು ರಣರಂಗಕ್ಕೆ ಪ್ರವೇಶಿಸಿದಾಗ ಈ ಪ್ರಕಾರದ ಬೃಹತ್ ಮೂಲಬಲವನ್ನು ಕಂಡು ಹೆದರಿದ. ವಾನರರಿಗೆ ಅಭಯವಿತ್ತ ರಾಮ ಗಾಂಧವಾಸ್ತ್ರವನ್ನು ಹೂಡಿ ರಾಕ್ಷಸರು ಪರಸ್ಪರ ಹೊಡೆದಾಡಿ ಸಾಯುವ ಹಾಗೆ ತಂತ್ರ ಹೂಡಿದ. ಎಂದರೆ ಈ ಅಸ್ತ್ರದ ಪ್ರಭಾವದಿಂದ ರಾಮನ ಹಲವು ಪ್ರತಿರೂಪ ಉಂಟಾಗಿದ್ದರಿಂದ ದ್ವಂದ್ವಕ್ಕೀಡಾದ ರಾಕ್ಷಸರು ತಮ್ಮತಮ್ಮನ್ನೇ ಹೊಡೆದು ಸಾಯಲಾರಂಭಿಸಿದರು. ಈ ಪ್ರಸಂಗವನ್ನು ಪುರಂದರದಾಸರ ಈ ಕೀರ್ತನೆಯ ಮೂಲಕ ಅವಲೋಕಿಸಬಹುದು.

ಇಲ್ಲಿ ನೋಡಲು ರಾಮ ಅಲ್ಲಿ ನೋಡಲು ರಾಮ
ಎಲ್ಲೆಲ್ಲಿ ನೋಡಲು ರಾಮಚಂದ್ರನು ।ಪ।
ಮೂಲೋಕದಲ್ಲಿ ತ್ರೈಮೂರ್ತಿರೂಪಗಳಲ್ಲಿ
ಎಲ್ಲೆಲ್ಲಿ ನೋಡಲು ಅಲ್ಲಲ್ಲಿ ರಾಮ ರೂಪ ।ಅ.ಪ।

ರಾವಣನ ಮೂಲಬಲವನ್ನು ಕಂಡು ಪಲಾಯನ ಮಾಡುತ್ತಿದ್ದ ಕಪಿಸೈನ್ಯವನ್ನು ಕಂಡ ರಾಮ ತನ್ನ ವಿಶ್ವರೂಪ ಪ್ರದರ್ಶಿಸಿದ

ರಾವಣನ ಮೂಲಬಲವ ಕಂಡು ಕಪಿಗಳು
ಆವಾಗಲೆ ಹೊರಟೋಡುತಿದೆ

ಈವಾಗ ನರನಾಗಿ ಇರಬಾರದೆಂದೆನುತ

ದೇವ ರಾಮಚಂದ್ರ ಬಹುರೂಪ ತಾನಾದ

ರಾಮನ ಈ ಬಹುರೂಪಕ್ಕೆ ಕಾರಣ ವಾಲ್ಮೀಕಿ ರಾಮಾಯಣದಲ್ಲಿ ಗಾಂಧವಾಸ್ತ್ರ ಹೂಡಿದ ಪರಿಣಾಮ ಎಂದಿದ್ದರೆ ಮುಂದೆ ರಾಮನ ಈ ಬಹುರೂಪದಿಂದಾಗ ಪರಿಣಾಮ ಹೀಗೆ ಬಂದಿದೆ.

ಅವನಿಗೆ ಇವ ರಾಮ ಇವನಿಗೆ ಅವರ ರಾಮ

ಬುವಿಯೊಳಗೆ ಬೇರೆ ರೂಪವುಂಟೆ

ಅವನಿಯೊಳಿರುತಿಪ್ಪ ದುರುಳ ಜನರೆಲ್ಲ

ಅವರವರೆ ಹೊಡೆದಾಡಿ ಹತವಾಗಿ ಹೋದರು.

ಹನುಮಂತಾದಿ ಸಾಧುಜನರು ಅಪ್ಪಿಕೊಂಡು

ಕುಣಿದಾಡಿದರು ಅತಿ ಹರುಷದಲಿ

ಕ್ಷಣದಲಿ ಪುರಂದರವಿಠಲರಾಯನು

ಕೊನೆಗೆ ರಾಮಚಂದ್ರನೊಬ್ಬನಾಗಿ ನಿಂತ (ಕೀ ೫೦, ಸಂ.೩/೨)

ಹೀಗೆ ರಾವಣನ ಮೂಲಬಲವನ್ನು ನಾಶಪಡಿಸಿದ ರೀತಿಯನ್ನು ರಾಮನ ಮಹಿಮೆ ವರ್ಣಿಸುವಾಗ ಸರಳ ಭಾಷಾಶೈಲಿಯಲ್ಲಿ ಹಾಡಿದ್ದಾರೆ. ರಾವಣನ ಮೂಲಬಲವೂ ನಾಶವಾದ ಮೇಲೆ ರಾವಣನು ಸ್ವತಃ ಯುದ್ಧಭೂಮಿಗಿಳಿಯುತ್ತಾನೆ. ರಾಮರಾವಣರಿಗೆ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಯುದ್ಧರಂಗದಲ್ಲಿ ವಿಭೀಷಣನನ್ನು ಕಂಡು ರಾವಣ ಅವನ ಮೇಲೆ ಶಕ್ತ್ಯಾಯುಧವನ್ನು ಬಿಡುತ್ತಾನೆ. ಇದನ್ನು ನೋಡಿದ ಲಕ್ಷ್ಮಣ ವಿಭೀಷಣನ ಮುಂದೆ ನಿಂತಾಗ ಆಯುಧ ಲಕ್ಷ್ಮಣನ ಎದೆಗೆ ಬಡಿದು ಆತ ಕೆಳಗೆ ಬೀಳುತ್ತಾನೆ. ಹೀಗೆ ಕೆಳಗೆ ಬಿದ್ದ ಲಕ್ಷ್ಮಣನನ್ನು ಲಂಕೆಗೆ ಒಯ್ಯಲೆಂದು ರಾವಣ ಹವಣಿಸುತಿದ್ದಾಗ ಹನುಮ ಬಂದು ರಾವಣನ ಎದೆಯ ಮೇಲೆ ಮುಷ್ಟಿಯಿಂದ ಹೊಡೆಯುತ್ತಾನೆ. ರಾವಣ ರಕ್ತಕಾರುತ್ತ ಬೀಳುತ್ತಾನೆ (ಆನಂದ ರಾಮಾಯಣ ಸಾರಕಾಂಡ ಸರ್ಗ ೧೧) ಆನಂದ ರಾಮಾಯಣದಲ್ಲಿ ಬರುವ ಈ ಪ್ರಸಂಗವನ್ನು ಹರಿದಾಸರು ಹನುಮನ ಪರಾಕ್ರಮ ವರ್ಣನೆಗೆ ಬಳಸಿಕೊಂಡಿದ್ದಾರೆ ಗುರುರಾಮರ ವಿಠಲರು ಈ ಪ್ರಸಂಗವನ್ನು ಹೀಗೆ ಹಾಡಿದ್ದಾರೆ.

ರಣರಂಗದೊಳಗೆ ರಾವಣನ ಗುದ್ದಿದ ಶೂರ

ಕ್ಷಣದಿ ಲಕ್ಷ್ಮಣಗೆ ಪ್ರಾಣವನಿತ್ತೆ ಧೀರಾ

ವಾಯುಕುಮಾರ ವಜ್ರಶರೀರ (ಕೀ ೧೩೪, ಸಂ.೩೪)

ಎಂದಿದ್ದರೆ ವಾದಿರಾಜರೂ ಸಹ

ಗುದ್ದಿ ರಾವಣನ ಧರೆಯೊಳು ಕೆಡಹಿ ಅರಿಕಟಕ

ಮರ್ದನ ಮಹಾಮಹಿನೆದ್ದು ನಿಂತ (ಕೀ. ೧೧೨, ಸಂ.೨)

ಎಂದು ಆನಂದ ರಾಮಾಯಣದ ಈ ಪ್ರಸಂಗವನ್ನು ಬಹಳ ಸಂಕ್ಷಿಪ್ತವಾಗಿ ಹಾಡಿದ್ದಾರೆ. ಹೀಗೆ ರಾಮಾಯಣ ಯುದ್ಧ ನಡೆಯುತ್ತಿದಾಗ ಇಂದ್ರನು ನೀಡಿದ ದಿವ್ಯರಥವನ್ನೇರಿ ಯುದ್ಧ ಮಾಡುತ್ತಿದ್ದ ರಾಮನ

ರಥವನ್ನು ರಾವಣ ನಾಶಗೊಳಿಸಿದಾಗ ಹನುಮ ರಾಮನನ್ನು ಹೆಗಲನ್ನೇರಿಸಿ ಯುದ್ಧವನ್ನು ಮುಂದುವರೆಸುತ್ತಾನೆ. ಇಲ್ಲಿ ಇಂದ್ರ ನೀಡಿದ ದಿವ್ಯ ರಥವನ್ನು ರಾವಣ ನಾಶಮಾಡಿದ್ದು ವಾಲ್ಮೀಕಿ ರಾಮಾಯಣದ್ದಾದರೆ ರಾಮನನ್ನು ಹೆಗಲ ಮೇಲೆ ಹೊತ್ತಿಕೊಂಡು ಯುದ್ಧ ಮುಂದುವರಿದ ಹನುಮನ ಪರಾಕ್ರಮ ವರ್ಣನೆ ಆನಂದರಾಮಾಯಣದ್ದು ಹರಿದಾಸರು ಈ ಎರಡೂ ಪ್ರಸಂಗಗಳನ್ನು ಬಳಸಿಕಂಡು ಹನುಮನ ಸ್ವಾಮಿನಿಷ್ಠೆ ಭಕ್ತಿಯನ್ನು ಕೊಂಡಾಡಿದ್ದಾರೆ. ಪ್ರಸನ್ನ ವೆಂಕಟದಾಸರು ಈ ಪ್ರಸಂಗವನ್ನು ಹೀಗೆ ಚಿತ್ರಿಸಿದ್ದಾರೆ.

ಪೆಡಕಿಲಾಸನವಿತ್ತು ದಾರಗೆ ತುಷ್ಟೆ

ಬಡಿಸಿದೆ ಶ್ರೀರಘುನಾಥಗೆ (ಕೀ ೧೫೩, ಸಂ.೮)

ಮೇಲಿನ ಕೀರ್ತನ ಭಾಗದಲ್ಲಿ ಪ್ರಸನ್ನ ವೆಂಕಟದಾಸರು ಕೇವಲ ಒಂದು ಪದದ ಮೂಲಕ ಹನುಮ ರಾಮನಿಗೆ ರಥವಾದ ವಿಷಯವನ್ನು ತಿಳಿಸಿದ್ದರೆ, ಪುರಂದರದಾಸರು ಇದೇ ಪ್ರಸಂಗವನ್ನು ಒಂದು ನುಡಿಯಲ್ಲಿ ಹೀಗೆ ಹಾಡಿದ್ದಾರೆ.

ಅತಿ ದುರುಳ ರಕ್ಕಸನು ರಥವ ಮೇಲಿರಲು ರಘು

ಪತಿಯು ಪದಚರಿಯಾಗಿ ನಿಂತಿರಲು ನೋಡಿ

ಪೃಥವಿ ಗಗನಕೆ ಬೆಳೆದು ರಥವಾದೆ ಒಡೆಯನಿಗೆ

ಅತಿಭಯಂಕರ ಸತ್ತ್ವವಂತ ಹನುಮಂತ (ಕೀ ೧೮೩, ಸಂ.೩/೧)

ಹರಿದಾಸರು ಮುಂದಿನ ರಾಮಾಯಣ ಯುದ್ಧದ ಭಾಗವು ಒಂದೆರಡು ನುಡಿಗಳಲ್ಲಿ ನಾಗಾಲೋಟದಿಂದ ಮುಗಿಸಿರುವುದಾಗಿ ಕಾಣಬಹುದು. ಮತ್ತೆ ರಾವಣನ ವಧೆಯನ್ನು ಶ್ರೀಹರಿಯ ದುಷ್ಟನಿಗ್ರಹ ಗುಣವನ್ನು ಕೊಂಡಾಡುವಾಗ ಸಂಕ್ಷೇಪ ರಾಮಾಯಣಗಳಲ್ಲಿ ಈ ಪ್ರಸಂಗವು ಕೆಳಗಿನಂತೆ ಬಂದಿದೆ.

ರಾವಣಾಸುರ ಕುಂಭಕರ್ಣ ನರಕಾದಿಗಳು

ಶೈವತಪವನು ಮಾಡಿ ವರವ ಪಡೆಯೆ

ಅವರುಗಳನು ವಿಷ್ಣು ನರರೂಪಿನಿಂದರಿದು

ದೇವರ್ಕಳನು ಕಾಯಿದ (ಕೀ ೨೩, ಸಂ.೧)

ಇಲ್ಲಿ ಶ್ರೀಪಾದರಾಜರು ಇಡೀ ರಾಮಾಯಣವನ್ನು ಒಂದು ನುಡಿಯಲ್ಲಿ ಹಾಡಿದ್ದು, ರಾವಣ ಕುಂಭಕರ್ಣಗಳು ಶಿವತಪಸ್ಸನ್ನು ಮಾಡಿ ಲೋಕಕಂಟಕರಾದಾಗ ವಿಷ್ಣು ನರರೂಪಿ ರಾಮನಾಗಿ ಜನ್ಮಿಸಿ ಇವರನ್ನು ಕೊಂದನೆಂದು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.

ಧರ್ಮ ಪುರಾಣ ಕಾವ್ಯಗಳ ಪ್ರಕಾರ ರಾಮನು ರಾವಣ ವಧೆ ಮಾಡಿದ್ದು ತನ್ನ ಅವತಾರ ಕಾರ್ಯ ಪೂರ್ಣಗೊಳಿಸುವುದಕ್ಕಾಗಿಯೂ ಇಲ್ಲಿ ಸೀತಾಪಹರಣ ಕೇವಲ ಒಂದು ಕಾರಣವಷ್ಟೇ. ಆದರೆ ಕೆಲವು

ಹರಿದಾಸರು ರಾವಣವಧೆಯಾದ್ದು ರಾಮ ತನ್ನ ಪ್ರೀತಿಯವಲ್ಲಭೆಯನ್ನು ಪಡೆಯಲು ಎಂದು ಪುರಂದರದಾಸರು ಹೀಗೆ ಹಾಡಿದ್ದಾರೆ.

ಮಡದಿಗಾಗಿ ತಾ ಕಡಲನೆ ಕಟ್ಟಿ

ಹಿಡಿದು ರಾವಣನ ಕೊಂದ ।೭। (ಕೀ ೨೩, ಸಂ.೩/೨)

ಇದೇ ವಿಷಯುವನ್ನು ವಾದಿರಾಜರ ಕೀರ್ತನೆಯಲ್ಲಿ ಕಾಣಬಹುದು.

ಸೀತೆಗೋಸ್ಕರ ಪೋಗಿ ಸೇತುವೆಯ ಕಟ್ಟಿದೆ

ಭೂತ ರಾವಣ ಮಡುಹಿದೆ (ಕೀ ೮೮, ಸಂ.೨)

ಹೀಗೆ ಎಲ್ಲ ಹರಿದಾಸರು ವಿವಿಧ ರೀತಿಯ ವಿವಿಧ ಅರ್ಥದಲ್ಲಿ ರಾವಣವಧಾ ಪ್ರಸಂಗವನ್ನು ಹಾಡಿದ್ದಾರೆ.

ಸೀತಾ ಅಗ್ನಿಪರೀಕ್ಷೆ

ರಾಮಾಯಣ ಯುದ್ಧವಾದ ನಂತರ ಅಶೋಕವನದಿಂದ ಸೀತೆಯನ್ನು ಹನುಮಂತ ರಾಮನಲ್ಲಿ ಕರೆತರುತ್ತಾನೆ. ರಾಮನ ಬಳಿ ಬಂದು ನಿಂತ ಜಾನಕಿಯನ್ನು ಕಂಡು ಕೋಪಾದ್ರಿಕ್ತನಾದ ರಾಮ "ಸತ್ಕುಲದಲ್ಲಿ ಹುಟ್ಟಿದ ಸಾಮರ್ಥ್ಯವುಳ್ಳ ಯಾವ ಪುರುಷನು ಇನ್ನೊಬ್ಬರ ಮನೆಯಲ್ಲಿ ವಾಸ ಮಾಡಿದ ಸ್ತ್ರೀಯನ್ನು ಪುನಃ ಕೂಡಿದ ಮನಸ್ಸಿನಿಂದ ಕರೆದು ಕೊಂಡಾನು? ನಿನ್ನನ್ನು ನಾನು ಸ್ವೀಕರಿಸಲಾರೆ. ಇಷ್ಟಬಂದಂತೆ ಇಲ್ಲಿಂದ ಹೊರಟುಹೋಗು" ಎಂದಾಗ ಸೀತೆ ನೊಂದು ತನ್ನ ಪಾವಿತ್ರ್ಯತೆ ಸಿದ್ಧಪಡಿಸಲು ಅಗ್ನಿ ಪ್ರವೇಶ ಮಾಡಿ ಅಗ್ನಿಸಾಕ್ಷಿಯ ಮೂಲಕ ಸೀತೆ ಪವಿತ್ರಳಾದವಳೆಂದರಿತ ರಾಮ ಆಕೆಯನ್ನು ಪುನಃ ಗ್ರಹಿಸುತ್ತಾನೆ.

ಈ ಸನ್ನಿವೇಶವನ್ನು ಹರಿದಾಸರು ತಮ್ಮ ಸಂಕ್ಷೇಪ ರಾಮಾಯಣಗಳಲ್ಲಿ ಬಹಳ ಸಂಕ್ಷಿಪ್ತವಾಗಿ ಈ ರೀತಿ ಹಾಡಿದ್ದಾರೆ.

ದುಷ್ಟ ರಾಕ್ಷಸ ಕುಲವ ಕುಟ್ಟಿ ಬೇರನೆ ಸವರಿ

ಸೃಷ್ಟಿಸುತತೆ ಜಾನಕಿಯ ಅಗ್ನಿ ಹೊಗಿಸಿ ।೧೦। (ಕೀ ೦೯೩, ಸಂ.೧೪)

ಎಂದು ಜಗನ್ನಾಥ ದಾಸರು ಹಾಡಿದ್ದಾರೆ. ಅಂಬಾಬಾಯಿಯವರು

ಅಗ್ನಿಯಿಂ ಸೀತೆಯನು ಶುದ್ಧಳೆನಿಸಿ ಗ್ರಹಿಸಿ ।೯। (ಕೀ ೨೪೮, ಸಂ.೧೮/೩)

ಎಂದು ಜನಸಾಮಾನ್ಯರೆದುರಿಗೆ ಸೀತೆಯನ್ನು ಶುದ್ಧ ಚಾರಿತ್ರ್ಯವುಳ್ಳವಳೆಂದು ಅಗ್ನಿಪ್ರವೇಶದ ಮೂಲಕ ತಿಳಿಸಿ ಆಕೆಯನ್ನು ಸ್ವೀಕರಿಸಿದ ಎಂದಿದ್ದಾರೆ.

ಉತ್ತರಕಾಂಡದ ಪ್ರಸಂಗಗಳು

ಜಿ.ವರದರಾಜ್‌ರವರು ತಮ್ಮ 'ಹರಿದಾಸ ಸಾಹಿತ್ಯಸಾರ' ಎಂಬ ಕೃತಿಯಲ್ಲಿ ಹರಿದಾಸ ಸಾಹಿತ್ಯದಲ್ಲಿ ಉತ್ತರಕಾಂಡದ ಪ್ರಸಂಗಗಳ ಕುರಿತಾಗಿ ಈ ರೀತಿ ಹೇಳಿದ್ದಾರೆ. "ಹರಿದಾಸರು ರಾಮಾಯಣದ ಉತ್ತರಕಾಂಡದ ಕಥಾಭಾಗವೊಂದನ್ನುಳಿದು ಮಿಕ್ಕ ಕಥಾವೃತ್ತಾಂತಗಳನ್ನೆಲ್ಲ ಬಹುಮಟ್ಟಿಗೆ

ಅಳವಡಿಸಿಕೊಂಡಿದ್ದಾರೆ"[5] ಎನ್ನುತ್ತಾ ಇದು ಪುನರಾವಲೋಕನದ ವಿಷಯ ಎಂದಿದ್ದಾರೆ. ರಾಮಾಯಣದ ೭ ಕಾಂಡಗಳಲ್ಲಿ ಅಶುಭ ಕಾಂಡವೆಂದು ತಿಳಿಯಲಾಗುವ ಉತ್ತರಕಾಂಡವನ್ನು ಹಲವಾರು ಹರಿದಾಸರು ಹಾಡದೇ ಇರಬಹುದು. ಆದರೆ ಕೆಲವು ಹರಿದಾಸರು ಶ್ರೀರಾಮನ ಹರಿದಾಸರು ವ್ಯಾಜ್ಯಸ್ತುತಿಯಲ್ಲಿ ದಶಾವತಾರ ವರ್ಣನೆಯಲ್ಲಿ ಸಂಕ್ಷೇಪ ರಾಮಾಯಣಗಳಲ್ಲಿ ಶ್ರೀರಾಮನ ಮಹಿಮೆ ಹಾಡುವ ಕೆಲವು ಸಂದರ್ಭಗಳಲ್ಲಿ ಕೆಲವೊಂದು ಉತ್ತರಕಾಂಡದ ಪ್ರಸಂಗಗಳನ್ನು ಹಾಡಿರುವುದನ್ನು ಕಾಣಬಹುದು. ಇಲ್ಲಿ ಹೆಳವನಕಟ್ಟೆ ಗಿರಿಯಮ್ಮರ ಕೃತಿ 'ಲವಕುಶರ ಕಾಳಗ' ಸಂಪೂರ್ಣ ಉತ್ತರಕಾಂಡವೇ ಆಗಿದೆ.

ಉತ್ತರಕಾಂಡದಲ್ಲಿ ಸೀತಾಪರಿತ್ಯಾಗದ ನಂತರ ರಾಮನು ಮಾಡಿದ ಅಶ್ವಮೇಧದ ಅಶ್ವವನ್ನು ಕಟ್ಟಿರುವ ಮಕ್ಕಳು ತನ್ನ ಮಕ್ಕಳೆಂದರಿತ ರಾಮ ಅವರನ್ನು ವಾಲ್ಮೀಕಿ ಆಶ್ರಮದಿಂದ ಅಯೋಧ್ಯೆಗೆ ತರುವ ಪ್ರಸಂಗವನ್ನು ಕನಕದಾಸರು

ನಿಜಮುನಿಗಳ ವನದಿಂದ ತನಯರ ತಂದವನ ಶ್ರೀರಾಮ ಎನ್ನಿರೋ (ಕೀ ೨೭೮, ಸಂ. ೫/೧)

ಹೀಗೆ ಕೆಲವಿಷ್ಟು ಹರಿದಾಸರು ಒಂದು ಪಾದ ಒಂದು ನುಡಿಯಲ್ಲಾದರೂ ಹಾಡಿರಬಹುದಾದ ಉತ್ತರಕಾಂಡದ ಪ್ರಸಂಗಗಳನ್ನು ಇಲ್ಲಿ ವಿವೇಚಿಸಲಾಗಿದ್ದು ಜೊತೆಗೆ ಹೆಳವನಕಟ್ಟೆ ಗಿರಿಯಮ್ಮನವರ 'ಲವಕುಶ ಕಾಳಗ'ವನ್ನು ಚರ್ಚಿಸಲಾಗಿದೆ.

ರಾವಣ ನಿಜವಾದ ಸೀತೆಯನ್ನಪರಿಸಿದ್ದಲ್ಲ ಆಕೆಯ ಪ್ರತಿಕೃತಿಯನ್ನಪಹರಿಸಿದ್ದು ಎಂಬ ವಿಚಾರ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ನಿರೂಪಿತವಾಗಿರುವಂತೆ ಬಹುತೇಕ ಹರಿದಾಸರು ಅನುಸರಿಸಿದ್ದು ಅಗ್ನಿಪ್ರವೇಶದ ವೇಳೆ ಸೀತಾಕೃತಿಯನ್ನು ಆ ಅಗ್ನಿಯಲ್ಲೇ ಬಿಟ್ಟು ಕೈಲಾಸದಲ್ಲಿದ್ದ ನಿಜಸೀತೆಯನ್ನು ಪುನಃ ರಾಮ ಪಡೆದ ಎಂಬ ವಿಚಾರವು ತಾತ್ಪರ್ಯ ನಿರ್ಣಯದಲ್ಲಿದ್ದು ಇದೇ ವಿಚಾರವನ್ನು ರಾಮದಾಸರು ತಮ್ಮ ದೀರ್ಘ ಕೀರ್ತನೆಯಲ್ಲಿ ಈ ರೀತಿ ಹಾಡಿದ್ದಾರೆ.

ಛಾಯಾ ಸೀತೆಯನು ಪಾಯದಗ್ನಿಲಿಬಿಟ್ಟು

ದಿವ್ಯಸೀತೆಯ ಕೊಂಡ ಗೋವಿಂದ ನಮೋ

ಮುಕ್ತಿದಾಯಕ ಸಿರಿಗೋವಿಂದ (ಕೀ ೧೪೫. ಸಂ.೩೨)

ಹೀಗೆ ಹರಿದಾಸರು ಸೀತೆಯ ಅಗ್ನಿಪ್ರವೇಶವನ್ನು ವಾಲ್ಮೀಕಿ ಮತ್ತು ಶ್ರೀಮದಾಚಾರ್ಯರ ರಾಮಾಯಣ ಪರಂಪರೆಯನ್ನು ಅನುಸರಿಸುವುದರನ್ನು ಕಾಣಬಹುದು.

ಗುರುರಾಮ ವಿಠಲರು ತಮ್ಮ ಸಂಕ್ಷೇಪ ರಾಮಾಯಣದಲ್ಲಿ ಉತ್ತರಕಾಂಡವನ್ನು ಹೀಗೆ ಹಾಡಿದ್ದಾರೆ.

ಪರಮ ಧರ್ಮದಲಿ ರಾಜ್ಯವಾಳುತಲಿ ಕಲಿರಾಮ ಭೂ

ವರನು ಹನ್ನೊಂದು ಸಾವಿರ ಲವಣನಂ

ಮುರಿದು ಹರಮೇಧಾವಿ ಯಾಗಂಗಳಂ ಮಾಡಿ

ಪುತ್ರರಿಗೆ ರಾಜ್ಯವಿತ್ತು

ಪುರಜನವ ಪಶುಪಕ್ಷಿ ಕೀಟ ವಜ್ರಸಹಿತ

ತೆಳದಿಂದಿವಿಗೆ ದೇವರ್ಕಳರಳಿನಮಳೆಯೆ

ಸುರಿದು ಜಯಜಯವೆಂದು ಪೊಗಳಿದರುಹರಿ

ಯನುತ್ತರಕಾಂಡದಲಿ ತಿಳಿವದು ।೭। (ಕೀ೩೪೩, ಸಂ.೩೪)

ಇಲ್ಲಿ ದಾಸರು ತುಂಬಾ ಸಂಕ್ಷೇಪವಾಗಿ ಲವಣಾಸುರನ ವಧೆ, ಶ್ರೀರಾಮನ ಅವತಾರ ಸಮಾಪ್ತಿಯ ಪ್ರಸಂಗಗಳನ್ನು ನಿರೂಪಿಸಿದ್ದಾರೆ.

ಸೀತಾ ಪರಿತ್ಯಾಗ

ರಾಮನು ಸೀತೆಯನ್ನು ಅರಣ್ಯಕ್ಕೆ ಕಳುಹಿಸಿದ್ದು ಅಯೋಧ್ಯೆಯ ಜನರಲ್ಲಿದ್ದ ಸೀತೆಯ ಪ್ರತಿ ಅಸಮಾಧನ ಹಾಗೂ ಆಕೆಯ ಚಾರಿತ್ರ್ಯದ ಬಗ್ಗೆ ಶಂಕೆಯಿಂದಾಗಿ ಅಪಪ್ರಚಾರ ಉಂಟಾಗಿದ್ದರಿಂದ ಈ ಸುದ್ದಿಯನ್ನು ಗೂಢಾಚಾರರಿಂದರಿತು ಮಂತ್ರಿವರ್ಗವು ಈ ಮಾತಿಗೆ ಪುಷ್ಟಿ ನೀಡಿದಾಗ ಆದರೆ ಜನಸಾಮಾನ್ಯರ ಜನಪದ ಸಾಹಿತ್ಯದಲ್ಲಿ ರಾಮಸೀತೆಯನ್ನು ಕಾಡಿಗಟ್ಟಿದ್ದು ಒಬ್ಬ ಅಗಸನ ಮಾತನ್ನು ಕೇಳಿ ಎಂದಿದ್ದು ಇದೇ ಅಂಶವನ್ನು ನಂಜನಗೂಡು ತಿರುಮಲಾಂಬ ಈ ರೀತಿ ಹಾಡಿದ್ದಾರೆ.

ದೃಢಚಿತ್ತದೊಳಗೆನ್ನ ಒಡೆಯ ನೀತಗೆ ಮುನ್ನ

ಪಡಿಯೆನಿಪರಿನ್ನುಂಟೆ ಪೊಡವಿಯಲ್ಲಿ

ಜನವಾರ್ತೆಯನೆ ಕೇಳಿ ವನಿತೆಯೊಳು ಖತಿತಾಳಿ

ಇನಿತು ಕಾಡಿದ ಚಾಳಿಯೊರೆವೆ ಕೇಳಿ

ಮಡಿವಳನ ನುಡಿಗಾಗಿ ಕಡುಮೂರ್ಖ ತಾನಾಗಿ

ಅಡವಿಗಟ್ಟುವರೇನೆ ಮಡದಿಯನ್ನೆ

ಧರ್ಮಪತಿಯುಮಂತು ಪೂರ್ಣಗರ್ಭವನಾಂತ

ಅರ್ಧಾಂಗಿಯನ್ನುಳಿದ ನಿರ್ದಯಾತ್ಮ. (ಕೀ. ೨೭. ಸಂ ೧೮/೪)

ರಾಮನನ್ನು ಇಲ್ಲಿ ನಿರ್ದಯಿ, ಪತ್ನಿಪ್ರೇಮವಿಲ್ಲದೆ ಅಮಾನವೀಯ ಕೃತ್ಯ ಮಾಡಿದನೆಂದು ಹೇಳಿ ಶ್ರೀಹರಿ ನಿಂದೆ ಮಾಡಿದ್ದು ಇದೇರೀತಿ ಹರಪನಹಳ್ಳಿ ಭೀಮವ್ವನವರು ಮೇಲಿನ ಕೀರ್ತನೆಯ ಹಾಗೆಯೇ ರಚಿಸಿರುವುದನ್ನು ಕಾಣಬಹುದು.

ಒಬ್ಬ ಸತಿಯನಾಳಲಾರದೆ ಗರ್ಭಿಣಿಯ

ದಬ್ಬಿ ಕಾನಡಿಗೊಬ್ಬೆ (ಕಾಡಿನಲ್ಲೊಬ್ಬೆ?) ಲ್ಲಿರುವೊನೊ

ತೋಷ್ವ ಪುತ್ರಿಯರು ಮೇಲಷ್ಟಭಾರ್ಯರು

ಶತಪತ್ನೇರನಾಳದಿನ್ನೆತ್ತ ಪೋಗಿಹನೋ ।೪। (ಕೀ ೭೨ ಸಂ.೧೯)

ತುಂಬು ಗರ್ಭಿಣಿಯನ್ನು ಕಾಡಿಗಟ್ಟಿದ ಇಲ್ಲಿ ನಿಂದಿಸುತ್ತಾ

ಅಡವಿ ಅರಣ್ಯ ತಿರುಗಿ

ಮಡದಿ ಗಪನಿಂದ್ಯವ ಕಟ್ಟಿ

ಅಡವಿಗಟ್ಟ್ಯಂತಃ ಕರಣವಿಲ್ಲ ಕೃಷ್ಣ

ಬಿಡು ನಿನ್ನ ಸುಳ್ಳು ವಚನವಿದೆಯಲ್ಲ ।೧೮। (ಕೀ.೧೨೦ ಸಂ.೧೯)

ಎಂದಿಲ್ಲಿ ರಾಮನನ್ನು ಅಂತಃಕರಣವಿಲ್ಲದವನೆಂದು ತಮ್ಮ ವ್ಯಾಜ್ಯ ಸ್ತುತಿಯಲ್ಲಿ ತಿಳಿಸಿದ್ದಾರೆ. ಹೀಗೆ ಮಹಿಳಾ ಕೀರ್ತನಕಾರರು ಮಹಿಳೆಯ ಪರವಾಗಿ ದನಿಯೆತ್ತಿರುವ ಪ್ರಸಂಗ ಇಲ್ಲಿ ಕಾಣಬಹುದು.

ಲವಕುಶಕಾಳಗ :-

'ಲವಕುಶ ಕಾಳಗ' ಗಿರಿಯಮ್ಮ ರಚಿಸಿರುವ ಅಪೂರ್ವ ಕಾವ್ಯ. ಈಕೆ ಕಾವ್ಯದ ವಸ್ತುವಿನ ಆಯ್ಕೆಯಲ್ಲಿ ಹೊಸತನವನ್ನು ತೋರಿಸಿದ್ದಾಳೆ. ಈ ಕೃತಿಯಂತೂ ಅನೇಕ ಹೊಸ ವಿಷಯಗಳಿಂದ ಕೂಡಿದ ನವರಾಮಾಯಣವಾಗಿದೆ. ಇಲ್ಲಿ ಸೀತಾ ಪರಿತ್ಯಾಗವಾಗುವುದು ರಾವಣನ ಪಟ ಬರೆದದ್ದರಿಂದ ರಾಮ, ಲಕ್ಷ್ಮಣನಿಗೆ ಸೀತೆಯ ತಲೆಯನ್ನು ಕಡಿದು ಬರುವಂತೆ ಹೇಳುತ್ತಾನೆ. ಸೀತೆಗೆ ಲವ ಮಾತ್ರ ಜನಿಸುತ್ತಾನೆ. ವಾಲ್ಮೀಕಿಯು ದರ್ಬೆಯಿಂದ ಮತ್ತೊಂದು ಮಗುವನ್ನು ಸೃಷ್ಟಿಸಿ ಅದಕ್ಕೆ ಕುಶನೆಂದು ಹೆಸರಿಡುತ್ತಾರೆ. ಮಂಥರೆಯನ್ನಿಲ್ಲಿ ಮಂತುಣಿ ಎಂದು ನಿರ್ದೇಶಿಸಲಾಗಿದೆ. ಈಕೆ ರಾಮನ ಆಜ್ಞೆಯಂತೆ ಲವನು ಮೂರ್ಛೆಬಿದ್ದಾಗ ರಕ್ಷಿಸುತ್ತಾಳೆ. ಕೊನೆಗೆ ಲವಕುಶರು ಈಕೆಯನ್ನು ಕೊಲ್ಲುತ್ತಾರೆ. ಕಾವ್ಯದ ಕೊನೆಯಲ್ಲಿ ಸೀತೆ ಗಂಡ ಮತ್ತು ಮಕ್ಕಳೊಡನೆ ಅಯೋಧ್ಯೆಗೆ ಹಿಂತಿರುಗುತ್ತಾಳೆ. ಹೀಗೆ ಗಿರಿಯಮ್ಮ ನವನವೀನ ದೃಷ್ಟಿಯಿಂದ ರಾಮಾಯಣವನ್ನು ಚಿತ್ರಿಸಿದ್ದಾಳೆ.

ಹೆಳವನ ಕಟ್ಟೆ ಗಿರಿಯಮ್ಮ ರಚಿಸಿರುವ ವಿಶಿಷ್ಟ ಸೃಷ್ಟಿ "ಲವಕುಶರ ಕಾಳಗ" ಇದು ವಾಲ್ಮೀಕಿ ರಾಮಾಯಣಕ್ಕಿಂತ ತೀರ ಭಿನ್ನವಾದ ಉತ್ತರಕಾಂಡದ ಕಥಾಭಾಗವನ್ನು ಒಳಗೊಂಡಿದೆ. ಹೆಳವನಕಟ್ಟೆ ಗಿರಿಯಮ್ಮನವರ ಈ ಕೃತಿಯು "ಮಧುಗಿರಿಯ ಪಟ ರಾಮಾಯಣ"ದ ಕತೆಯನ್ನು ತುಂಬಾ ಹೋಲುತ್ತದೆ. ಹಾಗೆಯೇ ಭವಭೂತಿಯ ಉತ್ತರ ರಾಮಚರಿತ ಪ್ರಭಾವವನ್ನು ಇದರಲ್ಲಿ ಗುರುತಿಸಬಹುದು. "ಲವಕುಶ ಕಾಳಗ"ವನ್ನು ಕೆಳಗಿನಂತೆ ವಿವೇಚಿಸಲಾಗಿದೆ.

ಗರ್ಭಿಣಿಯಾದ ಸೀತೆಗೆ ತಾನು ವನವಾಸ ಕಾಲದಲ್ಲಿ ಋಷಿಗಳಾಶ್ರಮದಲ್ಲಿ ಕಳೆದ ದಿನಗಳು ನೆನಪಾಗಿ

ಅಯೋಧ್ಯಾ ಪುರದ ವಾನರರೆಲ್ಲಾ ಬಿಟ್ಟು

ಕೈ ಹಿಡಿದ ಪುರುಷನ ಬಿಟ್ಟು

ಸಕಲ ಸೌಭಾಗ್ಯ ಸಂಪತ್ತು ಎಲ್ಲವ ಬಿಟ್ಟು

ನೆನೆದಾಳು ಋಷಿಗಳಾಶ್ರಮವಾ (ಕೀ. ೬, ಸಂ೧೮/೧)

ಆಶ್ರಮಗಳಲ್ಲಿ ಸ್ವಲ್ಪಕಾಲ ಕಳೆಯುವುದಾಗಿ ರಾಮನಲ್ಲಿ ತಿಳಿಸುತ್ತಾಳೆ. ರಾಮ ಬೇಟೆಯಾದ ನಂತರ ಎಂದು ಹೇಳಿ ಲಕ್ಷ್ಮಣನೊಡನೆ ಬೇಟೆಗೆ ಹೋಗುವ ಸಂದರ್ಭ

ವಾಯುವೇಗ ಮನೋವೇಗವೆಂಬೋರಥ

ಏರಿದರು ರಾಮಲಕ್ಷ್ಮಣರು

ಜಾಣನೆಂಬೋ ಸೂರ‍್ಯತಾನೆ ರಥವನಡೆಸೆ

ಕೂಡ ಬೇಟೆಗೆ ತೆರಳಿದರು.

ಬೇಟೆಗೆ ಹೊರಟ ಲಕ್ಷ್ಮಣರ ಬೇಟೆಯ ವರ್ಣನೆ ದೀರ್ಘವಾಗಿ ಬಂದಿದ್ದು ಬೇಟೆಯಾಡಿ ದಣಿದ ರಾಮಮರದ ತಂಪಿನಲ್ಲಿ ಮಲಗಿದ್ದಾಗ, ಕಂಡ ದುಃಸ್ವಪ್ನವನ್ನು ಲಕ್ಷ್ಮಣನಿಗೆ ಹೇಳುತ್ತಾನೆ.

ಕಂದ ಲಕ್ಷ್ಮಣ ಕೇಳೋ ಇಂದೆನ್ನಸೊಪ್ನದಲಿ

ಬಂದಿಹಳೊಬ್ಬ ತಾಟಕಿಯೂ

ಇಂದು ವಂದನೆಮುಡಿ ಪಿಡಿದಳವೋ ದುಕಂಡೆ

ತುಂಡರಾವಣ ಕುಯೋದು ಕಂಡೆ

ಇಂದು ನೀ ಸೀತೆಯ ಕರೆದೊಯಿದು ಕಾನನದಿ

ದಿಂಜಾರಳಿಸೋದು ಕಂಡೆ

ಎಂದು ಸೀತೆಯ ಪ್ರತಿ ವ್ಯಾಕುಲಗೊಂಡ ರಾಮ. ಬೇಟೆಯಾಡುವುದನ್ನು ಬಿಟ್ಟು ಅಯೋಧ್ಯೆಗೆ ಹೊರಡಲು ಸಿದ್ಧನಾಗುತ್ತಾನೆ. ಇತ್ತ ತಾಟಕಿ ಕೊರವಿಯ ವೇಷಧರಿಸಿ ಅಯೋಧ್ಯೆಗೆ ಬರುತ್ತಾಳೆ. ಸೀತೆಯಲ್ಲಿಗೆ ಬಂದು ನಾಗಸಂಪಿಗೆಯ ಹೂವನ್ನು ಮುಡಿ ಎಂದು ನೀಡಿದಾಗ ಸೀತೆಗೆ ಸಂದೇಹ ಬಂದು

ದಾವ ದೇಶ ನೀವು ಏನು ಕಾರಣ ಬಂದಿ

ಈ ನಾಡ ಗರತಿ ನೀನಲ್ಲ

ದಾವದು ಸ್ಥಳಕುಲ ದಾರು ಬಂಧುಗಳುಂಟು

ದಾರ ಬಳಿಗೆ ನೀ ಬಂದೀ

ಎಂದೆಲ್ಲಾ ವಿಚಾರಿಸಿದಾಗ

ಈರೇಳು ಲೋಕವ ಸುತ್ತಿ ತಿರುಗಿ ಬಂದೆ

ನಾಗಲೋಕಕ್ಕೆ ಬಾಹೆಂದು

ನಾಗಲೋಕದಿಂದ ದೇವಲೋಕಕ್ಕೆ ಬಂದೆ

ದೇವಿಗೆ ಕಾಣಿಕೆ ತಂದೇ

ಎಂದು ಕೊರವಿ ವೇಷದಲ್ಲಿದ್ದ ತಾಟಕಿ ಹೇಳುತ್ತಾಳೆ

ಹೊನ್ನು ಹಣವನೀವೆ ಅಸ್ತ್ರವಸ್ತ್ರವನೀವೆ

ಇನ್ನು ನೀವಲಿದದ್ದು ಈವೆ !

ಇನ್ನು ನೀವಲಿದ್ದು ಚೆನ್ನಾಗಿ ಕೊಡುವೆನು

ಬಿನ್ನವಿಸೆ ಗರತಿ ನೀ ಅಂದ್ಲೂ

ಚಿನ್ನ ಅನ್ನ ಬಟ್ಟೆ ಎಲಾ ಕೊಡುವುದಾಗಿ ಸೀತೆ ಹೇಳಿದಾಗ

ಹೊನ್ನು ಹಣವನೊಲ್ಲೆ ಅನ್ನವಸ್ತ್ರವನೊಲ್ಲೆ

ನಿನ್ನ ಭಾಗ್ಯವು ನಾನೊಲ್ಲೆ !

ಮುನ್ನಿನ ಅಸುರ ರೂಪ ಇನ್ನು ನೀ ಬರೆದರೆ

ಚೆನ್ನಾಗಿ ಹರಣ ಹೊರುವೆನು (ಕೀ ೬ ಸಂ.೨/೧)

ಎಂದು 'ರಾವಣ'ನ ಚಿತ್ರ ಬರೆಯಲು ಒತ್ತಾಯಿಸುತ್ತಾಳೆ. ಸೀತೆ ನಿರಾಕರಿಸಲು ಭಸ್ಮವನ್ನು ತೊಡೆದು ಅವಳನ್ನು ವಶೀಕರಿಸಿಕೊಳ್ಳುತ್ತಾಳೆ. ಆಗ ಸೀತೆ ವನವಾಸ ಕಾಲದಲ್ಲಿ ಸೀತಾಪಹರಣಕ್ಕೆ ಬಂದಿದ್ದ ರಾವಣನ ಉಂಗುಷ್ಠವನ್ನು ಮಾತ್ರ ಕಂಡು ಬಲ್ಲೆ ಎಂದು ಹೇಳುತ್ತಾಳೆ ಅದಕ್ಕೆ ಕೊರವಂಜಿ ವೇಷದಲ್ಲಿದ್ದ ತಾಟಕಿಯು

ಉಂಗುಷ್ಠದಂದಕ್ಕೆ ಮುಂದೆ ಪಾದವ ಬರಿ

ಹಿಂದೆ ಹಿಂಬುಡ ಮೊಣಕಾಲು !

ಚಂದಾದ ನಡುದೊಡಿ ಎದೆ ಭುಜವ ಇದ

ಹೊಂದಿಸಿ ಬರೆ ಎಂದಳವಳು (ಕೀ ೬ ಸಂ ೮/೧)

ಎಂದೆಲ್ಲಾ ಹೇಳುತ್ತಾ ಕಾಗದ ಲೇಖನ ಕೊಟ್ಟು ಸೀತೆಗೆ ರಾವಣನ ರೂಪ ಬರೆಯಲು ಹೇಳುತ್ತಾಳೆ.

ಒಂದು ಕಾಯಕೆ ಹತ್ತು ಸಿರಗಳ ಬರೆದಳು

ಮುಂದೆರಡು ಪಾದವ ಬರೆದಳು

ಒಂದರ ಹಿಂದೊಂದು ವರ್ಣಿಸಿ ಬರೆದಳು

ತಂದು ನಿಲಿಸಿದಳು ರಾವಣನಾ ! (ಕೀ ೬ ಸಂ.೮/೧)

ಸೀತೆ ಬರೆದ ರಾವಣನ ಪಟವು ಅಳಿಯದ ಹಾಗೆ ವರಕೊಡು ಎಂದು ಕೊರವಿ ಒತ್ತಾಯಿಸಿದಾಗ

ಅಳಿದು ಉಳಿಯದಿರು ಉಳಿದು ನೀ ಕೆಡದಿರು

ಧರಿಯವಳಗೆ ಅಡಗದಿರು !

ಕಿರಿಯ ಲಕ್ಷ್ಮಣ ದೇವ ಹೊಡೆದರೆ ಮಡಿ ಎಂದು

ವರವಕೊಟ್ಟಳು ಸೀತೆ ಪಠಕೆ

ಆಗ ಕೊರವಿಯು ಪಟವನ್ನು ಆಕಾಶಕ್ಕೆ ಹಾರಿಸಿ ತಾನೂ ಗಗನದಲ್ಲಿ ಮರೆಯಾಗುತ್ತಾಳೆ. ಗಗನದಲ್ಲಿ ಹಾರಿದ್ದ ಪಟವು ಸೀತೆ ಒರಗಿದ್ದ ಮಂಚನ ಕೆಳಗೆ ಬಂದು ಒರಗುತ್ತದೆ. ವರಕೊಟ್ಟ ನಂತರ ಕೊರವಿಯ ವಶೀಕರಣದಿಂದ ಮುಕ್ತಳಾದ ಸೀತೆಯು ನಡೆದ ವಿಷಯವನ್ನೆಲ್ಲವನ್ನರಿತು ಚಿಂತಿತಳಾಗುತ್ತಾಳೆ.

ಅಂದಾರೆ ಜಾನಕಿ ಅಂಜಿಥರೆಗೆಳಿದಾಳು

ಕಂಗೆಟ್ಟು ನಡುಗಿದಳೊಳಗೇ!

ಇಂದು ರಾಮರ ಕೈಲಿ ಅಳಿವೆನೊವುಳಿವೆನೋ

ಇಂದು ಗೆದ್ದರೆ ಮುಂದೆ ಜಯವೂ

ಎಂದು ಅಂಜುತ್ತಾ ಅಳುಕುತ್ತಾ ಬೇಟೆಯಿದ ಮರುಳಿದ ರಾಮನಲ್ಲಿ ಬರುತ್ತಾಳೆ. ಇಲ್ಲಿ ಭಕ್ಷ್ಯಭೋಜ್ಯಗಳ ವರ್ಣನೆ ಬಾಯಿಗೆ ರುಚಿ ತರೆಸುವಂತೆ ಚಿತ್ರಿತವಾಗಿದ್ದು. ಊಟದ ವೇಳೆ ಸೀತೆಗೆ ಊಟ ಸೇರುವುದಿಲ್ಲ. ಊಟದ ನಂತರ ಬಂದು ರಾಮ ಮಂಚದ ಮೇಲೆ ಕುಳಿತಾಕ್ಷಣ ಮಂಚ ಎರಡು ತುಂಡಾಗುತ್ತದೆ. ತಂದಿಯ ಕಾಲದ ಹಿಂದೊಡ್ಡ ಸಿಂಹಾಸನ ತುಂಡಾದವರೆರಡು ಭಾಗದಲ್ಲಿ ಕಾರಣವೆನೆನುತ ಶ್ರೀರಾಮ ಹಾಸುಗೆ ತೆಗೆದಾಗ

ಹಾಸುಕೆ ತೆಗೆಯಲು ಹತ್ತು ತಲೆಯ ಕಂಡು
ಆಶ್ಚರ್ಯ ಪಟ್ಟು ನಸುನಕ್ಕು
ಏಸುದಿವಸ ಗಾಸಿಯಗಿ ಬರೆದೆ ಇವನ
ಏಸು ದಿವಸ ಭೋಗಿಸಿದ

ಮೋಸ ಮಾಡಿದೆ ಸೀತೆ ಎನಕೂಡ ಹೇಳದೆ
ಘಾತವಾಯಿತು ದೇವಿ ಎಂದ
ಇಂದು ನಿನ್ನ ಪ್ರಿಯನು ಎಂಬೋದುಂಟಾದರೆ
ಹೊಂದಿಸಿ ಬಿಡುವೆನಿಬ್ಬರನು

ಎಂದು ರಾಮ ಸೀತೆಯನ್ನು ಕೇಳುತ್ತಾನೆ. "ಹೆಂಗಸು ಹೆಡತಾಲಿರ್ಮಿಕ್ತು ಎಂಬೋದು ಜನರು ಇಂದು ಕಂಡೆ ಸಾದೃಸ್ಯವ" ಎನ್ನುತ್ತಾನೆ ಶ್ರೀರಾಮ ನೊಂದ ರಾಮನ ಮಾತುಗಳನ್ನು ಕೇಳಿ ಸೀತೆಯು ನಡೆದ ವೃತ್ತಾಂತವನ್ನು ಪರಿಪರಿಯಾಗಿ ತಿಳಿಸಿ ಹೇಳಲು ಯತ್ನಿಸುತ್ತಾಳೆ.

ತಾಟಗಿತ್ತಿ ಬಂದು ಪಾಪಕೆ ಪಠ ಬರೆದು
ನೂಕಿಬಿಟ್ಟಳು ಎನ್ನ ಮೇಲೆ
ಬಂದ ಮಾರಿ ಒಲ್ಲೆನೆಂದರೆ ಬಿಡುವುದೇ
ಇದು ನನ್ನ ವಿಧಿ ಕಾಡಲಾಗಿ

ಎಂದು ತನ್ನ ಹಣೆಬರಹ ಹಲುಬಿದ ಸೀತೆಯನ್ನು ರಾಮ ತ್ಯಜಿಸುತ್ತಾನೆ. ವಾಲ್ಮೀಕಿ ರಾಮಾಯಣದ ರಾಮ ತಾನು ಪ್ರಜೆಗಳಲ್ಲಿ ಸೀತೆಯ ಪ್ರತಿ ನಿಂದಾ ಮಾತುಗಳನ್ನು ಕೇಳಿ ಸೀತೆಯನ್ನು ತ್ಯಜಿಸುತ್ತಾನೆ. ಆದರೆ ಜನಪದರು ಅಷ್ಟಕ್ಕೆ ರಾಮ ಸೀತೆಯನ್ನು ಕಾಡಿಗೆ ಅಟ್ಟಿದ್ದನ್ನು ನಂಬದೆ ಇದಕ್ಕೆ ಬೇರೆಯೇ ಬಲವಾದ ಕಾರಣ ಇರಬಹುದೆಂದು ಕಲ್ಪಿಸಿ ಸೀತೆ ಬರೆದ ಪಟದ ಪ್ರಸಂಗದ ಜೊತೆ ವಿಧಿಯ ಕರಾಳ ಛಾಯೆಯಿಂದ ರಾಮ ಸೀತೆಯ ಶೀಲವನ್ನು ಶಂಕಿಸುವಂತಾಯಿತು ಎಂದು ಸಮರ್ಥಿಸುತ್ತಾರೆ.

ಮುಂದೆ ಸೀತಾ ಪರಿತ್ಯಾಗದ ನಂತರ ಲವಕುಶರ ಜನನ ಭರತ ಲಕ್ಷ್ಮಣರೊಂದಿಗೆ ಕಾಳಗ ಬಂದಿದ್ದು ಕೊನೆಯಲ್ಲಿ ಸುಖಾಂತವಾಗಿ ಈ ಕೃತಿಯನ್ನು ಗಿರಿಯಮ್ಮ ಮುಕ್ತಾಯಗೊಳಿಸಿದ್ದಾರೆ.

ಹರಿದಾಸರು ಹನುಮನ ವರ್ಣನೆ ಬಂದಾಗಲೆಲ್ಲಾ ದಾಸರಿಗಾಗುವ ಉತ್ಸಾಹ, ಆನಂದ ಅಪ್ಪಿಷ್ಟಲ್ಲ. ಬಹುಶಃ ದಾಸರು ರಾಮಾಯಣಕ್ಕೆ ಮಹತ್ವ ನೀಡಿರುವುದು ಹನುಮನಿಂದಲೇ ಎನ್ನಬಹುದು. ಸೀತೆಯ ವಿಚಾರವಾಗಿ ಆಕೆಗಾದ ಅನ್ಯಾಯವನ್ನು ಕಂಡು ಮರುಗಿದ ಮಹಿಳಾ ಕೀರ್ತನಾಕಾರರು ಆಕೆಯ ಪ್ರತಿ ಮರುಕಗೊಂಡು ಸ್ತ್ರೀಭಾವನೆಯಿಂದ ಸ್ತ್ರೀಪರ ರಚನೆ ಅವರ ಕೀರ್ತನೆಗಳಲ್ಲಿ ಕಾಣಬಹುದು. ಸೀತಾಕಲ್ಯಾಣದ ಸೀತೆ ಲಜ್ಜೆಯಿಂದ ಕೂಡಿರುವ ನವವಧುವಾಗಿ ಚಿತ್ರಿತಳಾಗಿದ್ದರೆ, ಲವಕುಶ ಕಾಳಗದ ಸೀತೆ ಬದುಕಿನ ಕಷ್ಟಗಳನ್ನು ಅನುಭವಿಸಿ ಎರಡು ಮಕ್ಕಳ ಪ್ರೌಢ ಮಹಿಳೆಯಾಗಿ ಚಿತ್ರಿತಳಾಗಿದ್ದಾಳೆ.

ರಾಮಾಯಣದ ಕಥಾನಕಗಳನ್ನು ಇಂದಿನವರೆಗೂ ಜನರ ನಾಲಿಗೆಯ ಮೇಲೆ ನಲಿದಾಡುವಂತೆ ಮಾಡಿರುವುದು ದಾಸರ ಕಥನ ತಂತ್ರ ಹಾಗೂ ಕಾವ್ಯ ಕೌಶಲ ಎನ್ನುವುದರಲ್ಲಿ ಸಂದೇಹವಿಲ್ಲ. ಅವರು ರಾಮಾಯಣದ ಸನ್ನಿವೇಶಗಳನ್ನು ಮೂಲ ಸನ್ನಿವೇಶಗಳಿಗಿಂತ ಸುಂದರವಾಗಿ ಕೆಲವು ಸ್ವಕಲ್ಪಿತ ಅಂಶಗಳನ್ನು ಅಳವಡಿಸಿಕೊಂಡಿದ್ದಾರೆ. ಭಕ್ತಹೃದಯವಿರುವ ಹರಿದಾಸರಲ್ಲಿ ಕವಿ ಪ್ರತಿಭೆಯನ್ನು ಇವರ ರಚನೆಗಳಲ್ಲಿ ಕಾಣಬಹುದು. ಸಹೃದಯರಿಗೆ ರಸದೌತಣವಾಗುವಂತೆ ಮಾಡಿದವರು ಹರಿದಾಸರು.

ಅಡಿ ಟಿಪ್ಪಣಿ

೧. ಪುರಂದರ ಸಾಹಿತ್ಯ ದರ್ಶನ : (ಸಂ) ಪ್ರೊ.ಎಸ್.ಕೆ.ರಾಮಚಂದ್ರರಾವ್, ಸಂಪುಟ-೨.

೨. ಸಮಗ್ರ ದಾಸಸಾಹಿತ್ಯ ಸಂಪುಟಗಳು : ಸಂಪುಟ-೨೦, ಜಕ್ಕಪ್ಪಯ್ಯನವರ ಕೀರ್ತನೆಗಳು. ದೀರ್ಘಕೀರ್ತನೆ 'ಅ'ರ ಮುನ್ನುಡಿ, ಪುಟ-೩೧

೩. ಹರಿದಾಸ ಸಾಹಿತ್ಯಸಾರ : ಜಿ. ವರದರಾಜ್, ಪುಟ, ೨೩೩

ಸಮಾರೋಪ

ಹರಿದಾಸ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಶ್ರೀಕೃಷ್ಣ ಭಕ್ತಿಗೆ ಸಂಬಂಧಪಟ್ಟ ಹಲವಾರು ಕೃತಿ, ವಿಮರ್ಶೆ ಸಂಶೋಧನಾ ಗ್ರಂಥಗಳು ಬಂದಿವೆ ಆದರೆ ಅದೇ ಹರಿದಾಸರು ಹಾಡಿರುವ ರಾಮನ ಬಗೆಗೆ ಆತನ ಪ್ರತಿ ವ್ಯಕ್ತ ಪಡಿಸಿರುವ ಭಕ್ತಿಯಾಗಲೀ ರಾಮಾಯಣದ ಬಗ್ಗೆಯಾಗಲೀ ಕನ್ನಡ ಸಾಹಿತ್ಯದಲ್ಲಿ ಒಂದೆರಡು ಲೇಖನಗಳು ಬಂದಿವೆಯೇ ಹೊರತು ರಾಮಾಯಣದ ಪ್ರಸಂಗಗಳಿಗೆ ಮೀಸಲಾಗಿಟ್ಟಿರುವ ಸಂಪೂರ್ಣ ಸಂಶೋಧನ ಪ್ರಬಂಧ ಕೃತಿ ಬಂದಿಲ್ಲ. ಈ ದಿಸೆಯಲ್ಲಿ ಇದು ಪ್ರಥಮ ಪ್ರಯತ್ನ ಎನ್ನಬಹುದು.

ಈ ಅಧ್ಯಯನ ಪ್ರಬಂಧದಲ್ಲಿ ಶ್ರೀ ಮದ್ವಾಲ್ಮೀಕಿ ವಿರಚಿತ ರಾಮಾಯಣಕ್ಕೂ ಹರಿದಾಸರ ಮೂಲ ಗುರು ಎಂದು ನಂಬಲಾಗುವ ಶ್ರೀ ಮದಾಚಾರ್ಯರ ಮಧ್ವರಾಮಾಯಣದಲ್ಲಿನ ಪ್ರಸಂಗಗಳಲ್ಲಿ ಕಂಡುಬರುವ ವ್ಯತ್ಯಾಸಗಳಿಗೆ ಕಾರಣ ಮತ್ತು ಮೂಲ ಉದ್ದೇಶವನ್ನು ಚರ್ಚಿಸಲಾಗಿದೆ. ಜೊತೆಗೆ ವಾಲ್ಮೀಕಿ ರಾಮಾಯಣ ಮತ್ತು ಹರಿದಾಸರ ಕೀರ್ತನೆಗಳಲ್ಲಿ ಕಂಡುಬರುವ ರಾಮಾಯಣದ ಪ್ರಮುಖ ಪ್ರಸಂಗಗಳ ಮಾರ್ಪಾಡಿಗೆ ಕಾರಣ ನೀಡಲಾಗಿದ್ದು ಅದರಲ್ಲಿ ಶ್ರೀ ರಾಮ ಜನನದ ವೇಳೆ ಕೌಸಲ್ಯೆಯ ಅಂಗಾಂಗಗಳಲ್ಲಾದ ಪರಿವರ್ತನೆಯನ್ನು ಅಹಲ್ಯೆಯು ತನಗೊದಗಿದ ಪಾಡನ್ನು ನೆನೆದು ಆಲಾಪಿಸಿದ ರೀತಿ ಸೀತೆ ತನ್ನ ಸ್ವಯಂವರಕ್ಕೆ ಶೃಂಗಾರಗೊಂಡ ಬಗೆ, ಲಕ್ಷ್ಮಣನ ಮೂಲಕ ಸೀತೆಯ ಸೌಂದರ್ಯವರ್ಣನೆ ರಾವಣ ಸೀತಾಸ್ವಯಂವರಕ್ಕೆ ಬಂದಿದ್ದನೆಂಬ ಹೊಸ ಅಂಶಗಳಿಂದ ಕೂಡಿದ ಪ್ರಸಂಗಗಳ ಸಂಕ್ಷಿಪ್ತ ವಿವೇಚನೆ ಇಲ್ಲಿ ಮಾಡಲಾಗಿದೆ.

ರಾಧೆ ಹಿಂದಿನ ಜನ್ಮದಲ್ಲಿ ಶೂರ್ಪಣಖಿಯಾಗಿದ್ದು ಶೂರ್ಪಣಖಿ ಹರಿಭಕ್ತಳಾಗಿ ತಪಸ್ಸಿನ ಬಲದಿಂದ ಶ್ರೀ ಕೃಷ್ಣನ ಪ್ರೇಯಸಿಯಾದಳೆಂಬ ದಾಸರ ಹೊಸ ಕಲ್ಪನೆಯನ್ನು ಸೀತಾಪಹರಣವಾದ ನಂತರ ರಾಮನ ವಿಲಾಪವನ್ನು ಸಂಕ್ಷಿಪ್ತವಾಗಿ ಅಭ್ಯಸಿಸಲಾಗಿದೆ. ಹನುಮಂತ ರಾಮನನ್ನು ಮೊದಲು ಪಂಪಾಟದಲ್ಲಿ ಕಂಡಾಗ ವ್ಯಕ್ತಪಡಿಸಿದ ಭಾವನೆ, ರಾಮ ಆತನ ಮಾತುಗಾರಿಕೆ ಮೆಚ್ಚಿ ಆಡಿದ ಪ್ರಶಂಸನೀಯ ಮಾತುಗಳು ವಾಲ್ಮೀಕಿ ರಾಮಾಯಣದಲ್ಲಿನ ಮಾತುಗಳಂತೆ ದಾಸರು ಚಿತ್ರಿಸಿರುವುದನ್ನು ಅವಲೋಕಿಸಲಾಗಿದೆ. ಶ್ರೀ ರಾಮನ ದುಷ್ಟ ಶಿಕ್ಷಕ, ಶಿಷ್ಟ ರಕ್ಷಕನೆಂಬ ಭಾವ ವ್ಯಕ್ತವಾಗುವ ಕೀರ್ತನೆಗಳಲ್ಲೆಲ್ಲಾ ಸುಗ್ರೀವ ಸಖ್ಯ, ವಾಲಿವಧೆ ಬಂದಿರುವುದನ್ನು ಇಲ್ಲಿ ಕಾಣಬಹುದು.

ಸುಂದರ ಕಾಂಡದ ಚಿತ್ರಣ ಸ್ವಲ್ಪ ವಿಸ್ತಾರವಾಗಿಯೂ ಇಲ್ಲಿ ಚರ್ಚಿಸಲಾಗಿದೆ. ಹನುಮನ ಸಾಹಸಗಳ ವರ್ಣನೆ ಹರಿದಾಸರು ಕಣ್ಣಿಗೆ ಕಟ್ಟುವಂತೆ ಸೊಗಸಾಗಿ ಚಿತ್ರಿಸಿದ್ದಾರೆ. ಇವರ ಈ ಚಿತ್ರಣವು ಮೂಲ ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವಾಗಿದ್ದು ಹಲವಾರು ಸನ್ನಿವೇಶಗಳು ಸ್ವಕಲ್ಪಿತವಾಗಿರುವುದನ್ನು ಇತರ

ರಾಮಾಯಣಗಳ ಪ್ರಭಾವ ಇವರ ಸಾಹಿತ್ಯ ರಚನೆಯ ಮೇಲಾಗಿರುವುದನ್ನು ಚರ್ಚಿಸಲಾಗಿದೆ. ಶ್ರೀ ರಾಮನಿಗೆ ಹರಿದಾಸರು ಕೊಟ್ಟಿರುವ ಮಹತ್ವಕ್ಕಿಂತ ಒಂದು ಪಟ್ಟು ಹೆಚ್ಚಾಗಿ ಆತನ ಪಾದಸೇವಕ ಹನುಮನಿಗೆ ಮಹತ್ವ ದೊರಕಿದೆ. ಶ್ರೀ ಹರಿ ಭಕ್ತಿಯೇ ಇವರ ಭಕ್ತಿಯ ಮೂಲ ಉದ್ದೇಶವಾದರೂ ಗುರುವಿನ ಮುಖಾಂತರ ದೇವನ ಸಾನಿಧ್ಯಪಡೆಯಬೇಕೆಂಬ ನಂಬಿಕೆಯಿಂದ ಮಧ್ವಪರಂಪರೆಯಲ್ಲಿ ಗುರುವಿನ ಸ್ಥಾನದಲ್ಲಿ ಹನುಮ ಭೀಮ ಮಧ್ವರು ನಿಲ್ಲುತ್ತಾರೆ.

ಸಾತ್ವಿಕರಾದ ಹರಿದಾಸರು ರಾಮಾಯಣದ ಯದ್ಧ ವರ್ಣನೆಯನ್ನು ಹೆಚ್ಚಾಗಿ ಎಲ್ಲಿಯೂ ನೀಡಿರುವುದಿಲ್ಲ ಕೆಲವೊಂದು ಕಡೆ ರಾಮನ ಪರಾಕ್ರಮ ಸಾಹಸ, ವರ್ಣಿತವಾಗುವ ಸಂದರ್ಭದಲ್ಲಿ ದಶಾವತಾರದ ಸ್ತುತಿಯಲ್ಲಿ ಕುಂಭಕರ್ಣ ರಾವಣವಧೆ ಪ್ರಸಂಗ ಬರುತ್ತದೆ. ಇಲ್ಲಿ ಇಂದ್ರಜಿತು ವಧು ಸುಲೋಚನಾ ಪ್ರಲಾಪವನ್ನು ರಾಮಾಯಣದ ಕಥಾಭಾಗವೆಂದೇ ಪರಿಗಣನೆಗೆ ತೆಗೆದುಕೊಂಡು ಈ ಕೃತಿಯನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಜಿ. ವರದರಾಜ್‌ರವರು "ಹರಿದಾಸ ಸಾಹಿತ್ಯ ಸಾರ" ಎಂಬ ಕೃತಿಯಲ್ಲಿ ಹರಿದಾಸರು ಉತ್ತರಕಾಂಡದ ಪ್ರಸಂಗಗಳನ್ನು ತಮ್ಮ ಕೀರ್ತನೆಗಳಲ್ಲಿ ಅಳವಡಿಸಿಕೊಂಡಿಲ್ಲ ಎಂದಿದ್ದಾರೆ. ಈ ಪ್ರಬಂಧದಲ್ಲಿ ಕನಕದಾಸರು ಪಹೊಳೆ ವೆಂಕಟೇಶದಾಸರು ಗುರುರಾಮ ವಿಠಲರು ಹೆಳವನಕಟ್ಟೆ ಗಿರಿಯಮ್ಮರವರು ಮತ್ತಿತ್ತರ ದಾಸರ ಕೀರ್ತನೆಗಳ ಮೂಲಕ ಹರಿದಾಸರು ಉತ್ತರ ಕಾಂಡದ ಪ್ರಸಂಗಗಳನ್ನು ಉಲ್ಲೇಖಿಸಿರುವುದಾಗಿ ಸಾಬೀತುಪಡಿಸಲಾಗಿದೆ.

ಒಟ್ಟಿನಲ್ಲಿ ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಪ್ರಸ್ತಾಪಿಸಿರುವ ರಾಮಾಯಣದ ಪ್ರಸಂಗಗಳ ಮೇಲೆ ಪ್ರಭಾವ ಬೀರಿರುವ ಅಂಶಗಳನ್ನು ರಾಮ, ಹನುಮಂತರ ಬಗ್ಗೆ ಇವರಲ್ಲಿರುವ ಅದಮ್ಯ ಭಕ್ತಿ ಅವರ ಕಲ್ಪನಾ ಸಾಮರ್ಥ್ಯವನ್ನು ತಿಳಿಯುವ ಪ್ರಯತ್ನ ಈ ಪ್ರಬಂದದಲ್ಲಿ ನಡೆದಿದೆ.

ಪರಾಮರ್ಶನ ಗ್ರಂಥಸೂಚಿ

೧. ಕನ್ನಡ ವಾಲ್ಮೀಕಿ ರಾಮಾಯಣ (ಸಂ೧-೨) — ಡಾ.ಸಿ.ಎನ್.ಶ್ರೀನಿವಾಸ ಅಯ್ಯಂಗಾರ್, ಡಿ.ವಿ.ಕೆ.ಮೂರ್ತಿ ಪ್ರಕಾಶನ. ೧೯೭೧

೨. ಕನ್ನಡ ಸಾಹಿತ್ಯ ಚರಿತ್ರೆ — ರಂ.ಶ್ರೀ. ಮುಗಳಿ, ಉಷಾ ಸಾಹಿತ್ಯ ಮಾಲೆ, ೧೯೬೦

೩. ಕರ್ಣಾಟಕದ ಹರಿದಾಸರ ಸಾಹಿತ್ಯ — ಆರ್.ಎಸ್.ಪಂಚಮುಖಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೬೫

೪. ಕರ್ನಾಟಕ ಭಕ್ತಿ ವಿಜಯ — ಬೇಲೂರು ಕೇಶವದಾಸರು, ಸುಬೋಧ ಪ್ರಕಟನಾಲಯ, ಬೆಂಗಳೂರು, ೧೯೬೩

೫. ಕರ್ನಾಟಕದ ಹರಿದಾಸರು — ಎಚ್.ಕೆ.ವೇದವ್ಯಾಸಾಚಾರ್ಯ, ಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರ, ನಂಜನಗೂಡು. ೧೯೬೫

೬. ಕೀರ್ತನಕಾರರು — ಎಚ್.ಎಸ್.ವೆಂಕಟೇಶಮೂರ್ತಿ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ೧೯೭೨

೭. ಕನ್ನಡ ಸಂಶೋಧನ ಪ್ರಬಂಧಗಳ ವರ್ಗೀಕೃತ ಸೂಚಿ — (ಸಂ) ಸಂಗಮೇಶ ಸವದತ್ತಿಮಠ ಮತ್ತು ಇತರರು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೯

೮. ದಾಸ ಸಾಹಿತ್ಯದಲ್ಲಿ ಜಾನಪದ ಅಂಶಗಳು – ಒಂದು ಅಧ್ಯಯನ — ಡಾ.ಆರ್.ಸುನಂದಮ್ಮ, ೧೯೯೪

೯. ದಾಸ ಸಾಹಿತ್ಯ ಮತ್ತು ಸಂಸ್ಕೃತಿ — ಪ್ರೊ.ಎಸ್.ಕೆ.ರಾಮಚಂದ್ರರಾವ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೧೦. ಪುರಾಣನಾಮ ಚೂಡಾಮಣಿ — ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರೀ
ಮೈಸೂರು ವಿಶ್ವವಿದ್ಯಾಲಯ. ೧೯೪೧

೧೧. ಪುರಂದರ ಸಾಹಿತ್ಯದರ್ಶನ(೪ ಸಂಪುಟಗಳು) — ಪ್ರೊ.ಎಸ್.ಕೆ.ರಾಮಚಂದ್ರರಾವ್
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು. ೧೯೮೫

೧೨. ಮಹಾಭಾರತ ತಾತ್ಪರ್ಯ ನಿರ್ಣಯ (ಅಧ್ಯಾಯ ೧-೯) — ಪ್ರೊ.ವ್ಯಾಸನಕೆರೆ ಪ್ರಭಂಜನಾಚಾರ್ಯ
ಅಖಿಲ ಭಾರತ ಮಾಧ್ವಮಹಾಮಂಡಲ
ಬೆಂಗಳೂರು. ೧೯೯೩

೧೩. ಮಾಧ್ವವಾಙ್ಮಯ ತಪಸ್ವಿಗಳು — ಪಂಡರೀನಾಥಾಚಾರ್ಯ ಗಲಗಲಿ
ತತ್ವವಾದ ಆಫೀಸ್, ಗದಗ
೧೯೬೯

೧೪. ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ — ಡಾ.ಬಸವರಾಜ ಕಲ್ಗುಡಿ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೯೮೮

೧೫. ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು ಒಂದು ತೌಲನಿಕ ಅಧ್ಯಯನ — ಡಾ.ಎಸ್.ವಿ.ಪ್ರಭಾವತಿ
ಸುಮುಖ ಪ್ರಕಾಶನ
೨೦೦೫

೧೬. ಶ್ರೀಮದ್ಭಾಗವತಂ — ಕೃಷ್ಣಮೂರ್ತಿ.ಎನ್.
ಆನಂದತೀರ್ಥ ಗ್ರಂಥ ಪ್ರಕಾಶನ
೧೯೮೨

೧೭. ಶ್ರೀಮದ್ಭಾಗವತ ದಶಮಸ್ಕಂದ ಪೂರ್ವಾರ್ಧ — ಎಸ್.ರಂಗನಾಥ ಶರ್ಮ
ರಾಮಾಯಣ ಪ್ರಕಾಶನ ಸಮಿತಿ
ಬೆಂಗಳೂರು. ೧೯೭೮

೧೮. ಶ್ರೀರಾಮದಾಸರ ಕೃತಿಗಳು — ಡಾ.ಟಿ.ಎನ್.ನಾಗರತ್ನ
ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾಲಯ. ೧೯೮೭

೧೯. ಶ್ರೀಕನಕದಾಸರ ಭಕ್ತಿಗೀತೆಗಳು — ಬೆಟಗೇರಿ ಕೃಷ್ಣಶರ್ಮ, ಹುಚ್ಚೂರಾವ್ ಬೆಂಗೇರಿ, ಸಮಾಜ ಪುಸ್ತಕಾಲಯ, ಧಾರವಾಡ ೧೯೬೫

೨೦. ಶ್ರೀಪುರಂದರದಾಸರು ರಚಿಸಿದ ಸಂಕ್ಷಿಪ್ತ ರಾಮಾಯಣ ಮತ್ತು ಕೆಲವು ಹಳೆಯ ಹಾಡುಗಳು — ಮತಿಘಟ್ಟ ಕೃಷ್ಣಮೂರ್ತಿ, ಶ್ರೀಗುರುಮೂರ್ತಿ ಪ್ರಕಾಶನ. ಬೆಂಗಳೂರು.

೨೧. ಶ್ರೀವಿಜಯದಾಸರು: ಜೀವನ ಮತ್ತು ಕೃತಿ ಸಮೀಕ್ಷೆ — ಡಾ.ಕೆ.ಗೋಕುಲನಾಥ್, ಸಿಂಧುಶಯನ ಪ್ರಕಾಶನ, ರಾಜಾಜಿನಗರ, ಬೆಂಗಳೂರು. ೧೯೭೮

೨೨. ಶ್ರೀಮದ್ವಾಲ್ಮೀಕಿ ರಾಮಾಯಣಂ (ಸಂಪುಟ ೧–೮) — (ಅನು) ರಂಗನಾಥಶರ್ಮ.ಎನ್., ಶ್ರೀರಾಮಾಯಣ ಪ್ರಕಟನ ಸಮಿತಿ, ಬೆಂಗಳೂರು.

೨೩. ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ (ಭಾಗ–೧) — ವಿದ್ವಾನ್ ಕೆ.ಹಯವದನ ಪುರಾಣಿಕ, ಅಖಿಲ ಭಾರತ ಮಾಧ್ವಮಹಾಮಂಡಲ, ಬೆಂಗಳೂರು. ೨೦೦೧

೨೪. ಶ್ರೀಮದ್ರಾಮಾಯಣ ಸಾರ ಮತ್ತು ಪಾತ್ರ ಚಿತ್ರಣ — ಶ್ರೀ. ವಿಶ್ವೇಶ್ವರತೀರ್ಥ ಶ್ರೀಪಾದರು, ಶ್ರೀ.ಶ್ರೀ.ಪೇಜಾವರ ಅಧೋಕ್ಷಜ ಮಠ, ಉಡುಪಿ. ೨೦೦೫

೨೫. ಸಮಗ್ರ ದಾಸ ಸಾಹಿತ್ಯ ಸಂಪುಟಗಳು — ವಿವಿಧ ಲೇಖಕರು ಮತ್ತು ಸಂಪಾದಕ ಮಂಡಳಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ೨೦೦೩

೨೬. ಸುಳಾದಿಗಳು–ಒಂದು ಅಧ್ಯಯನ — ಡಾ.ಶೀಲಾದಾಸ್, ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಮಂತ್ರಾಲಯ. ೨೦೦೫

೨೭. ಸೀತಾ ಪರಿತ್ಯಾಗ ಪ್ರಸಂಗ — ಎ.ಎನ್.ಮೂರ್ತಿರಾವ್, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ೧೯೭೭

೨೮. ಹರಿದಾಸ ಸಾಹಿತ್ಯಸಾರ	ಜಿ.ವರದರಾಜರಾವ್ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರುವಿಶ್ವವಿದ್ಯಾಲಯ. ೧೯೮೭
೨೯. ಹರಿದಾಸ ಸಾಹಿತ್ಯ : ಪ್ರೇರಣೆ–ಉಗಮ– ಸಾಧನೆ–ಸಿದ್ಧಿ	ಡಾ.ಟಿ.ಎನ್.ನಾಗರತ್ನ ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ ೧೯೯೪
೩೦. ಹರಿದಾಸ ಸಾಹಿತ್ಯ	ಬೇಲೂರು ಕೇಶವದಾಸರು ಹರಿಮಂದಿರ, ವಾಣಿವಿಲಾಸ ಮೊಹಲ್ಲಾ ಮೈಸೂರು. ೧೯೪೪
೩೧. ಹರಿದಾಸರ ಕಥೆಗಳು	ಕಮಲದಾನಿ ಗುರುರಾಯರು ಸಿಟಿ ಬುಕ್ ಸ್ಟಾಲ್, ಹುಬ್ಬಳ್ಳಿ ೧೯೫೯
೩೨. ಹರಿದಾಸ ವಾಙ್ಮಯ ಪ್ರಬಂಧ ಸಂಕಲನ	ಟಿ.ಎನ್. ನಾಗರತ್ನ ಗಾನಭಾರತೀ, ಕುವೆಂಪುನಗರ, ಮೈಸೂರು ೧೯೮೫
೩೩. ಹರಪನಹಳ್ಳಿ ಭೀಮವ್ವನ ಹಾಡುಗಳು	ಟಿ.ಎನ್. ನಾಗರತ್ನ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು. ೧೯೮೪
೩೪. ಹರಿದಾಸರ ಭಕ್ತಿ ಸ್ವರೂಪ	ಟಿ.ಎನ್.ನಾಗರತ್ನ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು. ೧೯೬೫
೩೫. ಹರಿದಾಸ ಸಾಹಿತ್ಯ ಮತ್ತು ಅದರ ಪ್ರವರ್ತಕರು	ಆನಂದ ಕೊರಟ ಆನಂದನಿಲಯ ಪ್ರಕಾಶನ ೨೦೦೫
೩೬. ಹನುಮ ಭೀಮ ಮಧ್ವ ಚರಿತಾಮೃತ	ಮೈ.ಹ.ರಘೋತ್ತಮತೀರ್ಥ ದಿ। ಭಾರತೀಬಾಯಿ ಸ್ಮಾರಕ ಗ್ರಂಥಮಾಲೆ ಮೈಸೂರು. ೨೦೦೦

೩೭. ಹರಿದಾಸ ಸಾಹಿತ್ಯದ ವಿಷಯದರ್ಶನ (ಸಮಗ್ರದಾಸ ಸಾಹಿತ್ಯದ ಸೂಚಿ)	(ಸಂ) ಶ್ರೀನಿವಾಸ ಹಾವನೂರ (ಅಪ್ರಕಟಿತ)
೩೮. ೧೯ನೇ ಶತಮಾನದ ಹರಿದಾಸರ ಕನ್ನಡ ಸಾಹಿತ್ಯ	ಅನಂತಪದ್ಮನಾಭರಾವ್ ಸಿ.ವಿ.ಜಿ.ಪಬ್ಲಿಕೇಷನ್. ಬೆಂಗಳೂರು ೧೯೮೯.